

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 23 ಶನಿವಾರ 2022

ಸಂಪುಟ: 43 | ಸಂಚಿಕೆ: 08 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಬಿಜೆಪಿ ಟಾರ್ಗೆಟ್ '150'

ರಾಜನಾಥ್‌ಸಿಂಗ್ ಸಂದೇಶ: ಸಿಎಂ ಬೊಮ್ಮಾಯಿ ಅಲರ್ಟ್!



- ರಾಜ್ಯ ಬಿಜೆಪಿ ವಲಯದಲ್ಲಿ ತಲ್ಲಣ ಉಂಟು ಮಾಡಿರುವ ಸಿಎಂಗೆ ರಕ್ಷಣಾ ಸಚಿವರ ಸಂದೇಶ!?
- ತ್ವರಿತ ಕಡತ ವಿಲೇವಾರಿಗೆ ತಮ್ಮ ಸಚಿವಾಲಯಕ್ಕೆ ಸೂಚಿಸಿದ ಸಿಎಂ ಬಸವರಾಜ ಬೊಮ್ಮಾಯಿ
- ಬ್ರಿಟನ್ ಪ್ರಧಾನಿ ವಾಪಸಾಗುತ್ತಿದ್ದಂತೆ ಏ.27ಕ್ಕೆ ದೆಹಲಿಗೆ ಮುಖ್ಯಮಂತ್ರಿ ಭೇಟಿ ನಿಗದಿ
- ಕಟೀಲ್ ಸ್ಥಾನಕ್ಕೆ ಶೋಭಾ ಕರಂದ್ಲಾಜೆ ಇಲ್ಲವೇ ಡಾ.ಅಶ್ವತ್ಥನಾರಾಯಣ ನೇಮಕ ಸಾಧ್ಯತೆ


ಬೆಂಗಳೂರು, ಏ.22 (ಕೆಎಂಶಿ)– ಪ್ರವಾಸದಲ್ಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ದೂರವಾಣಿ ಮೂಲಕ ಸಂಪರ್ಕಿಸಿ, ನೀಡಿರುವ ಸಂದೇಶ ರಾಜ್ಯ ಬಿಜೆಪಿಯಲ್ಲಿ ವ್ಯಾಪಕ ಚರ್ಚೆಗೆ ಎಡೆಮಾಡಿದೆ. ರಾಜನಾಥ್‌ಸಿಂಗ್ ಅವರಿಂದ ಸಂದೇಶ ದೊರೆಯುತ್ತಿದ್ದಂತೆ ಮುಖ್ಯಮಂತ್ರಿಯವರು ನಾಳೆಯಿಂದ ತಮ್ಮ ಸಚಿವಾಲಯದಲ್ಲಿ ಕಡತಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಅಷ್ಟೇ ಅಲ್ಲ, ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ರಾಷ್ಟ್ರಕ್ಕೆ ಭೇಟಿ ನೀಡಿದ್ದು, ಅವರು ಹಿಂತಿರುಗುತ್ತಿದ್ದಂತೆ ಬೊಮ್ಮಾಯಿ ಅವರು ಇದೇ 27 ರಂದು ದೆಹಲಿಗೆ ತೆರಳಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. 2023 ರ ಏಪ್ರಿಲ್–ಮೇನಲ್ಲಿ ಜರುಗಲಿರುವ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಲು ಬಿಜೆಪಿ 150 ಗುರಿ ಇಟ್ಟುಕೊಂಡು ಆಡಳಿತ ಮತ್ತು ಪಕ್ಷದಲ್ಲಿ ಮಹತ್ತರ ಬದಲಾವಣೆಗೆ ಮುಂದಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ, ಆರ್.ಎಸ್.ಎಸ್.ನ ಹಿರಿಯ ಮುಖಂಡ ದತ್ತಾತ್ರೆಯ ಹೊಸಬಾಳೆ, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಅರುಣ್ ಅವರು ದೆಹಲಿಯಲ್ಲಿ ಸಭೆ ಸೇರಿ ರಾಜ್ಯ ರಾಜಕೀಯದ ಬಗ್ಗೆ ಚರ್ಚೆ ಮಾಡಿ, ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ರೂಪುರೇಷೆಗಳನ್ನು ಸಿದ್ಧಪಡಿಸಿದ್ದಾರೆ.

ಬೊಮ್ಮಾಯಿ ಆಡಳಿತ ಹಾಗೂ ನಳಿನ್‌ಕುಮಾರ್ ಕಟೀಲ್ ಅವರ ಅಧ್ಯಕ್ಷತೆಯಲ್ಲಿ ಪಕ್ಷಕ್ಕೆ ನಿರೀಕ್ಷಿಸಿದ ವರ್ಚಸ್ಸು ದೊರೆತಿಲ್ಲ. ಇವರ ನಾಯಕತ್ವದಲ್ಲಿ ಮುಂಬರುವ ಚುನಾವಣೆ ಎದುರಿಸಿದರೆ, ನಮ್ಮ ಗುರಿ ಮುಟ್ಟುವುದಿಲ್ಲ ಎಂಬ ಕಾರಣಕ್ಕೆ ಪಕ್ಷ ಮತ್ತು ಸರ್ಕಾರದಲ್ಲಿ ಬದಲಾವಣೆ ಮಾಡುವ ತೀರ್ಮಾನವನ್ನು ಕೈಗೊಂಡಿದ್ದಾರೆ.

ಬದಲಾವಣೆ ಮಾಡಿದರೆ ಪರ್ಯಾಯ ನಾಯಕತ್ವದ ತೀರ್ಮಾನವನ್ನು ಪ್ರಧಾನಿಯವರಿಗೆ ಈ ಸಭೆ ನೀಡಿದ



ಬೆನ್ನಲ್ಲೆ ರಾಜನಾಥ್ ಸಿಂಗ್ ಮುಖ್ಯಮಂತ್ರಿಯವರನ್ನು ಸಂಪರ್ಕಿಸಿ ಮಾತನಾಡಿರುವುದು ಚರ್ಚೆಗೆ ಎಡೆಮಾಡಿದೆ. ಉಭಯ ನಾಯಕರು ಏನು ಮಾತನಾಡಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಆದರೆ ದೆಹಲಿ ಸಭೆಯ ವೈಖರಿಯನ್ನು ಗಮನಿಸಿದರೆ ಬೊಮ್ಮಾಯಿ ಅವರ ಬದಲಾವಣೆ ಬಹುತೇಕ ಖಚಿತ ಎಂದು ಪಕ್ಷದ ಆಂತರಿಕ ವಲಯದಲ್ಲಿ ಚರ್ಚೆ ನಡೆದಿದೆ. ಇದೇ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವಧಿಯು ಜೂನ್–ಜುಲೈಗೆ ಮುಗಿಯಲಿದ್ದು, ಅದಕ್ಕೂ ●8ನೇ ಪುಟಕ್ಕೆ

ದ್ವಿತೀಯ ಪಿಯುಸಿ ಪರೀಕ್ಷೆ ಪ್ರಾರಂಭ

ಮೊದಲ ದಿನ ಸುಗಮವಾಗಿ ನಡೆದ ವ್ಯವಹಾರ ಅಧ್ಯಯನ ಪರೀಕ್ಷೆಗೆ 12,489ರ ಪೈಕಿ 543 ವಿದ್ಯಾರ್ಥಿಗಳು ಗೈರು



ಮೈಸೂರು, ಏ.22(ಆರ್‌ಕೆ)– ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಗಳು ರಾಜ್ಯಾದ್ಯಂತ ಇಂದಿನಿಂದ ಆರಂಭವಾದವು. ಮೊದಲ ದಿನವಾದ ಇಂದು ನಡೆದ ವ್ಯವಹಾರ ಅಧ್ಯಯನ ವಿಷಯದ ಪರೀಕ್ಷೆಗೆ 12,489 ಮಂದಿ ಪೈಕಿ 11,946 ಮಂದಿ ಹಾಜರಾಗಿದ್ದು, 543 ಮಂದಿ ಗೈರು ಹಾಜರಾದರು ಎಂದು ಡಿಡಿಪಿಯು ಶ್ರೀನಿವಾಸಮೂರ್ತಿ ತಿಳಿಸಿದರು.

ಮೈಸೂರು ನಗರದ 26 ಸೇರಿ ಜಿಲ್ಲೆಯಾದ್ಯಂತ 50 ಕೇಂದ್ರಗಳಲ್ಲಿ ಇಂದು ಯಾವುದೇ ಗೊಂದಲವಿಲ್ಲದೇ ಸುಸೂತ್ರವಾಗಿ ಪರೀಕ್ಷೆ ನಡೆಯಿತು. ಪ್ರವೇಶ ದ್ವಾರದಲ್ಲಿ ವಿದ್ಯಾರ್ಥಿಗಳಿಗೆ ಥರ್ಮಲ್ ಸ್ಕ್ಯಾನಿಂಗ್ ಮಾಡಿ ಸ್ಯಾನಿಟೈಸರ್ ಮತ್ತು ಮಾಸ್ಕ್ ವಿತರಿಸಿ ಸಾಮಾಜಿಕ ಅಂತರ ಕಾಪಾಡುವಂತೆ ಸೂಚಿಸಲಾಯಿತು. ಜಿಲ್ಲಾ ಖಜಾನೆಯಿಂದ ಜಿಪಿಎಸ್ ಅಳವಡಿಸಿರುವ ವಾಹನಗಳ ಮೂಲಕ ಪೊಲೀಸ್ ಭದ್ರತೆಯೊಂದಿಗೆ ಪ್ರಶ್ನೆಪತ್ರಿಕೆಗಳನ್ನು ಪೂರೈಸಲಾಯಿತು. ●8ನೇ ಪುಟಕ್ಕೆ

CBSE ಬೋರ್ಡ್ ಪರೀಕ್ಷೆಗಳಿಗೆ 2023ರ ಪಠ್ಯಕ್ರಮ ಬಿಡುಗಡೆ

ನವದೆಹಲಿ, ಏ. 22– ಸಿಬಿಎಸ್‌ಇಯ ವಿದ್ಯಾರ್ಥಿಗಳ ತರಗತಿಗಳು ಆರಂಭವಾಗಿದ್ದು ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್(CBSE) ಶುಕ್ರವಾರ 2022–23 ವಾರ್ಷಿಕ ವರ್ಷದ 9,10,11 ಮತ್ತು 12ನೇ ತರಗತಿಯಲ್ಲಿ ಓದುತ್ತಿರುವ ಸಿಬಿಎಸ್‌ಸಿಯ ವಿದ್ಯಾರ್ಥಿಗಳ ವಾರ್ಷಿಕ ಪಠ್ಯಕ್ರಮವನ್ನು ಬಿಡುಗಡೆ ಮಾಡಿದೆ.

ಸಿಬಿಎಸ್‌ಇಯ ತರಗತಿಗಳ 10, 12 ಬೋರ್ಡ್ ಪರೀಕ್ಷೆಗಳಿಗೆ 2022–23 ಪರಿಷ್ಕೃತ ಪಠ್ಯಕ್ರಮವನ್ನು ಅಧಿಕೃತ ವೆಬ್‌ಸೈಟ್ cbseacademic.nic.inನಲ್ಲಿ ಕಾಣಬಹುದು ಇನ್ನು ವಿದ್ಯಾರ್ಥಿಗಳು ಅಧಿಕೃತ ವೆಬ್‌ಸೈಟ್ cbseacademic.nic.inನಲ್ಲಿ ●8ನೇ ಪುಟಕ್ಕೆ

ಪಠ್ಯಕ್ರಮಗಳ ವಿಷಯಗಳು

CBSE 9–10ನೇ ತರಗತಿಗಳ ಪಠ್ಯಕ್ರಮ: ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯ ಹಿಂದಿ ಕೋರ್ಸ್ ಎ ಮತ್ತು ಹಿಂದಿ ಕೋರ್ಸ್ ಬಿ ಗಣಿತಶಾಸ್ತ್ರ ವಿಜ್ಞಾನ ಸಾಮಾಜಿಕ ಅಧ್ಯಯನಗಳು

CBSE ತರಗತಿಗಳ 11–12 ಪಠ್ಯಕ್ರಮ: ಅಕೌಂಟೆನ್ಸಿ ಜೀವಶಾಸ್ತ್ರ ವ್ಯಾಪಾರ ಅಧ್ಯಯನಗಳು ರಸಾಯನ ಶಾಸ್ತ್ರ ಅರ್ಥಶಾಸ್ತ್ರ ಭೂಗೋಳಶಾಸ್ತ್ರ ಇತಿಹಾಸ ಗಣಿತಶಾಸ್ತ್ರ ಅನ್ವಯಿಕ ಗಣಿತ ದೈಹಿಕ ಶಿಕ್ಷಣ ಭೌತಶಾಸ್ತ್ರ ರಾಜ್ಯಶಾಸ್ತ್ರ ಮನೋವಿಜ್ಞಾನ

ಆಜಾನ್ ಸಂಬಂಧ ಆಯಾಯ ಪೊಲೀಸ್ ಠಾಣಾಧಿಕಾರಿಗಳಿಗೆ ಜವಾಬ್ದಾರಿ

ಶಾಂತಿ ಸಭೆ ಕರೆದು ಸೌಹಾರ್ದತೆಯಿಂದ ಇತ್ಯರ್ಥಕ್ಕೆ ಮುಖ್ಯಮಂತ್ರಿ ಸೂಚನೆ

ಬೆಂಗಳೂರು, ಏ.22 (ಕೆಎಂಶಿ)– ಆಜಾನ್ ಕುರಿತಂತೆ ಪೊಲೀಸರು ಆಯಾಯ ಠಾಣೆಯಲ್ಲಿ ಶಾಂತಿ ಸಭೆಗಳನ್ನು ನಡೆಸಿ ಸೌಹಾರ್ದತೆಯಿಂದ ಸಮಸ್ಯೆಗಳನ್ನು ಬಗೆಹರಿಸಲು ಸೂಚನೆ ನೀಡಲಾಗಿದೆ. ಕಾನೂನನ್ನು ಎಲ್ಲರೂ ಪಾಲಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಜಾನ್ ಬಗ್ಗೆ ಹೈಕೋರ್ಟ್ ಆದೇಶವಿದೆ. ಆ ಪ್ರಕಾರ ಸುತ್ತೋಲೆಯನ್ನು ಈಗಾಗಲೇ ಹೊರಡಿಸಲಾಗಿದೆ. ಯಾವ ಯಾವ ಸಂದರ್ಭದಲ್ಲಿ ಎಷ್ಟು ಡೆಸಿಬಲ್ ಇರಬೇಕು ಎಂದು ಕಾನೂನು ಇದೆ ಡಿಜಿಯವರು ಸುತ್ತೋಲೆ ಹೊರಡಿಸಿದ್ದಾರೆ ಎಂದರು. ಪಕ್ಷದಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಒಗ್ಗಟ್ಟು ಇದೆ. ಪಕ್ಷದಲ್ಲಿ ಯಾವ ಅಸಮಾಧಾನವೂ ಇಲ್ಲ. ಕೆಲವು ವಿಚಾರಗಳನ್ನು ಚರ್ಚೆ ಮಾಡಿ ಬಗೆಹರಿಸಿಕೊಂಡಿದ್ದೇವೆ. ಹಿಂದೆಂದಿಗಿಂತಲೂ ಹೆಚ್ಚಿನ ಒಗ್ಗಟ್ಟು ನಮ್ಮಲ್ಲಿದೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಹೆಚ್ಚಿನ ಕಾಳಜಿ ವಹಿಸಲಾಗಿದೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ನಂಬಿಕೆ ಇದೆ ಎಂದರು.









ಏ.28ಕ್ಕೆ ಮೈಸೂರಲ್ಲಿ 'ಉದ್ಯಮಿಯಾಗು ಉದ್ಯೋಗ ನೀಡು' ಕಾರ್ಯಾಗಾರ

ಹಳೆ ಮೈಸೂರು ಭಾಗದ ವಿದ್ಯಾರ್ಥಿಗಳಿಗೆ ಉದ್ಯಮಶೀಲತೆ ಬೆಳವಣಿಗೆಗೆ ಉತ್ತೇಜನ

ಬೆಂಗಳೂರು, ಏ.22 (ಕೆಎಂಶಿ)–ಮೈಸೂರು ವಿಭಾಗದ ಯುವಜನರು ಶಿಕ್ಷಣ ಪೂರೈಸಿದ ನಂತರ ಕೆಲಸ ಹುಡುಕುವ ಬದಲು ಅವರೇ ಉದ್ಯಮ ಸ್ಥಾಪಿಸಿ ಇತರರಿಗೆ ಉದ್ಯೋಗ ನೀಡುವಂತೆ ಮಾಡಲು ಕೈಗಾರಿಕಾ ಇಲಾಖೆ ಕಾರ್ಯಕ್ರಮ ರೂಪಿಸಿದೆ.



ಮೈಸೂರಿನಲ್ಲಿ ಇದೇ ಏಪ್ರಿಲ್28 ರಂದು ಅಂತಿಮ ವರ್ಷದ ತಾಂತ್ರಿಕ ಹಾಗೂ ತಂತ್ರಜ್ಞಾನವುಳ್ಳ ವಿದ್ಯಾರ್ಥಿಗಳಿಗೆ 'ಉದ್ಯಮಿಯಾಗು ಉದ್ಯೋಗ ನೀಡು' ಕಾರ್ಯಾಗಾರ ಆಯೋಜಿಸಿದೆ. ಮೈಸೂರಿನ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಭವನದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಡಾ. ಮುರುಗೇಶ್ ಆರ್. ನಿರಾಣಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳು ವೀಡಿಯೋ ಕಾನ್ಫರೆನ್ಸ್ ಮೂಲಕ ಕಾರ್ಯಕ್ರಮದಲ್ಲಿ ಭಾಗಿಯಾಗಬಹುದು. ಅದಕ್ಕೆ ಪೂರಕ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ಕಾಲೇಜಿನ ಮುಖ್ಯಸ್ಥರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಕೋರಲಾಗಿದೆ. ಕಾರ್ಯಕ್ರಮದಲ್ಲಿ ಉದ್ಯಮಿಗಳಾಗುವುದು ಹೇಗೆ? ಎಲ್ಲಿ ಮತ್ತು ಹೇಗೆ ಸಾಲಸೌಲಭ್ಯ ದೊರೆಯುತ್ತದೆ. ಯಾವ ಯಾವ ಕ್ಷೇತ್ರಗಳಲ್ಲಿ ಹೂಡಿಕೆಗೆ ಅವಕಾಶ ●8ನೇ ಪುಟಕ್ಕೆ


ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶಾಲಾ ಮಕ್ಕಳಿಗೆ ರಜೆ ಕಡಿತ

ಮೇ 16 ಶಾಲೆಗಳು ಆರಂಭ

ಬೆಂಗಳೂರು, ಏ. 22– ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ ಕೋವಿಡ್‌ನಿಂದಾಗಿ ವಿದ್ಯಾರ್ಥಿಗಳಿಗೆ ಕನಿಷ್ಠ ಶೇಕಡಾ 40 ರಷ್ಟು ಭೌತಿಕ ತರಗತಿಗಳು ನಷ್ಟವಾಗಿತ್ತು. ಈಗ ಶಿಕ್ಷಣ ಇಲಾಖೆ ಮುಂದಿನ ಶೈಕ್ಷಣಿಕ ವರ್ಷದ ಕ್ಯಾಲೆಂಡರ್ ಸಿದ್ಧಪಡಿಸಿದೆ. ಕಲಿಕೆಯ ನಷ್ಟವನ್ನು ಸರಿದೂಗಿಸಲು 26 ಹೆಚ್ಚುವರಿ ದಿನಗಳೊಂದಿಗೆ ಶೈಕ್ಷಣಿಕ ವರ್ಷವು ಬೇಗನೆ ಪ್ರಾರಂಭವಾಗಿ ತಡವಾಗಿ ಕೊನೆಗೊಳ್ಳುತ್ತದೆ.

ಶೈಕ್ಷಣಿಕ ವರ್ಷದ ಮೊದಲ ಅವಧಿಯು ಮೇ 16 ರಿಂದ ಅ.2 ರವರೆಗೆ ಇರುತ್ತದೆ, ಎರಡನೆಯದು ಅಕ್ಟೋಬರ್ 17 ರಿಂದ ಏಪ್ರಿಲ್ 10 ರವರೆಗೆ ಇರುತ್ತದೆ. ಬೇಸಿಗೆ ರಜೆಯನ್ನು 48 ಮತ್ತು ದಸರಾ ರಜೆಯನ್ನು 14 ದಿನಗಳವರೆಗೆ ಕಡಿತಗೊಳಿಸಲಾಗುತ್ತದೆ ಎಲ್ಲೆಲ್ಲಿ ಕ್ರಿಸ್‌ಮಸ್ ರಜೆ ಘೋಷಣೆ ಮಾಡಬೇಕೋ ಅಲ್ಲೆಲ್ಲ ದಸರಾ ರಜೆ ಕಡಿತಗೊಳಿಸಲಾಗುತ್ತದೆ. 330 ದಿನಗಳಲ್ಲಿ ದಸರಾ, ಬೇಸಿಗೆ ಮತ್ತು ಸರ್ಕಾರಿ ರಜೆಗಳು ಸೇರಿದಂತೆ 60 ದಿನಗಳ ರಜೆ ಇರುತ್ತದೆ. ಸಹಪಠ್ಯ ಚಟುವಟಿಕೆಗಳು, ಪರೀಕ್ಷೆಗಳು, ಪೋಷಕ–ಶಿಕ್ಷಕರ ಸಭೆಗಳು, ವಿಹಾರಗಳು ಮತ್ತು ಕಾರ್ಯಗಳು 28 ದಿನಗಳನ್ನು ತೆಗೆದುಕೊಳ್ಳುತ್ತದೆ. 228 ದಿನಗಳು ತರಗತಿ ನಡೆಸಲಾಗುತ್ತದೆ ತರಗತಿಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದ್ದು, ಬೆಳಿಗ್ಗೆ 10 ರಿಂದ ಸಂಜೆ 4.20 ರವರೆಗೆ ಇರುತ್ತದೆ.






ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ನೆಲಸಮ ನಿರ್ಧಾರ ಅವೈಜ್ಞಾನಿಕ

- ನೆಲಸಮಕ್ಕೆ ರಾಜಮನೆತನದ ಆಕ್ಷೇಪವಿದೆ: ಪ್ರಮೋದಾದೇವಿ ಒಡೆಯರ್
- ಸರ್ಕಾರ ಸಹಕಾರ ನೀಡಿದರೆ ಎರಡು ಕಟ್ಟಡಗಳನ್ನು ನಾವೇ ಪುನಶ್ಚೇತನಗೊಳಿಸುತ್ತೇವೆ





ಮೈಸೂರು, ಏ.22(ಎಂಟಿವೈ)– ಮೈಸೂರಿನ ಪ್ರಮುಖ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನೆಲಸಮ ಮಾಡುವ ನಿರ್ಧಾರ ಸಮಂಜಸವಲ್ಲ, ಸರ್ಕಾರ ಸಹಕಾರ ನೀಡುವ ಭರವಸೆ ನೀಡಿದರೆ ಎರಡೂ ಕಟ್ಟಡಗಳನ್ನು ನಾವೇ ಪುನಶ್ಚೇತನಗೊಳಿಸುತ್ತೇವೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.



ಚಾಮುಂಡಿಬೆಟ್ಟದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡವನ್ನು ನೆಲಸಮ ಮಾಡುವ ನಿರ್ಧಾರ ಅವೈಜ್ಞಾನಿಕವಾಗಿದೆ. ಅದಕ್ಕೆ ನಮ್ಮ ಆಕ್ಷೇಪವಿದೆ. ಪಾರಂಪರಿಕ ಸಮಿತಿ ನಿರ್ಧಾರ ಸಮಂಜಸ ಅಲ್ಲ. ಸರಿಯಾದ ಪಾರಂಪರಿಕ ತಜ್ಞರು ಇಲ್ಲದೇ ಇರುವುದರಿಂದಲೇ ಈ ಅವೈಜ್ಞಾನಿಕ ನಿರ್ಧಾರಕ್ಕೆ ಬರಲು ಕಾರಣ. ಪಾರಂಪರಿಕ ಸಮಿತಿಯಲ್ಲಿ ಎರಡು ಬಗೆಯ ಅಭಿಪ್ರಾಯ ವ್ಯಕ್ತವಾಗಿದೆ. ಸೂಕ್ತ ತಜ್ಞರ ನೇಮಕ ಮಾಡಿ ಪರಿಶೀಲಿಸಿದರೆ ಮಾರುಕಟ್ಟೆ ಪುನಶ್ಚೇತನಗೊಳಿಸಬಹುದು ಎಂದರು. ಈಗಾಗಲೇ ಈ ಎರಡೂ ಕಟ್ಟಡಗಳ ನೆಲಸಮ ನಿರ್ಧಾರದ ಬಗ್ಗೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವ್ಯಾಪಕ ವಿರೋಧ ಕೂಡ ವ್ಯಕ್ತವಾಗಿದೆ. ಇದರಿಂದ ಸರ್ಕಾರ ಈ ಪಾರಂಪರಿಕ ಕಟ್ಟಡಗಳನ್ನು ಪುನಶ್ಚೇತನಗೊಳಿಸುತ್ತದೆ ಎಂಬ ಭರವಸೆ ಇದೆ. ರಾಜ ಮನೆತನಕ್ಕೆ ಸೇರಿದ ಪಾರಂಪರಿಕ ಕಟ್ಟಡವಾದ ರಾಜೇಂದ್ರ ವಿಲಾಸ ಪ್ಯಾಲೇಸ್ ●8ನೇ ಪುಟಕ್ಕೆ





ಪೊಲೀಸ್ ಆಯುಕ್ತರಿಂದ ಆಟೋ ಚಾಲಕರಿಗೆ ಡಿಸ್ಪ್ಲೇ ಕಾರ್ಡ್ ವಿತರಣೆ



ಮೈಸೂರು, ಏ.22(ಆರ್‌ಕೆ)–ಪ್ರಯಾಣಿಕರು ಹಾಗೂ ಚಾಲಕರ ಅನುಕೂಲಕ್ಕಾಗಿ ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ಕ್ಯೂಆರ್ ಕೋಡ್ ಹೊಂದಿರುವ ಆಟೋರಿಕ್ಷಾ ಡಿಸ್ಪ್ಲೇ ಕಾರ್ಡ್‌ಗಳನ್ನು ಚಾಲಕರಿಗೆ ವಿತರಿಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ಕೆಲವೇ ಮಂದಿ ಆಟೋಚಾಲಕರಿಗೆ ಸಾಂಕೇತಿಕವಾಗಿ ಡಿಸ್ಪ್ಲೇ ಕಾರ್ಡ್ ವಿತರಿಸಿದ ಅವರು, ಕ್ಯೂಆರ್ ಕೋಡ್‌ನಲ್ಲಿ ಆಟೋ ಸಂಖ್ಯೆ, ಚಾಲಕರ ಮೊಬೈಲ್ ನಂಬರ್, ಡಿಎಲ್ ಸಂಖ್ಯೆ ಮತ್ತಿತರ ಮಾಹಿತಿಗಳಿರುವುದರಿಂದ ಅದನ್ನು ಸ್ಕ್ಯಾನ್ ಮಾಡಿದರೆ ಸಂಪೂರ್ಣ ವಿವರ ಪ್ರಯಾಣಿಕರಿಗೆ ಲಭ್ಯವಾಗಲಿದೆ ಎಂದರು.

ಡಿಎಲ್, ಆಟೋ ಆರ್‌ಸಿ ಪುಸ್ತಕ, ಫಿಟ್‌ನೆಸ್ ಸರ್ಟಿಫಿಕೇಟ್, ಆಧಾರ್ ಕಾರ್ಡ್, 2 ಭಾವಚಿತ್ರಗಳೊಂದಿಗೆ ಸೂಕ್ತ ದಾಖಲಾತಿಗಳನ್ನು ಸಲ್ಲಿಸಿ ಆಟೋ ಡಿಸ್ಪ್ಲೇ ಕಾರ್ಡ್‌ಗಳನ್ನು ಪಡೆದುಕೊಳ್ಳಬಹುದು. ಇದರಿಂದ ಪ್ರಯಾಣಿಕರು ಹಾಗೂ ಚಾಲಕರಿಗೂ ಪ್ರಯೋಜನವಾಗಲಿದೆ ಎಂದು ಅವರು ತಿಳಿಸಿದರು. ಸಂಚಾರ ವಿಭಾಗದ ಎಸಿಪಿ ಎಸ್.ಇ.ಗಂಗಾಧರಸ್ವಾಮಿ, ಇನ್ಸ್‌ಪೆಕ್ಟರ್‌ಗಳಾದ ಸುರೇಶ್ ಕುಮಾರ್, ಪ್ರಸನ್ನ ಕುಮಾರ್, ಮಂಜುನಾಥ್, ನಟರಾಜ್, ಮುನಿಯಪ್ಪ, ಸಬ್ ಇನ್ಸ್‌ಪೆಕ್ಟರ್‌ಗಳು ಈ ಸಂದರ್ಭ ಉಪಸ್ಥಿತರಿದ್ದರು.

ಪತ್ರಕರ್ತ ಸಿ.ಮಹೇಶ್ವರನ್‌ಗೆ ನುಡಿನಮನ

ಮೈಸೂರು, ಏ.22(ಎಂಟಿವೈ)– ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿರಿಯ ಪತ್ರಕರ್ತ ಸಿ.ಮಹೇಶ್ವರನ್ ಅವರಿಗೆ ನುಡಿನಮನ ಕಾರ್ಯಕ್ರಮ ಆಯೋಜಿಸಿ, ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.



ಪತ್ರಕರ್ತರ ಸಂಘದಲ್ಲಿ ನಡೆದ ನುಡಿನಮನ ಕಾರ್ಯಕ್ರಮದಲ್ಲಿ ಸಿ.ಮಹೇಶ್ವರನ್ ಅವರ ಒಡನಾಡಿಗಳು, ಹಿತೈಷಿಗಳು ಪಾಲ್ಗೊಂಡು ಕಂಬನಿ ಮಿಡಿದರಲ್ಲದೆ, ಪತ್ರಿಕೋದ್ಯಮ ಕ್ಷೇತ್ರಕ್ಕೆ ಸಿ.ಮಹೇಶ್ವರನ್ ನೀಡಿದ ಕೊಡುಗೆಯನ್ನು ಸ್ಮರಿಸಿದರು.

ನುಡಿನಮನ ಕಾರ್ಯಕ್ರಮದಲ್ಲಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಮಾಜಿ ಅಧ್ಯಕ್ಷರಾದ ಕೆ.ದೀಪಕ್, ರಾಜ್ಯ ಸಮಿತಿ ಸದಸ್ಯ ಬಿ.ರಾಘವೇಂದ್ರ, ನಗರ ಕಾರ್ಯದರ್ಶಿ ಪಿ.ರಂಗಸ್ವಾಮಿ, ಹಿರಿಯ ಪತ್ರಕರ್ತರಾದ ಕೂಡ್ಲಿ ಗುರುರಾಜ್, ಚೀ.ಜ.ರಾಜೀವ್, ಕಾಶೀನಾಥ್, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಚಂದ್ರಶೇಖರ್, ವೈ.ಡಿ.ರಾಜಣ್ಣ, ಹಾಗೂ ಸಿ.ಮಹೇಶ್ವರನ್ ಅವರ ಹಿತೈಷಿಗಳು, ಸಂಬಂಧಿಕರು ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಮೈಸೂರು ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿರುವ "ಬೇಸಿಗೆ ಬಂಡಿ"ಯ ಚಟುವಟಿಕೆಯಲ್ಲಿ ಶಿಬಿರದ ವಿದ್ಯಾರ್ಥಿಗಳು ಹಳೆಯ ವೃತ್ತ ಪತ್ರಿಕೆಗಳನ್ನು ಅಲಂಕಾರಿಕವಾಗಿ ಬಳಸಿಕೊಂಡು 'ಫ್ಯಾಷನ್ ಶೋ' ನಡೆಸಿಕೊಟ್ಟರು.



ಮೈಸೂರು ನಗರಪಾಲಿಕೆ 44ನೇ ವಾರ್ಡ್‌ನ ಬೋಗಾದಿ 2ನೇ ಹಂತದ ಉತ್ತರ ಭಾಗದಲ್ಲಿ ಡಾಂಬರೀಕರಣ ಕಾಮಗಾರಿಗೆ ನಗರಪಾಲಿಕೆ ಸದಸ್ಯೆ ಸವಿತಾ ಸುರೇಶ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಸುರೇಶ್, ಪ್ರಸಾದ್, ಪುಟ್ಟಣ್ಣಯ್ಯ ಉಮೇಶ್, ರಾಜಣ್ಣ, ಜವರೇಗೌಡ, ರಾಮಣ್ಣ, ರಾಜು ಇತರರು ಹಾಜರಿದ್ದರು.

ಏ.24ರಂದು ಮೈಸೂರಲ್ಲಿ 'ಡಾ. ರಾಜ್ ಸಂಭ್ರಮ'

ಡಾ. ರಾಜ್ ಕಲಾ ಸೇವಾ ರತ್ನ ಪ್ರಶಸ್ತಿ ಪ್ರದಾನ, ರಾಜ್ ಗೀತೋತ್ಸವ ಕಾರ್ಯಕ್ರಮ

ಮೈಸೂರು, ಏ.22(ಎಂಟಿವೈ)– ವರನಟ ಡಾ.ರಾಜ್‌ಕುಮಾರ್ ಅವರ ಜನ್ಮ ದಿನದ ಅಂಗವಾಗಿ ಏ.24ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಪುರಭವನದಲ್ಲಿ 'ಡಾ.ರಾಜ್ ಸಂಭ್ರಮ' ಏರ್ಪಡಿಸಲಾಗಿದ್ದು, ಡಾ.ರಾಜ್ ಕಲಾಸೇವಾ ರತ್ನ ಪ್ರಶಸ್ತಿ ಪ್ರದಾನ ಹಾಗೂ ರಾಜ್ ಗೀತೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಡಾ.ವೈ.ಡಿ.ರಾಜಣ್ಣ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ 'ಡಾ.ರಾಜ್ ಸಂಭ್ರಮ' ಕಾರ್ಯಕ್ರಮ ನಡೆಸಲಾಗುತ್ತಿದ್ದು, ಏ.24ರಂದು ಬೆಳಗ್ಗೆ 11ಕ್ಕೆ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಉದ್ಘಾಟಿಸಲಿದ್ದಾರೆ. ಮೇಲುಕೋಟೆಯ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಂಸ್ಕೃತಿ ಚಿಂತಕ ಕೆ.ರಘುರಾಂ ವಾಜಪೇಯಿ ಮತ್ತು ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ ಮುಂತಾದವರು ಪಾಲ್ಗೊಳ್ಳಲಿದ್ದಾರೆ. ಇದೇ ಸಂದರ್ಭದಲ್ಲಿ 10 ಮಂದಿ ಹಿರಿಯ ವೃತ್ತಿ ಕಲಾ ಸೇವಕರಿಗೆ ಡಾ.ರಾಜ್‌ಕುಮಾರ್ ಕಲಾ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಅಂದು ಬೆಳಗ್ಗೆ 10 ಗಂಟೆಯಿಂದ ಡಾ.ರಾಜ್‌ಕುಮಾರ್ ಅಭಿನಯಿಸಿರುವ ಆಯ್ದ ಚಲನಚಿತ್ರಗಳಿಂದ 100 ಪ್ರಸಿದ್ಧ ಗೀತೆಗಳನ್ನು 40 ಮಂದಿ ಗಾಯಕರು ರಾತ್ರಿ 9ರವರೆಗೆ ನಿರಂತರವಾಗಿ ಹಾಡಲಿದ್ದಾರೆ. ಮಧ್ಯಾಹ್ನ 1ಕ್ಕೆ ಅನ್ನ ಸಂತರ್ಪಣೆ ಆಯೋಜಿಸಲಾಗಿದ್ದು, ರಕ್ತದಾನ ಶಿಬಿರವನ್ನೂ ಏರ್ಪಡಿಸಲಾಗಿದೆ ಎಂದರು.

ಪ್ರಶಸ್ತಿ ಪ್ರದಾನ: ನಾಟಕ ನಿರ್ದೇಶಕ ಹೆಚ್.ಪಿ.ನಾಗೇಂದ್ರ ಪ್ರಸಾದ್, ರಂಗಕರ್ಮಿ ಎನ್.ಲೀಲಾವತಿ, ಪೂರ್ಣಿಮಾ, ಸುಗಮ ಸಂಗೀತ ಕ್ಷೇತ್ರದ ಕೀಬೋರ್ಡ್ ವಾದಕ ಗಣೇಶ್ ಈಶ್ವರ್ ಭಟ್, ತಬಲಾ ವಾದಕ ಸಿ.ಮಹದೇವ, ಗಾಯಕಿ ಎ.ಎಸ್. ನಾಗಲಕ್ಷ್ಮೀ, ವಾದ್ಯಗೋಷ್ಠಿ ಗಾಯಕ ಕೆ.ಸದಾಶಿವ ಶೆಣೈ, ಎಂ.ಪುಟ್ಟಸ್ವಾಮಿ, ಗಾಯಕಿ ರೀನಾ ಹುಣಸೂರು, ಲೂಯಿಸ್ ರಾಜ್ ಅವರಿಗೆ ಡಾ.ರಾಜ್ ಕುಮಾರ್ ಕಲಾ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್‌ನ ಅಧ್ಯಕ್ಷ ಬಿ.ಎಸ್.ಜಯರಾಮ ರಾಜು, ಪ್ರಧಾನ ಕಾರ್ಯದರ್ಶಿ ಬಾಲು ಪ್ರಕಾಶ್, ನಿರ್ದೇಶಕ ಎಡೆಯೂರು ಸಮೀವುಲ್ಲಾ, ಮಹೇಶ್ ಇದ್ದರು.

ಸಿ.ಹನುಮಂತಯ್ಯ ನಿಧನ



ಮೈಸೂರು, ಏ.22–ಮೈಸೂರು ನಜರ್‌ಬಾದ್ ನಿವಾಸಿ ಪೊಲೀಸ್ ಇಲಾಖೆ ನಿವೃತ್ತ ಸೆಕ್ಷನ್ ಸೂಪರಿಂಟೆಂಡೆಂಟ್ ಸಿ.ಹನುಮಂತಯ್ಯ(77) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಸುಧಾಮಣಿ, ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಗಿಡಮೂಲಿಕೆ ಔಷಧ ಪದ್ಧತಿ ಮುಂದಿನ ಪೀಳಿಗೆಗೂ ಅವಶ್ಯ

● ಮೂರು ದಿನಗಳ ಎಥ್ನೋಫಾರ್ಮಕಾಲಜಿ ಕುರಿತ 9ನೇ ಅಂತಾರಾಷ್ಟ್ರೀಯ ಸಮ್ಮೇಳನ
● ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಅವರಿಂದ ಉದ್ಘಾಟನೆ

ಮೈಸೂರು, ಏ.22(ಆರ್‌ಕೆ)–ನೋವು ಶಮನ ಮಾಡುವ ನೈಸರ್ಗಿಕ ಗಿಡಮೂಲಿಕೆ ಔಷಧ ಪದ್ಧತಿಯನ್ನು ಮುಂದಿನ ಪೀಳಿಗೆಗೂ ಕೊಂಡೊಯ್ಯಬೇಕೆಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಎಸ್‌ಎಫ್‌ಇ–ಇಂಡಿಯಾ ಮೈಸೂರು ಚಾಪ್ಟರ್, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಇಂದಿನಿಂದ ಆರಂಭವಾದ 3 ದಿನಗಳ 'Society for Ethnopharmacology' ಕುರಿತ 9ನೇ ಅಂತಾರಾಷ್ಟ್ರೀಯ ಸಮ್ಮೇಳನ 'SFEC-2022' ಅನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ನೈಸರ್ಗಿಕ ಉತ್ಪನ್ನಗಳಿಂದ ತಯಾರಿಸಿದ ಹರ್ಬಲ್ ಮೆಡಿಸಿನ್ ಹಲವು ರೋಗಗಳು, ನೋವನ್ನು ನಿವಾರಿಸುವ ಗುಣ ಹೊಂದಿದ್ದು, ನಮ್ಮ ಪ್ರಾಚೀನ ತಲೆಮಾರಿನವರು ಬಳಸುತ್ತಿದ್ದ ಈ ಪ್ರಾಚೀನ ಮತ್ತು ಸಾಂಪ್ರದಾಯಿಕ ಔಷಧ ಪದ್ಧತಿಯು ಅತ್ಯಾಧುನಿಕ ಯುಗವಾದ ಇಂದಿಗೂ ಪ್ರಚಲಿತವಾಗಿರುವುದು ಅದರ ಮೌಲ್ಯ ಮತ್ತು ಪ್ರಾಮುಖ್ಯತೆ ಎಷ್ಟು ಎಂಬುದು ಖಾತರಿಯಾಗುತ್ತದೆ ಎಂದು ಸಚಿವರು ನುಡಿದರು.

ಫಾರ್ಮಕಾಲಜಿ ಮತ್ತು ಮೆಡಿಸಿನ್ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಿರುವ ಭಾರತದತ್ತ ವೈದ್ಯಕೀಯ ಸಂಶೋಧನೆಗೆ ಪಾಶ್ಚಿಮಾತ್ಯ ರಾಷ್ಟ್ರಗಳು ಧಾವಿಸುತ್ತಿವೆ. ನೋವು ಶಮನಕ್ಕೆ ನೈಸರ್ಗಿಕ ಉತ್ಪನ್ನಗಳನ್ನು ಬಳಸುತ್ತಿರುವ ನಮ್ಮ ದೇಶದಲ್ಲಿ ಕ್ಯಾನ್ಸರ್‌ನಂತಹ ರೋಗ ನಿವಾರಣೆ ಚಿಕಿತ್ಸೆಗೂ ಉಪಯೋಗಿಸಲಾಗುತ್ತಿರುವುದು ಹೆಮ್ಮೆಯ ವಿಷಯ ಎಂದು ಡಾ. ಸುಧಾಕರ್ ಶ್ಲಾಘಿಸಿದರು.

ಕೊರೊನಾ ಸೋಂಕಿತ ರೋಗಿಗಳಿಗೆ 'ಕಷಾಯ' ಸಾಂಪ್ರದಾಯಿಕ ಪಾನೀಯವನ್ನು ಕುಡಿಸಲಾಗುತ್ತಿತ್ತು. ಬೇವು, ಶುಂಠಿ, ಬೆಳ್ಳುಳ್ಳಿ ಹಾಗೂ ಜೇನುತುಪ್ಪದಿಂದ ತಯಾರಿಸಿದ ಕಷಾಯವು ಹಲವು ಮಂದಿಯನ್ನು ಸೋಂಕಿನಿಂದ ಪಾರು ಮಾಡಿದ್ದನ್ನು ಸ್ಮರಿಸಿದ ಸಚಿವರು, ಅದರ ಗುಣ ಅರಿತ ಮೇಲೆ ಪ್ರತಿಯೊಬ್ಬರೂ ಈ ಪಾನೀಯ ಸೇವಿಸಲಾರಂಭಿಸಿದ್ದಾರೆ ಎಂದರು.

ಇಂಡಸ್ ವ್ಯಾಲಿ ನಾಗರಿಕತೆಯಂತಹ ಪ್ರಾಚೀನ ಭಾರತೀಯರು ರೋಗ ಗುಣಪಡಿಸಿಕೊಳ್ಳಲು ಸಾಂಪ್ರದಾಯಿಕ ಹರ್ಬಲ್ ಮೆಡಿಸಿನ್‌ಗಳ ಮೇಲೆ ಅವಲಂಬಿತರಾಗಿದ್ದರು. ವೈಜ್ಞಾನಿಕ ಯುಗದಲ್ಲಿರುವ ಆಧುನಿಕ ಸಮಾಜವೂ ನಿಸರ್ಗದತ್ತ ಉತ್ಪನ್ನಗಳಿಂದ ತಯಾರಿಸಿದ ಔಷಧಗಳನ್ನು ಬಳಸಲಾರಂಭಿಸಿರುವುದರಿಂದ ಆಯುರ್ವೇದ, ಯುನಾನಿ ಯೋಗದಂತಹ ಆಯುಷ್ ವೈದ್ಯಕೀಯ ಪದ್ಧತಿ ಭಾರತದಲ್ಲಿ ಹೆಚ್ಚು ಪ್ರಚಲಿತವಾಗಿದೆ ಎಂದು ಸಚಿವರು ಇದೇ ಸಂದರ್ಭದಲ್ಲಿ ನುಡಿದರು.

ಪ್ರಾಚೀನ ಐತಿಹಾಸಿಕ ಜ್ಞಾನ ಎಂದಿಗೂ ಸಾಯುವುದಿಲ್ಲ. ಸರ್ಕಾರವು ಇಂತಹ ಜ್ಞಾನ ವೃದ್ಧಿಗೆ ಅಗತ್ಯ ಸೌಲಭ್ಯ ಮತ್ತು ನೆರವು ನೀಡಿ ಪ್ರೋತ್ಸಾಹಿಸುತ್ತದೆ. ಇದೀಗ ಇಡೀ ವಿಶ್ವವು ಆರ್ಗ್ಯಾನಿಕ್ ಆಹಾರ, ನೈಸರ್ಗಿಕ ಔಷಧ, ಯೋಗಿಕ್ ಸೈನ್ಸ್‌ಗಳತ್ತ ಎದುರು ನೋಡುತ್ತಿದೆ. ಅದನ್ನು ಪ್ರೋತ್ಸಾಹಿಸಲು ಸರಿಯಾದ ಸಂಶೋಧನೆ ನಡೆಸಿ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತುತಪಡಿಸುವುದು ಈ ಸಮಯದಲ್ಲಿ ಅತ್ಯಗತ್ಯ ಎಂದು ಡಾ. ಸುಧಾಕರ್ ಅಭಿಪ್ರಾಯಪಟ್ಟರು.

ಆರೋಗ್ಯ ಕ್ಷೇತ್ರದ ಮೇಲೆ ಭಾರತ ವಿಶ್ವಾಸವಿರಿಸಿಕೊಂಡಿದ್ದು, ಹೆಚ್ಚು ಔಷಧೀಯ ಗುಣವಿರುವ ಗಿಡಗಳನ್ನು ಬೆಳೆಸಲು ಉತ್ತೇಜನ ನೀಡಲಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ (WHO) ಮಹಾ ನಿರ್ದೇಶಕ ಡಾ. ಟೆಡ್ರೋಸ್ ಅವರು ಹೇಳಿರುವ ರೀತಿ ಭಾರತೀಯರು ಪ್ರಪಂಚಾದ್ಯಂತ ಹೋಗುತ್ತಿರುವಾಗ ಮತ್ತೊಂದೆಡೆ ಇಡೀ ವಿಶ್ವವೇ ಆಯುಷ್ ಮೂಲಕ ಭಾರತಕ್ಕೆ ಬರುತ್ತಿದೆ ಎಂದ ಸಚಿವರು, ಇಂತಹ ನಿಸರ್ಗದತ್ತ ಉತ್ಪನ್ನಗಳ ಔಷಧಿ ತಯಾರಿಕೆ, ಮಾರುಕಟ್ಟೆ ಮಾಡಲು ಸರ್ಕಾರ ಸರ್ವ ರೀತಿಯಲ್ಲಿ ಉತ್ತೇಜನ ನೀಡುತ್ತದೆ ಎಂದರು.

ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರು ದಿವ್ಯ ಸಾನ್ನಿಧ್ಯ ವಹಿಸಿದ್ದ ಸಮ್ಮೇಳನದಲ್ಲಿ ಛತ್ತೀಸ್‌ಗಢ ಮಾಜಿ ರಾಜ್ಯಪಾಲ ಶೇಖರ್ ದತ್ ಅವರು ಅಧ್ಯಕ್ಷತೆ ವಹಿಸಿದ್ದರು.

ಕೊಲ್ಕತ್ತಾದ ಸೊಸೈಟಿ ಫಾರ್ ಎಥ್ನೋಫಾರ್ಮಕಾಲಜಿ ಉಪಾಧ್ಯಕ್ಷ ಡಾ. ಸಿ.ಎ.ಕಟಿಯಾರ್, ಎಸ್‌ಎಫ್‌ಇಸಿ–2022ರ ಸೈಂಟಿಫಿಕ್ ಸರ್ವೀಸಸ್ ಅಧ್ಯಕ್ಷ ಪ್ರೊ. ಪುಲೋಕ್ ಕೆ.ಮುಖರ್ಜಿ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ರಿಜಿಸ್ಟ್ರಾರ್ ಡಾ. ಬಿ.ಮಂಜುನಾಥ್, ಡಾ. ಟಿ.ಎಂ. ಪ್ರಮೋದ್ ಕುಮಾರ್ ಹಾಗೂ ಡಾ. ಕೆ.ಮೃತ್ಯುಂಜಯ ಅವರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.



ಕೋವಿಡ್ 4ನೇ ಅಲೆಗೆ ಆತಂಕ ಬೇಡ

ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ಅಭಯ

ಮೈಸೂರು, ಏ.22(ಆರ್‌ಕೆ)–ಪೂರ್ವ ನಿರೀಕ್ಷೆಯಂತೆ ಕೋವಿಡ್ 4ನೇ ಅಲೆ ಬಂದರೂ ಜನರು ಆತಂಕ ಪಡಬೇಕಿಲ್ಲ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್, ಇಂದು ಅಭಯ ನೀಡಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ಇಂದು ಆರಂಭವಾದ ಎಥ್ನೋಫಾರ್ಮಕಾಲಜಿ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಕಳೆದ ಎರಡು ವರ್ಷಗಳಿಂದ ಕಾಡಿದ ಕೋವಿಡ್ ಮಹಾಮಾರಿ ನಾಲ್ಕನೇ ಅಲೆ ಬರಲಿದೆ ಎಂದು ಹೇಳಲಾಗುತ್ತಿದೆ. ಮತ್ತೆ ಹರಡಲಾರದೆಂಬುದು ನಮ್ಮ ಅನಿಸಿಕೆ. ಒಂದು ವೇಳೆ ಬಂದರೂ ಯಾರೂ ಆತಂಕಪಡಬೇಕಾಗಿಲ್ಲ. ಏಕೆಂದರೆ ಭಾರತದಲ್ಲಿ 185 ಕೋಟಿ ಹಾಗೂ ಕರ್ನಾಟಕದಲ್ಲಿ 10.6 ಕೋಟಿ ಕೊರೊನಾ ಲಸಿಕೆ ಹಾಕಲಾಗಿದೆ ಎಂದರು.

ಲಸಿಕೆ ಪಡೆದಿರುವುದರಿಂದ ಕೋವಿಡ್ 4ನೇ ಅಲೆ ಬಂದರೂ ಪ್ರಾಣಾಪಾಯವಾಗಲಾರದು. ಒಂದು ವೇಳೆ ಕೋವಿಡ್ ಅಲೆ ಬಂದರೂ, ಸೋಂಕಿನಿಂದ ಪಾರಾದರೆ, ರಾಜ್ಯ ಅಲ್ಲ, ಇಡೀ ದೇಶದ ಜನರು ಲಸಿಕೆ ಪೂರೈಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸಬೇಕು ಎಂದು ಸಚಿವರು ಅಭಿಪ್ರಾಯಪಟ್ಟರು.

ಬಿಜೆಪಿ ಬೂತ್ ಅಧ್ಯಕ್ಷರ ಮನೆಗಳಿಗೆ ಶಾಸಕ ರಾಮದಾಸ್ ಭೇಟಿ

ಜನರ ಕಷ್ಟ-ಸುಖಗಳಲ್ಲಿ ಭಾಗಿಯಾಗುವಂತೆ ಸೂಚನೆ; ಸಾರ್ವಜನಿಕರ ಕುಂದು-ಕೊರತೆಗೆ ಸ್ಥಳದಲ್ಲೇ ಪರಿಹಾರ

ಮೈಸೂರು, ಏ.22– ಶಾಸಕ ಎಸ್.ಎ. ರಾಮದಾಸ್ ಅವರು ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂಬರ್ 51ರಲ್ಲಿ ಮತಪಾಲಕರಾಗಿ ಬಿಜೆಪಿ ಬೂತ್ ಅಧ್ಯಕ್ಷರ ಮನೆಗೆ ಶುಕ್ರವಾರ ಭೇಟಿ ನೀಡಿ ಸಮಾಲೋಚನೆ ನಡೆಸಿ ಬೂತ್ ಅಧ್ಯಕ್ಷರ ಮನೆ ಮುಂದೆ ನಾಮಫಲಕ ಅನಾವರಣ ಮಾಡಿದರು.

ಬೂತ್ ಅಧ್ಯಕ್ಷರ ಮನೆ ಮುಂದೆ ನಡೆದ ಕಾರ್ಯಕ್ರಮದಲ್ಲಿ ಭಾರತಾಂಬೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಎಸ್.ಎ.ರಾಮದಾಸ್ ಅವರು, ಬೂತ್ ಅಧ್ಯಕ್ಷರುಗಳು ದೇಶಕ್ಕೋಸ್ಕರ ಕೆಲಸ ಮಾಡುತ್ತೇನೆ, ಸರ್ಕಾರದ ಯೋಜನೆಗಳನ್ನು ಮನೆಗಳಿಗೆ ತಲುಪಿಸುತ್ತೇನೆ ಎಂದು ಪ್ರಮಾಣ ಮಾಡಿದ್ದಾರೆ. ಬೂತ್ ಅಧ್ಯಕ್ಷರ ಜೊತೆಗೆ ಪೇಜ್ ಪ್ರಮುಖರು ತಮಗೆ ಬರುವ 8,10 ಮನೆಗಳ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು, ಅವರ ಕಷ್ಟ ಸುಖದಲ್ಲಿ ಭಾಗಿಯಾಗಬೇಕು ಇದು ಮುಖ್ಯ ಧ್ಯೇಯ ಹಾಗಾಗಿ ನಾವೆಲ್ಲ ಒಟ್ಟಿಗೆ ಸೇರಿ ದೇಶದ ಏಳಿಗೆಗಾಗಿ ಶ್ರಮಿಸಬೇಕಿದೆ ಎಂದರು.




ಸಮಾಜದ ಕೆಲಸವನ್ನು ಮಾಡುವಂತಹ ಜವಾಬ್ದಾರಿ ನಮ್ಮ ಮೇಲಿದೆ, ಎಷ್ಟೋ ಜನಕ್ಕೆ ರೇಷನ್ ಕಾರ್ಡ್, ಆಯುಷ್ಮಾನ್ ಕಾರ್ಡ್‌ಗಳು ಬೇಕಾಗಿರುತ್ತವೆ. ಅವರಿಗೆ ಬೇಕಾದದ್ದನ್ನು ತಲುಪಿಸುವ ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ. ನಾವು ಬೂತ್ ಅಧ್ಯಕ್ಷರ ಕೈಯಲ್ಲಿಯೇ ಮುಂದಿನ ದಿನಗಳಲ್ಲಿ ಆಶ್ರಯ ಮನೆಗಳ ಬೀಗದ ಕೈ ಅನ್ನು ನೀಡಲಿದ್ದೇವೆ. ಬೂತ್ ಅಧ್ಯಕ್ಷರ ಬಳಿ ಹೇಳಿದರೆ ನಮ್ಮ ಕಷ್ಟಗಳು, ಸಮಸ್ಯೆಗಳು ಪರಿಹಾರ ಆಗುತ್ತದೆ ಎಂಬ ನಂಬಿಕೆ ಅವರಲ್ಲಿ ಬರುವ ರೀತಿ ನೀವೆಲ್ಲರೂ ಕೆಲಸ ಮಾಡಬೇಕಿದೆ ಎಂದರು.

ರಾಮಾನುಜ ರಸ್ತೆಯ ಸಾಯಿಬಾಬಾ ದೇವಾಲಯದ ಬಳಿ ಸಾರ್ವಜನಿಕರ ಕುಂದು–ಕೊರತೆ ಆಲಿಸಿದ ಶಾಸಕರು, ಸ್ಥಳದಲ್ಲಿಯೇ ಇದ್ದ ಅಧಿಕಾರಿಗಳ ಬಳಿ ಹೇಳಿ ಅಲ್ಲಿಯೇ ಪರಿಹಾರವನ್ನು ದೊರಕಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ಬಿಜೆಪಿ ಕೆ.ಆರ್ ಕ್ಷೇತ್ರದ ಅಧ್ಯಕ್ಷ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿ ಓಂ ಶ್ರೀನಿವಾಸ್, ನಾಗೇಂದ್ರ ಕುಮಾರ್, 51 ನೇ ವಾರ್ಡ್‌ನ ನಗರಪಾಲಿಕಾ ಸದಸ್ಯ ಬಿ.ವಿ. ಮಂಜುನಾಥ್, ಬಿಜೆಪಿ ಕೆಆರ್. ಕ್ಷೇತ್ರ ಉಪಾಧ್ಯಕ್ಷರಾದ ಎಂ.ಆರ್. ಬಾಲಕೃಷ್ಣ ಸಂತೋಷ್ ಶಂಭು, ಕೆ.ಆರ್. ಕ್ಷೇತ್ರದ ಮಾಜಿ ಬಿಜೆಪಿ ಅಧ್ಯಕ್ಷರಾಮ ಪ್ರಸಾದ್, ಬಿಜೆಪಿ ಯುವಮೋರ್ಚಾ ಅಧ್ಯಕ್ಷ ಮನು ಅಪ್ಪಿ(ಶೈವ್) ಪ್ರಮುಖರಾದ ಸಂತೋಷ್, ವಿಜಯ್, ಶಿವರಾಜ್, ಓಂ ಪ್ರಕಾಶ್, ರಾಜಕುಮಾರ್, ಶ್ರೀಮತಿ ಶಾಂತ, ಮಾಸ್ಟರ್ ಮಂಜುನಾಥ್, ಕಾವೇರಿ, ಬೂತ್ ಅಧ್ಯಕ್ಷರುಗಳು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು, ಸ್ಥಳೀಯರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.04.2022 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ಸಪ್ತಮೀ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ವಿಶ್ವಮಾನವ ಡಾ. ರಾಜ್‌ಕುಮಾರ್ ಸೇವಾ ಸಮಿತಿ :** ವಿವಿಧ ಕ್ಷೇತ್ರಗಳ ಸಾಧಕರಿಗೆ ಡಾ.ರಾಜ್ ಕರುನಾಡ ಕಣ್ಮಣಿ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ಮೈಸೂರು ದಸರಾ ವಸ್ತುಪ್ರದರ್ಶನ ಆವರಣ, ಬೆಳಗ್ಗೆ 9.30ಕ್ಕೆ.

■ **ಅರಿವು ಸಂಸ್ಥೆ :** ಗ್ರಂಥಾಲಯ ಪಿತಾಮಹ ಡಾ. ಎಸ್.ಆರ್. ರಂಗನಾಥನ್ ಅವರ ಜನ್ಮ ದಿನಾಚರಣೆ, ಮುಖ್ಯ ಅತಿಥಿಗಳು : ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ನಂದೀಶ್ ಹಂಚೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಪಾಲಿಕೆ ಮಾಜಿ ಸದಸ್ಯ ಜಯಶಂಕರಸ್ವಾಮಿ, ವಿಕ್ರಂ ಅಯ್ಯಂಗಾರ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಸ್ಥಳ: ಚಾಮುಂಡಿಪುರಂ ಶಾಖೆ ಗ್ರಂಥಾಲಯ ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ :** ಉದ್ಘಾಟನಾ ಸಮಾರಂಭ, ಉದ್ಘಾಟನೆ : ಡಾ. ತೇಜಸ್ವಿನಿ ಅನಂತಕುಮಾರ್, ಉಪಸ್ಥಿತರು : ಕರ್ನಾಟಕ ಬ್ಯಾಂಕ್ ಉಪಮಹಾಪ್ರಬಂಧಕರಾದ ಸುಮನಾ ಘಾಟೆ, ಲೇಖಕಿ ಡಾ. ದೀಪಾ ಫಡ್ಕೆ, ಟ್ರಸ್ಟ್ ಗೌರವ ಅಧ್ಯಕ್ಷ ಶ್ರೀಕರ ಹೆಬ್ಬಾರ್, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ :** ಡಾ. ಶಿವಕುಮಾರ ಸ್ವಾಮೀಜಿ ಅವರ 115ನೇ ಪುಣ್ಯಸ್ಮರಣೆ ಮತ್ತು ಸಾಧಕ ಮಹಿಳೆಯರಿಗೆ 'ಕಸ್ತೂರ ಬಾ' ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ನಂದೀಶ್ ಹಂಚೆ, ಪ್ರಶಸ್ತಿ ಪ್ರದಾನ : ಚುಟುಕು ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ತೋಂಟದಾರ್ಯ, ಸಿದ್ಧಗಂಗಾ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಡಾ. ಎಂ.ಜಿ.ಆರ್. ಅರಸ್, ಪುಸ್ತಕ ತಾಂಬೂಲ ವಿತರಣೆ : ದಾವಣಗೆರೆ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ರಾಜಶೇಖರ ಗುಂಡಗಟ್ಟಿ, ನುಡಿನಮನ : ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ಅಧ್ಯಕ್ಷೆ ಡಾ. ರತ್ನಹಾಲಪ್ಪಗೌಡ, ಸ್ಥಳ: ಜೆಎಸ್‌ಎಸ್ ಮಹಿಳಾ ಕಾಲೇಜು ಹಾಸ್ಟೆಲ್ ಸಭಾಂಗಣ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ಮಾರ್ ಥಾಮಸ್ ಸಿರಿಯನ್ ಚರ್ಚ್ :** ಚರ್ಚ್ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಡಾ. ಮಾಥ್ಯೂಸ್ ಮಾರ್ ಮಾಕರಿಯೋಸ್ ಎಪಿಸ್ಕೋಪಾ, ಪ್ರಾಸ್ತಾವಿಕ ಭಾಷಣ : ಕರ್ನಾಟಕ ಪೊಲೀಸ್ ಅಕಾಡೆಮಿ ಸಹಾಯಕ ನಿರ್ದೇಶಕರಾದ ದಿವ್ಯ ಸಾರಾ ಥಾಮಸ್, ಉಪಸ್ಥಿತರು : ಕ್ಯಾಥೋಲಿಕ್ ಚರ್ಚ್ ಬಿಷಪ್ ಡಾ. ಕೆ.ಎ. ವಿಲಿಯಂ, ಶಾಸಕರಾದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಮಾಜಿ ಶಾಸಕರಾದ ವಾಸು, ಎಂ.ಕೆ. ಸೋಮಶೇಖರ್, ಸ್ಥಳ: ಹೆಬ್ಬಾಳು 2ನೇ ಹಂತ, ಸಂಜೆ 4ಕ್ಕೆ

■ **ಜನ ಚೈತನ್ಯ ಫೌಂಡೇಷನ್ :** ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ಭೀಮ ಚೈತನ್ಯ ಸಮಾರಂಭ, ಉದ್ಘಾಟನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖ್ಯ ಅತಿಥಿಗಳು : ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮಾಜಿ ಮೇಯರ್ ನಾರಾಯಣ, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್. ಚನ್ನಪ್ಪ, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಎನ್. ಮುನಿರಾಜು, ಸ್ಥಳ: ಪುರಭವನ, ಸಂಜೆ 4.30ಕ್ಕೆ.

■ **ವ್ಯವಸ್ಥಾಪಕರು :** ಡಾ. ಎಚ್.ಆರ್. ಕೃಷ್ಣಯ್ಯಗೌಡ ಅವರ ಕೃತಿಗಳ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, ಉದ್ಘಾಟನೆ : ತುಮಕೂರು ವಿವಿ ಕುಲಸಚಿವ ಡಾ. ಕೆ. ಶಿವಚಿತ್ತಪ್ಪ, ಕೃತಿಗಳ ಲೋಕಾರ್ಪಣೆ : ಡಾ. ಡಿ.ವಿ. ಗೋಪಾಲಪ್ಪ, ಡಾ. ಬಿ. ಗೋಪಾಲ್ ಸಿಂಗ್, ಡಾ. ಎಂ.ಜಿ. ಬಸವರಾಜ, ಸ್ಥಳ: ಹೋಟೆಲ್ ಸಿದ್ದಾರ್ಥ, ಹಾರ್ಡಿಂಜ್ ಸರ್ಕಲ್, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು–ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಎಮ್.ಆರ್, ಸುಧಾ ಮತ್ತು ಟಿ.ಎನ್. ಅಶ್ವಿನಿ, ವ್ಯಾಖ್ಯಾನ– ಮೊರಬದ ಮಲ್ಲಿಕಾರ್ಜುನ, 7.15ತ್ಯಾಜ್ಯ ನಿಭಾಯಿಸುವ ರೀತಿ–ಪ್ರಾಯೋಜಿತ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ವಿ. ವಂಶಿಧರ್– ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ : 12.45 ಜನಪದಗೀತೆ–ಸರೋಜಮ್ಮ ಮತ್ತು ತಂಡ, 1.20 ಭಾವಗೀತೆ, 3.35 ಮಕ್ಕಳ ಮಂಟಪ–ನಂದ ಗೋಕುಲ, ಪ್ರಸ್ತುತಿ– ಕೆ.ಬಿ. ಮೀನಾ, 4.00 ನಾಟಕ 'ಅಮ್ಮ' ಮೂಲ ಹಿಂದಿ–ವಿಷ್ಣು ಪ್ರಭಾಕರ್, ಕನ್ನಡ ಅನುವಾದ ಪಾವತಿ ಜಿ.ಐತಾಳ್, ನಿರ್ಮಾಣ–ಬಿ.ಎಂ.ಶರಭೇಂದ್ರಸ್ವಾಮಿ, 4.30 ನೆನಪಿನಂಗಳ–ಹಿರಿಯ ಸಾಹಿತಿ ಡಾ.ಎಂ.ಅಕಬರ ಅಲಿ ಅವರೊಂದಿಗೆ ಜಿ.ಕೆ. ರವೀಂದ್ರ ಕುಮಾರ್ ಅವರು ನಡೆಸಿದ್ದ ಸಂವಾದ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ–ಕಿಸಾನ್ ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಜನಪದ ಸಂಗೀತ–ಚಿಕ್ಕಮಾದಮ್ಮ ಮತ್ತು ತಂಡ, 9.15 ವಿನೋದ ಭಾಷಣ– 'ಚಿಲ್ಲರೆ ವಿಷಯ' ಮಾತನಾಡುತ್ತಾರೆ ಪ್ರವೀಣ್ ಕುಮಾರ್ ಮಾವಿನ ಕಾಡು, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಶಕ್ತಿ ಪದ್ ನಾಗ್–ಬಾನ್ಸುರಿ ವಾದನ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮ ಬೋಧ ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಜೆ.ಪಿ.ನಗರ ಶರಣ ವೇದಿಕೆ :** ಸಿದ್ಧಗಂಗಾ ಶ್ರೀಗಳ 115ನೇ ಜಯಂತಿ ಮಹೋತ್ಸವ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಪುಟ್ಟರಾಜಪ್ಪ, ಮುಖ್ಯ ಅತಿಥಿಗಳು : ಮುಡಾ ಆಯುಕ್ತ ಡಾ. ಡಿ.ಬಿ. ನಟೇಶ್, ನುಡಿನಮನ : ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ನಂದೀಶ್ ಹಂಚೆ, ಸ್ಥಳ: ಅಕ್ಕಮಹಾದೇವಿ ಪ್ರತಿಮೆ ಆವರಣ, ಜೆ.ಪಿ.ನಗರ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಿಂದ ವಾಸಾಂಸಿ ಜೀರ್ಣಾನಿ ನಾಟಕ ಪ್ರದರ್ಶನ, ನಿರ್ದೇಶನ : ಗೋಪಾಲಕೃಷ್ಣ ನಾಯರಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀರಾಮ ಪಟ್ಟಾಭಿಷೇಕ, ಸಂಜೆ 6.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಕು. ಕೀರ್ತನ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ.

■ **ಜಿಪಿಐಇಆರ್ ರಂಗ ತಂಡ :** ಡಾ. ರಾಜ್‌ಕುಮಾರ್ ಸ್ಮರಣೆ ರಂಗೋತ್ಸವ, ಖುಷ್ವಂತ್ ಸಿಂಗ್ ಅವರ 'ಟ್ರೈನ್ ಟು ಪಾಕಿಸ್ತಾನ್' ಕಾದಂಬರಿ ಆಧಾರಿತ ನಾಟಕ 'ಕರುಳ ತೆಪ್ಪದ ಮೇಲೆ', ನಾಟಕ ರೂಪ : ಚಿದಾನಂದ ಸಾಲಿ, ಸಂಗೀತ : ಶ್ರೀನಿವಾಸ್ ಭಟ್, ನಿರ್ದೇಶನ : ಎಂ.ಪಿ. ಹರಿದತ್ತ ಅರಮನೆ ನಗರಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ

■ **ಕರುನಾಡ ವಿಜಯಸೇನೆ :** ಹನುಮ ಜಯಂತಿ ಉತ್ಸವ, ಸ್ಥಳ: ಮಹಾರಾಜ ಕಾಲೇಜು ಮೈದಾನದಿಂದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದವರೆಗೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕದಂಬ ರಂಗ ವೇದಿಕೆ :** ಕೆ.ಎಸ್. ಪ್ರದೀಪ್ ಕುಮಾರ್ ಅವರ 'ಕಾಮನಬಿಲ್ಲು' ಕವನ ಸಂಕಲನ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ಸಾಹಿತಿ ಸತೀಶ್ ಜವರೇಗೌಡ, ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಉಪಸ್ಥಿತರು: ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

ದೊಡ್ಡಹುಂಡಿ, ಮೈಸೂರು ತಾಲೂಕು

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಸಮುದಾಯ ಜೀವನ ಶಿಬಿರ, ಬೆಳಗ್ಗೆ 6.15 ರಿಂದ ಧ್ವಜಾರೋಹಣ ಮತ್ತು ಸಾಮೂಹಿಕ ಪ್ರಾರ್ಥನೆ, ಬೆಳಗ್ಗೆ 7.45 ರಿಂದ ಪರಿಶುದ್ಧ ಪರಿಸರಕ್ಕೆ ಪರಿಶ್ರಮ–ಶ್ರಮದಾನ, ಬೆಳಗ್ಗೆ 9ಕ್ಕೆ ಹಸಿವಿನ ಧ್ಯಾನಕ್ಕೆ ಅಲ್ಪ ವಿರಾಮ, ಮಧ್ಯಾಹ್ನ 12.30ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ವಿದ್ಯಾವಿಕಾಸ ಶಿಕ್ಷಣ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಡಾ. ರಾಜಗೋಪಾಲ್, ಮುಖ್ಯ ಅತಿಥಿಗಳು : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಬಿಂದುಶ್ರೀ, ಅಧ್ಯಕ್ಷತೆ : ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಡಾ. ಮಹೇಶ ದಳಪತಿ, ಸ್ಥಳ: ಮೊರಾರ್ಜಿ ದೇಸಾಯಿ ವಸತಿ ಶಾಲೆ.

ತಳೂರು ಗ್ರಾಮದಲ್ಲಿ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮ

ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡಿರುವ ಪ್ರಗತಿಪರ ರೈತ ಸೋಮಶೇಖರ್ ಸಾಧನೆ ನೆಲೆಯಲ್ಲಿ ಸಚಿವರ ಸಂಭ್ರಮ

ಇಡೀ ದಿನ ರೈತರೊಂದಿಗೆ ಕಳೆದರು... ಅನ್ನದಾತರ ಸಮಸ್ಯೆಗಳನ್ನು ಆಲಿಸಿದರು....

● ಸರ್ಕಾರದ ಯೋಜನೆ ಪರಿಚಯಿಸಿದರು ● ನೇಗಿಲಯೋಗಿಯ ನೆಮ್ಮದಿಗೆ ನೆರವಾಗುವ ಭರವಸೆ ನೀಡಿದರು





ಮೈಸೂರು, ಏ.22(ಆರ್‌ಕೆಬಿ)– ಕೃಷಿ ಸಚಿವ ಬಿ.ಸಿ.ಪಾಟೀಲ್ ಶುಕ್ರವಾರ ಮೈಸೂರಿನ ತಳೂರು ಗ್ರಾಮದಲ್ಲಿ ಇಡೀ ದಿನ ರೈತರೊಂದಿಗೆ ಕಾಲ ಕಳೆದರು. ಅವರ ಸಂಕಷ್ಟಗಳನ್ನು ಆಲಿಸಿದರು. 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮದ ಮೂಲಕ ರೈತರ ಕಷ್ಟ ಸುಖಗಳ ಬಗ್ಗೆ ಮಾಹಿತಿ ಪಡೆದರು. ಅವರೊಂದಿಗೆ ಬೆರೆತು ಸರ್ಕಾರದಿಂದ ರೈತರಿಗೆ ಇರುವ ಕೃಷಿ ಯೋಜನೆಗಳು, ಸಹಾಯಧನ ಇನ್ನಿತರೆ ವಿಚಾರಗಳನ್ನು ವಿನಿಮಯ ಮಾಡಿಕೊಂಡರು.

ಮೈಸೂರಿನಿಂದ 14 ಕಿ.ಮೀ. ದೂರದಲ್ಲಿರುವ ಜಯಪುರ ಹೋಬಳಿಯ ತಳೂರು ಗ್ರಾಮದಲ್ಲಿ ಪ್ರಗತಿಪರ ರೈತ, ಕೃಷಿ ಪಂಡಿತ ಟಿ.ಎಸ್.ಸೋಮಶೇಖರ್ ಅವರು ತಮ್ಮ 6 ಎಕರೆ ತೋಟದಲ್ಲಿ ಅಳವಡಿಸಿಕೊಂಡಿರುವ ಸಮಗ್ರ ಕೃಷಿ ಪದ್ಧತಿಯನ್ನು ಸಚಿವರು ವೀಕ್ಷಿಸಿದರು. ಹಸಿರೆಲೆ ಗೊಬ್ಬರ, ಸಾವಯವ ಗೊಬ್ಬರ ಸಂಸ್ಕರಿಸುವ ವಿಧಾನ, ಎರೆಹುಳು ಗೊಬ್ಬರ, ಹನಿ ನೀರಾವರಿ, ಜೇನು ಸಾಕಾಣಿಕೆ, ಮಾವಿನ ತೋಪು, ಪಪ್ಪಾಯಿ, ಬಾಳೆ, ಕಲ್ಲಂಗಡಿ, ಹಾಗಲಕಾಯಿ, ಬಣ್ಣದ ದಪ್ಪ ಮೆಣಸಿನಕಾಯಿ, ಮಣ್ಣು ಮತ್ತು ಮಳೆ ನೀರಿನ ಸಂರಕ್ಷಣೆ, ಕೃಷಿ ಹೊಂಡ, ಮೀನು ಸಾಕಾಣಿಕೆ, ಜಾನುವಾರುಗಳ ಮೇವು ತಯಾರಿಕೆ ಇತ್ಯಾದಿ ಎಲ್ಲವನ್ನೂ ವೀಕ್ಷಿಸಿದರು.

ಸರ್ಕಾರದಿಂದ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳಿಂದ ರೈತರು ಏನೆಲ್ಲಾ ಯೋಜನೆ ಮತ್ತು ಸಬ್ಸಿಡಿಗಳನ್ನು ಬಳಸಿಕೊಂಡು ಆರ್ಥಿಕವಾಗಿ ಸಬಲರಾಗಬಹುದು ಎಂಬುದನ್ನು ಪ್ರತ್ಯಕ್ಷವಾಗಿ ನೋಡಿದರು. ಇದೇ ಸಮಗ್ರ ಕೃಷಿಯನ್ನು ರೈತರು ಅಳವಡಿಸಿಕೊಂಡರೆ ಆರ್ಥಿಕವಾಗಿ, ಸ್ವಾಭಿಮಾನದಿಂದ ಬದುಕು ನಡೆಸಲು ಸಾಧ್ಯವಿದೆ ಎಂಬುದನ್ನು ರೈತರಿಗೆ ಮನದಟ್ಟು ಮಾಡಿಕೊಟ್ಟರು.

ಪ್ರಗತಿಪರ ರೈತ ಟಿ.ಎಸ್.ಸೋಮಶೇಖರ್ ಅವರು ಪಾಲಿಹೌಸ್ ಘಟಕದಲ್ಲಿ ಜರ್ಬೇರಾ ಹೂವಿನ ಗಿಡಗಳನ್ನು ಬೆಳೆದು ತಿಂಗಳಿಗೆ ಕನಿಷ್ಠ 5 ಲಕ್ಷ ರೂ. ಆದಾಯ ಪಡೆಯುತ್ತಿರುವ ಬಗ್ಗೆ ಮಾಹಿತಿ ಪಡೆದರು. ಈ ಅಲಂಕಾರಿಕ ಹೂವುಗಳಿಗೆ ಭಾರೀ ಬೇಡಿಕೆ ಇದ್ದು, ಮದುವೆ ಮನೆಗಳು ಇನ್ನಿತರೆ ಪ್ರಮುಖ ಸಮಾರಂಭಗಳಲ್ಲಿ ಇದನ್ನು ಬಳಸಲಾಗುತ್ತದೆ. ಹೀಗಾಗಿ ಇದನ್ನು ಬೆಳೆಯುವುದರಿಂದ ರೈತರಿಗೆ ಹೆಚ್ಚಿನ ಆದಾಯವು ದೊರೆಯಲಿದೆ ಎಂದರು.

ದೇಶಕ್ಕೆ ಅನ್ನ ನೀಡುವ ರೈತರಲ್ಲಿ ಆತ್ಮವಿಶ್ವಾಸ ಮೂಡಿಸುವ ಉದ್ದೇಶದಿಂದ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮ ಆಯೋಜಿಸಿ, ರೈತರ ಹೊಲಕ್ಕೆ ಸರ್ಕಾರವನ್ನು ತೆಗೆದುಕೊಂಡು ಹೋಗುವ ಈ ಕಾರ್ಯಕ್ರಮದಲ್ಲಿ ಸಚಿವ ಬಿ.ಸಿ.ಪಾಟೀಲ್ ಭಾಗವಹಿಸಿ, ಕೃಷಿ ಕ್ಷೇತ್ರದಲ್ಲಾಗಿರುವ ಬದಲಾವಣೆಗಳ ಬಗ್ಗೆ ರೈತರಿಗೆ ತಿಳುವಳಿಕೆ ಮೂಡಿಸಿದರು.

ರೈತರೊಂದಿಗೆ ಒಂದು ದಿನ ಕಾರ್ಯಕ್ರಮ ಒಂದು ರೀತಿ ರೈತರ ಸಂತೆಯಾಗಿ ಮಾರ್ಪಟ್ಟಿತ್ತು. ಜಿಲ್ಲೆಯ ನಾನಾ ಕಡೆಗಳಿಂದ ರೈತರು ಇಲ್ಲಿಗೆ ಆಗಮಿಸಿದ್ದರು. ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಂದ ರೈತರಿಗೆ ಇದೇ ಸಂದರ್ಭದಲ್ಲಿ ಸಚಿವರು ವಿವಿಧ ರೈತ ಫಲಾನುಭವಿಗಳಿಗೆ ಸಬ್ಸಿಡಿ ಯೋಜನೆಯಡಿ ವಿವಿಧ ಕೃಷಿ ಪರಿಕರಗಳನ್ನು ವಿತರಿಸಿದರು. ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಕೃಷಿ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದರು.

ಸಚಿವರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ರೈತ ಸಂಕೇತವಾದ ಹಸಿರು ಶಾಲಿನ ಪೇಟ ತೊಟ್ಟು ಮಿಂಚಿದರು. ರೈತರೊಡನೆ ಬೆರೆತು ಸಮಾಲೋಚಿಸಿದರು.

ನಂತರ ಹೊಂಬಾಳೆ, ಬಾಳೆ ದಿಂಡಿನಿಂದ ಅಲಂಕೃತಗೊಂಡಿದ್ದ ವೇದಿಕೆಗೆ ಆಗಮಿಸಿದ ಸಚಿವ ಬಿ.ಸಿ.ಪಾಟೀಲ್ ರಾಗಿ ಪೂಜೆ ನೆರವೇರಿಸಿದರು. ದೀಪ ಬೆಳಗಿಸಿ, ಹೊಂಬಾಳೆ ತೆರೆದು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಕಾವೇರಿ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಎನ್.ಶಿವಲಿಂಗಯ್ಯ, ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಎನ್.ಆರ್.ಕೃಷ್ಣಪ್ಪಗೌಡ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಕಲ್ಮಳ್ಳಿ ಶಿವಕುಮಾರ್, ಜಲಾನಯನ ಅಭಿವೃದ್ಧಿ ಇಲಾಖೆ ನಿರ್ದೇಶಕ ಡಾ.ಬಿ.ವೈ.ಶ್ರೀನಿವಾಸ್, ಕೃಷಿ ಇಲಾಖೆ ನಿರ್ದೇಶಕಿ ಡಾ.ಸಿ.ಎನ್.ನಂದಿನಿಕುಮಾರಿ, ಕೃಷಿ ಪಂಡಿತ ಪ್ರಗತಿಪರ ರೈತ ಟಿ.ಎಸ್.ಸೋಮಶೇಖರ್, ಜಂಟಿ ಕೃಷಿ ನಿರ್ದೇಶಕ ಡಾ.ಎಂ.ಮಹಂತೇಶಪ್ಪ ಇನ್ನಿತರರು ಉಪಸ್ಥಿತರಿದ್ದರು.

ನೀವು ಹೇಳುತ್ತಿರುವುದು ಸುಳ್ಳು... ರೈತರಿಗೆ ಯಾವ ಸಲವತ್ತು ಸಿಗುತ್ತಿಲ್ಲ...

ಕೃಷಿ ಸಚಿವರ ಭಾಷಣದ ನಡುವೆ ಕೇಳಿ ಬಂದ ದೂರು, ಕೆಲ ಹೊತ್ತು ಗದ್ದಲ

ಮೈಸೂರು, ಏ.22(ಆರ್‌ಕೆಬಿ)– ನೀವು ಹೇಳುತ್ತಿರುವುದು ಸುಳ್ಳು. ರೈತರಿಗೆ ಯಾವುದೇ ಸವಲತ್ತು ಸಿಗುತ್ತಿಲ್ಲ ಎಂದು ಕೆಲ ರೈತ ಮುಖಂಡರು ಸಚಿವರ ಭಾಷಣದ ನಡುವೆ ಕೂಗಿದ ಪ್ರಸಂಗ ನಡೆಯಿತು.

ಸಚಿವ ಬಿ.ಸಿ.ಪಾಟೀಲ್ ಅವರು ತಮ್ಮ ಭಾಷಣದಲ್ಲಿ ಸರ್ಕಾರ ರೈತರಿಗೆ ನೀಡುತ್ತಿರುವ ಸಹಾಯಧನ ಮತ್ತು ಯೋಜನೆಗಳ ಬಗ್ಗೆ ಹೇಳುತ್ತಿದ್ದರು. ಆಗ ಸಭಿಕರ ಮಧ್ಯೆ ನೀವು ಹೇಳುತ್ತಿರುವುದು ಸುಳ್ಳು... ರೈತರಿಗೆ ಯಾವ ಸವಲತ್ತುಗಳು ಸಿಗುತ್ತಿಲ್ಲ. ನನಗೆ ನೇರವಾಗಿ ಫೋನ್ ಮಾಡಿ ಎನ್ನುತ್ತೀರಿ. ಆದರೆ ಫೋನ್ ಮಾಡಿದರೆ ಫೋನ್ ತೆಗೆಯುತ್ತಿಲ್ಲ. ಹೀಗಾದರೆ ನಮ್ಮ ನೋವು ಯಾರೊಂದಿಗೆ ಹೇಳಿಕೊಳ್ಳಬೇಕು ಎಂದು ಕೂಗಿ ಹೇಳಿದರು. ಏಕಾಏಕಿ ಇಂಥ ಕೂಗು, ಗದ್ದಲ ಉಂಟಾದಾಗ ಸಚಿವರು ತಮ್ಮ ಭಾಷಣದ ಮಧ್ಯೆಯೇ ಅವರನ್ನು ತಾಳ್ಮೆಯಿಂದಲೇ ಸಮಾಧಾನಪಡಿಸಲು ಯತ್ನಿಸಿದರು. ಅಂಥ ಯಾವುದೇ ಪ್ರಸಂಗ ಇದ್ದರೂ ಸರಿಪಡಿಸಲೆಂದೇ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮ ಆಯೋಜಿಸಿದ್ದೇವೆ. ಪ್ರಶ್ನೆ ಕೇಳಿದರೆ ನನಗೆ ಬೇಜಾರಾಗುವುದಿಲ್ಲ. ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಚರ್ಚೆ ಮಾಡೋಣ. ಸಮಸ್ಯೆ ಬಗೆಹರಿಸಲೆಂದೇ ಇಲ್ಲಿಗೆ ಬಂದಿದ್ದೇನೆ. ಕುಳಿತು ಚರ್ಚಿಸಿ ಸಮಸ್ಯೆ ಸರಿಪಡಿಸುವುದಾಗಿ ಭರವಸೆ ನೀಡಿದರು.

ರೈತರು ಒಂದೇ ಬೆಳೆಗೆ ಸೀಮಿತರಾಗದೆ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ

● ರೈತರು ಸ್ವಾವಲಂಬಿ ಜೀವನ ನಡೆಸಲೆಂಬುದೇ ಸರ್ಕಾರದ ಆಶಯ
● 'ರೈತರೊಂದಿಗೆ ಒಂದು ದಿನ' ಕೃಷಿ ಸಚಿವ ಬಿ.ಸಿ.ಪಾಟೀಲ್

ಮೈಸೂರು, ಏ.22(ಆರ್‌ಕೆಬಿ)– ಕೃಷಿ ನಾಶವಾದರೆ ದೇಶಕ್ಕೆ ದುರ್ಭಿಕ್ಷ ಬರುತ್ತದೆಂದು ಹಿರಿಯರು ಹೇಳಿದ್ದಾರೆ. ಅದು ನಿಜವೂ ಹೌದು. ಅನ್ನ ಇಲ್ಲದಿದ್ದರೆ ಬದುಕಲಾಗದು. ಅಂತಹ ಅನ್ನ ಬೆಳೆಯುವ ರೈತರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು.

> "ರೈತರಿಗೆ ಏನಾದರೂ ಮಾಡಬೇಕೆಂದು ಬಿ.ಸಿ.ಪಾಟೀಲ್‌ರು ಹಠತೊಟ್ಟು ಕೃಷಿ ಸಚಿವರಾದವರು. ಕೃಷಿಕರ ಸಮಸ್ಯೆಗಳನ್ನು ಪರಿಹರಿಸಲೆಂದೇ ಎಲ್ಲಾ ಜಿಲ್ಲೆಗಳಲ್ಲಿ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮದ ಮೂಲಕ ಇಡೀ ದಿನ ರೈತರೊಂದಿಗೆ ಇದ್ದು ವಿಚಾರ ವಿನಿಮಯ ಮಾಡಿ, ಸಮಸ್ಯೆಗಳನ್ನು ಪರಿಹರಿಸುವ ಯತ್ನ ಮಾಡುತ್ತಿದ್ದಾರೆ.
> – ಎಸ್.ಟಿ.ಸೋಮಶೇಖರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

> "ರೈತರಿಗೆ ರಾತ್ರಿ ವಿದ್ಯುತ್ ನೀಡುವುದರಿಂದ ಪ್ರಯೋಜನವಿಲ್ಲ. ಹೀಗಾಗಿ ಸರ್ಕಾರ ಹಗಲು ಹೊತ್ತಿನಲ್ಲಿಯೇ ರೈತರಿಗೆ 7 ಗಂಟೆ ಕಾಲ ವಿದ್ಯುತ್ ನೀಡಬೇಕು. ಇದನ್ನು ಕೃಷಿ ಸಚಿವರು ಗಮನಿಸಬೇಕು.
> – ಜಿ.ಟಿ.ದೇವೇಗೌಡ, ಶಾಸಕ, ಚಾಮುಂಡೇಶ್ವರಿ ಕ್ಷೇತ್ರ

ತಳೂರು ಗ್ರಾಮದಲ್ಲಿ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನನಗೆ ಅರಣ್ಯ ಇಲಾಖೆ ಕೊಟ್ಟರು. ಪ್ರಾಣಿಗಳ ಜತೆ ಬೇಡ, ನಾನು ಮನುಷ್ಯರ ಜೊತೆ ಓಡಾಡಲು ಅವಕಾಶ ನೀಡಿ ಎಂದು ಹಠ ಮಾಡಿ ಕೃಷಿ ಇಲಾಖೆಯನ್ನೇ ಕೇಳಿ ಪಡೆದುಕೊಂಡೆ. ರೈತರೊಂದಿಗೆ ಇರಬೇಕು. ಅವರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಬೇಕು ಎಂಬುದು ನನ್ನ ಉದ್ದೇಶ. ಕೃಷಿ ಸಚಿವನಾಗಿ ಕನಿಷ್ಠ 100 ಮಂದಿ ರೈತರ ಕಣ್ಣೀರು ಒರೆಸಿದರೆ ನಾನು ಕೃಷಿ ಸಚಿವನಾಗಿದ್ದಕ್ಕೂ ಸಾರ್ಥಕವಾಗುತ್ತದೆ ಎಂದರು.

ಸಚಿವನಾಗಿ ಕೇವಲ ವಿಧಾನಸೌಧದಲ್ಲಿ ಕುಳಿತುಕೊಳ್ಳುವ ಬದಲಿಗೆ ರೈತರ ಮನೆ ಬಾಗಿಲಿಗೆ, ಹೊಲಗಳಿಗೆ ಹೋಗಬೇಕು. ನೇರವಾಗಿ ರೈತರನ್ನು ಕಂಡು, ಮಾತನಾಡಿಸಿ, ಅವರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಿ ಕೆಲಸ ಮಾಡಬೇಕು. ಅವರ ಕಷ್ಟಗಳನ್ನು ಆಲಿಸಿ, ಸಮಸ್ಯೆಗಳಿಗೆ ಪರಿಹಾರ ಕೈಗೊಳ್ಳಬೇಕು ಎಂಬುದು ನನ್ನ ಮಹದಾಸೆಯಾಗಿತ್ತು. ಹಾಗಾಗಿ ರೈತರೊಂದಿಗೆ ಒಂದು ದಿನ ಕಾರ್ಯಕ್ರಮ ರೂಪಿಸಿದ್ದಾಗಿ ತಿಳಿಸಿದರು.

ಪ್ರತಿ ಜಿಲ್ಲೆಯಲ್ಲೂ ರೈತರೊಂದಿಗೆ ಒಂದು ದಿನ ಕಳೆಯುತ್ತಿದ್ದು, ಇದು 15ನೇ ಜಿಲ್ಲೆಯಾಗಿದ್ದು, ಉಳಿದ ಜಿಲ್ಲೆಗಳಲ್ಲೂ ಈ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಪ್ರಗತಿಪರ ರೈತ ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ತಳೂರಿನ ಟಿ.ಎಸ್. ಸೋಮಶೇಖರ್ 3.5 ಎಕರೆ ಜಮೀನಿನಲ್ಲಿ ಹೂವು, ಹಣ್ಣು, ತರಕಾರಿ ಬೆಳೆದಿದ್ದಾರೆ. ಮೀನು ಸಾಕಿದ್ದಾರೆ. ಹೂವು ಬೆಳೆದು ತಿಂಗಳಿಗೆ 5 ಲಕ್ಷಕ್ಕೂ ಹೆಚ್ಚು ಸಂಪಾದಿಸುತ್ತಿದ್ದಾರೆ. ಇತರೆ ರೈತರು ಇದೇ ರೀತಿ ಮಾಡಿದರೆ ಕೃಷಿ ಸ್ವಾವಲಂಬಿಯಾಗುತ್ತದೆ. ರೈತರ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರೈತರ ಮಕ್ಕಳಿಗೆ ಸ್ಕಾಲರ್ ಶಿಪ್, ವಿದ್ಯಾನಿಧಿ ಮಾಡಿದರು. ಎಲ್ಲಾ ರೀತಿಯ ರೈತರ ಮಕ್ಕಳಿಗೆ 11,000 ರೂ. ಸ್ಕಾಲರ್ ಶಿಪ್ ನೀಡುತ್ತಿರುವುದು ಹೆಮ್ಮೆ ಪಡಬೇಕಾದ ವಿಷಯ. ರೈತರ ಹೆಣ್ಣು ಮಕ್ಕಳಿಗೂ 2000 ರೂ. ಸ್ಕಾಲರ್‌ಶಿಪ್ ನಮ್ಮ ಸರ್ಕಾರ ನೀಡುತ್ತಿದೆ. ಕೃಷಿ ಸಂಜೀವಿನಿ ಯೋಜನೆ ಯಡಿ ಈಗಾಗಲೇ ಸರ್ಕಾರ 60 ವಾಹನ ಗಳನ್ನು ನೀಡಿದ್ದು, ಈ ವರ್ಷ 164 ವಾಹನಗಳನ್ನು ನೀಡಲಿದೆ. ಈ ವಾಹನಗಳು ರೈತರ ಕೃಷಿ ಚಟುವಟಿಕೆಗೆ ನೆರವಾಗಲಿದೆ ಎಂದು ಹೇಳಿದರು.

ರಸಗೊಬ್ಬರ ಅಕ್ರಮ ಮಾರಾಟ: ಸಚಿವರಿಗೆ ಮನವಿ



ಮೈಸೂರು, ಏ.22(ಆರ್‌ಕೆಬಿ)– ರಸಗೊಬ್ಬರ ಕೃತಕ ಅಭಾವ ಸೃಷ್ಟಿಸಿ, ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಾಟ ಮಾಡಲಾಗುತ್ತಿದ್ದು, ಅಂಥವರ ವಿರುದ್ಧ ಕಾನೂನು ಕ್ರಮ ಕೈಗೊಂಡು ರೈತರಿಗೆ ಸರಾಗವಾಗಿ ರಸಗೊಬ್ಬರ ದೊರೆಯುವಂತೆ ಮಾಡಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಒತ್ತಾಯಿಸಿದೆ.

ರೈತರೊಂದಿಗೆ ಒಂದು ದಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ತಳೂರಿಗೆ ಆಗಮಿಸಿದ ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರಿಗೆ ಈ ಸಂಬಂಧ ಸಂಘದ ತಾಲೂಕು ಘಟಕದ ಬರಡನಪುರ ನಾಗರಾಜ್, ಅತ್ತಹಳ್ಳಿ ದೇವರಾಜ್ ಇನ್ನಿತರರ ನೇತೃತ್ವದಲ್ಲಿ ಮನವಿಪತ್ರ ನೀಡಿದರು.

ರಸಗೊಬ್ಬರ ಮಾರಾಟಗಾರರು ಯೂರಿಯಾ, ಡಿಎಪಿ, ಪೊಟಾಶ್ ಇನ್ನಿತರ ರಸಗೊಬ್ಬರಗಳನ್ನು ದಾಸ್ತಾನು ಇದ್ದರೂ ಇಲ್ಲವೆಂದು ಹೇಳಿ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ರೈತರಿಗೆ ಬೇಡವಾದ ಮೈಕ್ರೋ ನ್ಯೂಟ್ರಿಯಂಟ್ ತೆಗೆದುಕೊಂಡರೆ ಮಾತ್ರ ರಸಗೊಬ್ಬರ ನೀಡುವುದಾಗಿ ಮಾರಾಟಗಾರರು ಹೇಳುತ್ತಿದ್ದಾರೆ. ಬೇಕೆಂದೇ ರಸಗೊಬ್ಬರದ ಅಭಾವ ಸೃಷ್ಟಿಸಿ, ಕಾಳಸಂತೆಯಲ್ಲಿ ಮಾರಾಟ ಮಾಡುವ ಮೂಲಕ ರೈತರಿಗೆ ಕಿರುಕುಳ ನೀಡಲಾಗುತ್ತಿದೆ ಎಂದು ಮನವಿ ಪತ್ರದಲ್ಲಿ ಆರೋಪಿಸಿದ್ದಾರೆ.

ಏ.29 ರಂದು ಮೈಸೂರಿನಲ್ಲಿ ಜನತಾ ಜಲಧಾರೆ ಕಾರ್ಯಕ್ರಮ

● ಕಾರ್ಯಕರ್ತರೊಂದಿಗೆ ವಿಧಾನ ಪರಿಷತ್ ಸದಸ್ಯ ಶ್ರೀಕಂಠೇಗೌಡ ಚರ್ಚೆ ● ದಕ್ಷಿಣ ಪದವೀಧರ ಚುನಾವಣೆ ಬಗ್ಗೆಯೂ ಚರ್ಚೆ



ಮೈಸೂರು, ಏ.22(ಜಿಎ)– ಮೈಸೂರಿನಲ್ಲಿ ಏ.29ರಂದು ನಡೆಯಲಿರುವ ಜನತಾ ಜಲಧಾರೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮತ್ತು ಕಾರ್ಯಕ್ರಮಕ್ಕೆ ಹೆಚ್ಚಿನ ಕಾರ್ಯಕರ್ತರನ್ನು ಒಗ್ಗೂಡಿಸುವ ಸಂಬಂಧ ಚರ್ಚಿಸಲಾಯಿತು ಎಂದು ವಿಧಾನಪರಿಷತ್ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ತಿಳಿಸಿದರು.

ದಕ್ಷಿಣ ಪದವೀದರರ ಚುನಾವಣೆ ಸಿದ್ಧತೆ ಮತ್ತು ಜನತಾ ಜಲಧಾರೆ ಯಶಸ್ವಿಗೊಳಿಸುವ ಕುರಿತು ನಾರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆ ನಡೆಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು.

ದಕ್ಷಿಣ ಪದವಿಧರರ ಕ್ಷೇತ್ರದ ಚುನಾವಣೆಗೆ ಎಚ್.ಕೆ ರಾಮು ಅವರನ್ನು ಸರ್ವಾನುಮತದಿಂದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಗಿದ್ದು, ಅಭ್ಯರ್ಥಿಯಾದ ಅವರನ್ನು ಗೆಲ್ಲಿಸಲು ವಾರ್ಡ್, ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಯಾವ ರೀತಿ ಸಂಘಟನೆ ಮಾಡಬೇಕು ಎಂಬುದರ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ಮುಖಂಡರು ಕೆಲ ಸಲಹೆಯನ್ನು ನೀಡಿದ್ದು, ಅದನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ ಎಂದರು.

ನಂತರ ದಕ್ಷಿಣ ಪದವೀಧರ ಕ್ಷೇತ್ರ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ. ರಾಮು ಮಾತನಾಡಿ, ನಾನು ಆಯ್ಕೆಯಾದರೆ ಮೊದಲು ಶಿಕ್ಷಕರು, ಸರ್ಕಾರಿ ನೌಕರು, ನಿರುದ್ಯೋಗಿಗಳು, ಐಟಿ ಬಿಟಿ ಸಂಸ್ಥೆಗಳಿಂದ ಕೆಲಸ ಕಳೆದುಕೊಂಡಿರುವವರ ಸಮಸ್ಯೆ ಬಗ್ಗೆ ಗಮನಹರಿಸುತ್ತೇನೆ ಎಂದರು.

ಡಿ.ದೇವರಾಜ ಅರಸು ಅವರ ಕಾಲದಲ್ಲಿ ನಿರುದ್ಯೋಗಿಗಳಿಗೆ 150 ರೂ. ಸ್ಟೈಫಂಡ್ ನೀಡಲಾಗುತ್ತಿತ್ತು ಅದರಂತೆ ಕಾನೂನು ಪದವಿ ನಿರುದ್ಯೋಗಿಗಳಿಗೆ ಜೀವನವನ್ನು ರೂಪಿಸಿಕೊಳ್ಳಲು ಕೆಲಸ ಸಿಗುವರೆಗೂ 5000 ಸಾವಿರ ರೂ. ಸ್ಟೈಫಂಡ್ ನೀಡಲಾಗುತ್ತಿದೆ. ಅದೇ ರೀತಿ ಪದವೀಧರ ನಿರುದ್ಯೋಗಿಗಳಿಗೂ ಕೆಲಸ ಸಿಗುವವರೆಗೂ ಸ್ಟೈಫಂಡ್ ನೀಡಬೇಕು ಎಂದು ಒತ್ತಾಯಿಸುತ್ತೇನೆ ಎಂದು ಭರವಸೆ ನೀಡಿದರು. ಸಭೆಯಲ್ಲಿ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ. ಚಲುವೇಗೌಡ, ಜಿಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ವಿಕ್ರಾಂತ್ ಪಿ.ದೇವೇಗೌಡ ಹಾಗೂ ಮೈಸೂರು ನಗರದ ಮತ್ತು ಗ್ರಾಮಾಂತರ ಜೆಡಿಎಸ್ ಮುಖಂಡರು ಭಾಗವಹಿಸಿದ್ದರು.

ನಾಳೆ 2017ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ

ಬೆಂಗಳೂರು, ಏ. 22– 2017ನೇ ಸಾಲಿನ ಕರ್ನಾಟಕ ಚಲನಚಿತ್ರ ರಾಜ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ದಿನಾಂಕ ಪ್ರಕಟಗೊಂಡಿದೆ. ಡಾ.ರಾಜ್ ಕುಮಾರ್ ಹುಟ್ಟು ಹಬ್ಬದ ದಿನದಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು 2017ನೇ ಸಾಲಿನ ಚಲನಚಿತ್ರ ಪ್ರಶಸ್ತಿಗಳನ್ನು ನೀಡಿ ಗೌರವಿಸಲಿದ್ದಾರೆ. ಏಪ್ರಿಲ್ 24 ರಂದು ಸಂಜೆ 6 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ನಡೆಯಲಿದೆ.

ಶುದ್ಧಿ, ಮಾರ್ಚ್ 22, ಪಡ್ಡಾಯಿ (ತುಳು) ಚಿತ್ರಗಳು ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಅತ್ಯುತ್ತಮ ಚಿತ್ರಗಳಾಗಿವೆ. ವಿಶೇಷ ಸಾಮಾಜಿಕ ಕಾಳಜಿಯ ಚಿತ್ರವಾಗಿ ಹೆಬ್ಬಟ್ ರಾಮಕ್ಕ, ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರವಾಗಿ ರಾಜಕುಮಾರ, ಅತ್ಯುತ್ತಮ ಮಕ್ಕಳ ಚಿತ್ರ ಎಳೆಯರು ನಾವು ಗೆಳೆಯರು, ಅತ್ಯುತ್ತಮ ನಟಿ ತಾರಾ ಅನುರಾಧ, ಅತ್ಯುತ್ತಮ ಪೋಷಕ ನಟಿ ರೇಖಾ, ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿಗೆ ವಿ.ಹರಿಕೃಷ್ಣ ಆಯ್ಕೆಯಾಗಿದ್ದಾರೆ. ಅಲ್ಲದೆ, ಇನ್ನು ಅನೇಕ ವಿಭಾಗಗಳಲ್ಲಿ ಕಲಾವಿದರು ಆಯ್ಕೆಯಾಗಿದ್ದು, ಭಾನುವಾರ ನಡೆಯಲಿರುವ ಕಾರ್ಯಕ್ರಮದಲ್ಲಿ ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಸಚಿವ ಶ್ರೀರಾಮುಲು, ಶ್ರೀ ಪ್ರಸನ್ನಾನಂದ ಸ್ವಾಮೀಜಿ ಆಹ್ವಾನಿಸದೆ ಕಾರ್ಯಕ್ರಮ: ಬೆಂಬಲಿಗರ ಪ್ರತಿಭಟನೆ



ಮೈಸೂರು, ಏ.22(ಆರ್‌ಕೆಬಿ)– ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಸರಸ್ವತಿಪುರಂನಲ್ಲಿರುವ ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರದ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರದಲ್ಲಿ ಮಹರ್ಷಿ ವಾಲ್ಮೀಕಿ ಮತ್ತು ವ್ಯಾಸ ಅಧ್ಯಯನ ಪೀಠದ ಉದ್ಘಾಟನಾ ಸಮಾರಂಭದಲ್ಲಿ ಪರಿಶಿಷ್ಟ ಪಂಗಡದ ಸಚಿವ ಶ್ರೀರಾಮುಲು ಹಾಗೂ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಅವರನ್ನು ಆಹ್ವಾನಿಸಿಲ್ಲ ಎಂದು ಆರೋಪಿಸಿ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಕಾರ್ಯಕರ್ತರು ಶುಕ್ರವಾರ ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರದ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ, ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ, ಕುಲಪತಿ ವಿರುದ್ಧ ಘೋಷಣೆಗಳನ್ನು ಕೂಗಿದರು.

ಈ ವೇಳೆ ಸ್ಥಳಕ್ಕೆ ಆಗಮಿಸಿದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಅವರು, ಆತುರದಲ್ಲಿ ಕಾರ್ಯಕ್ರಮ ನಡೆದಿದ್ದು, ಜೂನ್ ತಿಂಗಳಲ್ಲಿ ಈ ಕಾರ್ಯಕ್ರಮವನ್ನು ಮಾನಸಗಂಗೋತ್ರಿ ಆವರಣದಲ್ಲಿ ಏರ್ಪಡಿಸಿ, ಸಮುದಾಯದ ಮುಖಂಡರು ಮತ್ತು ಸ್ವಾಮೀಜಿ ಹಾಗೂ ಮಂತ್ರಿಗಳನ್ನು ಆಹ್ವಾನಿಸಿ ನಡೆಸುವುದಾಗಿ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಮುಖಂಡ ಪ್ರಭಾಕರ್ ಹುಣಸೂರು, ಶಿವಪ್ರಕಾಶ್, ಮಾದೇಶ್, ಮಂಜುನಾಥ್, ನಗರ ಕಾಂಗ್ರೆಸ್ ಪಕ್ಷದ ಎಸ್‌ಟಿ ಘಟಕದ ಅಧ್ಯಕ್ಷ ಎಸ್.ರೋಹಿತ್, ರವಿನಾಯಕ ಇನ್ನಿತರರು ಉಪಸ್ಥಿತರಿದ್ದರು.



IN THE COURT OF IV ADDL. SENIOR CIVIL JUDGE AND J.M.F.C AT MYSURU
Mis. No. 12/2021
Petitioners : Smt. Poornima and others
V/s
Respondents: Balaraju and another
R-1. Sri. Balaraju S/o Late. Rachaiah Aged about 49 years, R/at #168, T.N. Pura, Nandini Layout, 1st Stage, Nazarbad Mohalla, Mysuru - 570011

PUBLIC NOTICE

Whereas a Petition in Mis No. 12/2021 has been instituted by our client Smt. Poornima and others against the Respondents mentioned above for restoration of suit on the file of the learned IV Addl. Senior Civil Judge and J.M.F.C. Court at Mysuru. And summons issued through paper publication for the appearance of the Proposed Respondent No.1 before the Court on 30-05-2022 at 11.00 A.M. either in person or through his Advocate/s to answer the said petition.

Take notice that, in default of your appearance on the day before mentioned, the suit will be heard and determined in your absence.

By order of the Court
Sd/- Sherestedar
IV Addl. Senior Civil Judge and J.M.F.C. at Mysuru.

Advocate for Petitioners
Sri. Jayanna, Advocate
O/at #2377, 1st Floor, New Sri Lakshmidevi Medicals Building, New Kantharaj Urs Road, K.G. Koppal, Mysuru - 570014

ಗೌರವಾನ್ವಿತ 1ನೇ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು
ಅಸಲು ದಾವ ಸಂಖ್ಯೆ 366/2019
ವಾದಿ : ಜಯಲಕ್ಷ್ಮಮ್ಮ
ವಿರುದ್ಧ
ಪ್ರತಿವಾದಿ: 4. ಶ್ರೀಮತಿ ಲಕ್ಷ್ಮೀ, ಕೋಂ ಉಗ್ರೇಗೌಡ, ಬಿನ್ ಲೇಟ್ ಶಿವಲಿಂಗೇಗೌಡ, ವಯಸ್ಸು ಸುಮಾರು 40 ವರ್ಷ, ವಾಸ ಬಂಡಿಪಾಳ್ಯ, ಕಸಬಾ ಹೋ।, ಮೈಸೂರು ತಾ।.
ಶ್ರೀಮತಿ ಛಾಯ ಕೋಂ ರವಿ, ಬಿನ್ ಲೇಟ್ ಶಿವಲಿಂಗೇಗೌಡ, ವಯಸ್ಸು, ಸುಮಾರು 38 ವರ್ಷ, ವಾಸ: 2266/10ಎ, 6ನೇ ಮುಖ್ಯ ರಸ್ತೆ, ವಿನಾಯಕ ನಗರ, ಪಡುವಾರಹಳ್ಳಿ, ಮೈಸೂರು.
14. ಶ್ರೀಮತಿ ಬಿ.ಪಿ. ಗಾಯತ್ರಿ ಕೋಂ ಎಂ.ಎಂ. ಪ್ರಸನ್ನಕುಮಾರ್, ವಯಸ್ಸು ಸುಮಾರು 55 ವರ್ಷ, ವಾಸ: #45, 2ನೇ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಭಾಗಾಂಶ ಕೋರಿ ಸದರಿ ದಾವೆಯನ್ನು ಈ ಘನ ನ್ಯಾಯಾಲಯದಲ್ಲಿ ಹೂಡಿರುತ್ತಾರೆ. ಈ ಮೂಲಕ ಈ ಮೇಲ್ಕಂಡ ವಾದಿಯು ನಿಮಗೆ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ದಾವೆಯು ದಿನಾಂಕ 23.05.2022 ರಂದು ನಿಮ್ಮ ಅಂದರೆ ಪ್ರತಿವಾದಿಗಳ ಹಾಜರಾತಿಗಾಗಿ ಇರುತ್ತದೆ. ಆದುದ್ದರಿಂದ ಸದರಿ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ನೀವು ಘನ ನ್ಯಾಯಾಲಯದಲ್ಲಿ ಪ್ರತಿವಾದಿ ಗಳಾದ ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ಪರ ವಕೀಲರ ಮೂಲಕವಾಗಲೀ ಈ ಘನ ನ್ಯಾಯಾಲಯದ ಮುಂದೆ ಹಾಜರಾಗಿ ನಿಮ್ಮ ಅಹವಾಲನ್ನು ಸಲ್ಲಿಸುವುದು. ಇದಕ್ಕೆ ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಾಯನ್ನು ಪರಿಗಣಿಸಿ ಮೇಲ್ಕಂಡ ದಾವೆಯನ್ನು ಘನ ನ್ಯಾಯಾಲಯವು ಏಕಪಕ್ಷೀಯ ಎಂದು ಪರಿಗಣಿಸಿ ದಾವೆಯನ್ನು ಮುಂದಿನ ಕ್ರಮಕ್ಕಾಗಿ ತೀರ್ಮಾನ ಮಾಡಲಾಗುವುದು ಎಂದು ತಿಳಿಯಪಡಿಸಲಾಗುತ್ತದೆ. ದಿನಾಂಕ: 28–03–2022 ರಂದು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/– ಕೆ.ಎಂ.ಲೋಕೇಶ್, ವಕೀಲರು, ವಾದಿಯ ಪರ ವಕೀಲರು, ಜೆ.ಪಿ.ನಗರ, ಮೈಸೂರು, ಮೊ: 9342117187
ಸಹಿ/– ಮುಖ್ಯ ಆಡಳಿತಾಧಿಕಾರಿಗಳು, 1ನೇ ಸಿವಿಲ್ ನ್ಯಾಯಾಧೀಶರು (ಹಿ.ಶ್ರೇ) ನ್ಯಾಯಾಲಯ, ಮೈಸೂರು
ದಿನಾಂಕ: 21–04–2022 ಸ್ಥಳ: ಮೈಸೂರು

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ವಧು ಪರೀಕ್ಷೆಯ ಸಮಯದಲ್ಲಿ ನೀವು ತುಂಬಾ ಕೋಪದಲ್ಲಿದ್ರಿ, ನೆನಪಿದೆಯೇ?"

ಗಂಡ : "ಹೌದು ! ಕೋಪದಲ್ಲಿ ತೆಗೆದುಕೊಳ್ಳುವ ಯಾವ ನಿರ್ಧಾರವೂ ಸರಿಯಿರುವುದಿಲ್ಲ ಎಂದು ನಮ್ಮ ಮದುವೆಯ ನಂತರವೇ ಗೊತ್ತಾದದ್ದು"

ಮೈಸೂರು ಮಿತ್ರ

ಶನಿವಾರ, 23 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಭವಿಷ್ಯತ್ತಿನೊಂದಿಗೆ ಯಾರು ಅತೀ ಸಮೀಪವರ್ತಿಯಾಗಿದ್ದಾನೋ ಅವನನ್ನು ನಾನು ಸನ್ಮಾರ್ಗಿ ಎಂದು ಭಾವಿಸುತ್ತೇನೆ. –ಹೆನ್ರಿಕ್ ಇಬ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆಗೋದೆಲ್ಲಾ ಒಳ್ಳೆಯದಕ್ಕೆ

ನಿಮ್ಮ ಪತ್ರಗಳು

ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ ಸ್ವಾಗತಾರ್ಹ

ಮಾನ್ಯರೆ,

ಮುಂದಿನ 15 ದಿನಗಳಲ್ಲಿ ರಾಜ್ಯದಲ್ಲಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸಲಾಗುವುದೆಂಬ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರ ಹೇಳಿಕೆ ಸ್ವಾಗತಾರ್ಹವಾಗಿದೆ. ತಮ್ಮ ಚೊಚ್ಚಲ ಬಜೆಟ್‌ನಲ್ಲಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸುವ ಇಂಗಿತವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಕ್ತಪಡಿಸಿದ್ದರು.

ಕ್ಷೀರೋದ್ಯಮ ರಾಜ್ಯದಲ್ಲಿ ಬೃಹದಾಕಾರವಾಗಿ ಬೆಳೆಯುತ್ತಿದೆ. ನಂದಿನಿ ಹಾಲು, ಮೊಸರು, ಹಾಲಿನ ಪುಡಿ, ಐಸ್ ಕ್ರೀಮ್, ಪನ್ನೀರ್, ಮೈಸೂರು ಪಾಕ್, ಬರ್ಫಿ ಮುಂತಾದ ಹಾಲಿನ ಉತ್ಪನ್ನಗಳು ಸೇರಿದಂತೆ ಹಲವಾರು ವೈವಿಧ್ಯಮಯ ಉತ್ಪನ್ನಗಳನ್ನು ಸರ್ಕಾರಿ ಸ್ವಾಮ್ಯದ ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಲಿ ಮಾಡುತ್ತಿದ್ದು, ಇದರ ಕಾರ್ಯಾಚರಣೆ ರಾಜ್ಯದ ಹೊರಕ್ಕೂ ವಿಸ್ತರಿಸಲಾಗಿದೆ. ಇದು 1974 ರಲ್ಲಿ ಸಣ್ಣ ಪ್ರಮಾಣದಲ್ಲಿ ಸ್ಥಾಪನೆಗೊಂಡು, ನಂತರದ ವರ್ಷಗಳಲ್ಲಿ ಬೃಹದಾಕಾರ ರೀತಿಯಲ್ಲಿ ಬೆಳೆದಿದೆ. ಇದುವರೆವಿಗೂ ತನ್ನ ಎಲ್ಲಾ ಹಣಕಾಸಿನ ವ್ಯವಹಾರವನ್ನು ಆಯಾ ಜಿಲ್ಲಾ ಸಹಕಾರ ಬ್ಯಾಂಕ್ ಮೂಲಕ ಮಾಡುತ್ತಿದ್ದ ಕೆಎಂಎಫ್, ಮುಂದೆ ತನ್ನದೇ ಆದ ಬ್ಯಾಂಕ್ ಹೊಂದುವ ರಾಜ್ಯದ ಮೊದಲ ಸಹಕಾರಿ ಸಂಸ್ಥೆಯಾಗಲಿದೆ. ಇದು ಹಾಲು ಉತ್ಪಾದಕರಿಗೂ ಸಹಕಾರಿಯಾಗಲಿದ್ದು, ರಾಜ್ಯದ ಹೈನೋದ್ಯಮದ ಅಭಿವೃದ್ಧಿಗೆ ಪೂರಕವಾಗಲಿದೆ. ಇಂತಹ ದಿಟ್ಟ ನಿರ್ಧಾರ ಕೈಗೊಂಡ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳು.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ನಂಜನಗೂಡು ಯಾವ ರಾಜ್ಯದಲ್ಲಿದೆ!?



ಮಾನ್ಯರೆ,

ಈ ಅನುಮಾನ ಬರುವುದು ನಂಜನಗೂಡಿನ ಬಜಾರ್ ರಸ್ತೆ (ದೇವಾಲಯದ ರಸ್ತೆ) ಯಲ್ಲಿರುವ ಅಂಗಡಿಗಳನ್ನು ನೋಡಿದಾಗ.! ನಂಜನಗೂಡಿನ ಈ ಪ್ರಮುಖ ಬೀದಿಗಳಲ್ಲಿ ತಮಿಳು ಭಾಷೆಯ ಮುದ್ರಣವಿರುವ ಕೈಚೀಲಗಳನ್ನು ಮಾರಲಾಗುತ್ತಿದೆ. ತನ್ಮೂಲಕ ಇಲ್ಲಿಗೆ ರಾಜ್ಯದ ಎಲ್ಲಾ ಮೂಲೆಗಳಿಂದ ಆಗಮಿಸುವ ಭಕ್ತರ ಕನ್ನಡ ಪ್ರೇಮಕ್ಕೆ ಧಕ್ಕೆ ಉಂಟು ಮಾಡಲಾಗುತ್ತಿದೆ. ಕೈಚೀಲ ಮಾರುವುದು ವರ್ತಕರ ಹಕ್ಕು ಆದರೆ ಅವರು ಮಾರುವ ಕೈಚೀಲದ ಮೇಲೆ ತಮಿಳು ಭಾಷೆ ಏಕೆ ಬೇಕು? ನಂಜನಗೂಡಿನ ಸ್ಥಳೀಯ ಆಡಳಿತ ಕಣ್ಮುಚ್ಚಿ ಕುಳಿತಿದೆಯೇ?

–ಅರವಿಂದ್ ಶರ್ಮ, ಮೈಸೂರು.

ಗ್ರಾಮ ಪಂಚಾಯ್ತಿಯಲ್ಲೇ ಮದುವೆ ನೋಂದಣಿ ಸ್ವಾಗತಾರ್ಹ

ಮಾನ್ಯರೆ,

ಮದುವೆ ನಡೆದ ಸ್ಥಳ ಅಥವಾ ಪತಿ–ಪತ್ನಿಯರು ವಾಸಿಸುವ ಸ್ಥಳದ ಅಧಿಕಾರ ವ್ಯಾಪ್ತಿ ಹೊಂದಿರುವ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಇಷ್ಟು ದಿನ ವಿವಾಹ ನೋಂದಣಿ ಮಾಡಿಸಬೇಕಿತ್ತು. ಆದರೆ ಇನ್ನು ಮುಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಡಿಯಲ್ಲಿ ಸರ್ಕಾರ ವಿವಾಹ ನೋಂದಣಿ ಅಧಿಕಾರವನ್ನು ಪಿಡಿಓಗಳಿಗೆ ನೀಡಿರುವುದು ಸ್ವಾಗತಾರ್ಹ. ಇದರಿಂದ ಗ್ರಾಮೀಣ ಭಾಗದ ಜನರು ನಗರ ಪ್ರದೇಶಗಳಿಗೆ ಅಲೆದಾಡುವ ಪರಿಸ್ಥಿತಿ ತಪ್ಪುತ್ತದೆ ಹಾಗೂ ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ವಿವಾಹ ನೋಂದಣಿ ಮಾಡಿಸಲು ಅವಕಾಶ ಇರುವುದರಿಂದ ಸಮಯದ ಉಳಿತಾಯವಾಗುವುದಲ್ಲದೇ ಹಣದ ಅಪವ್ಯಯ ತಪ್ಪುತ್ತದೆ. ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಲೆಂದು ಮೇಲ್ನೋಟಕ್ಕೆ ಕಂಡರೂ ಭ್ರಷ್ಟರಿಗೆ ಭ್ರಷ್ಟಾಚಾರ ಮಾಡಲು ಮತ್ತೊಂದು ದಾರಿ ಮಾಡಿಕೊಟ್ಟಂತೆ. ಹಾಗಾಗಿ ಪ್ರತಿಯೊಬ್ಬ ಪ್ರಜೆಯೂ ಕೂಡ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡದೆ ಸರ್ಕಾರದ ಈ ಆದೇಶವನ್ನು ಪರಿಣಾಮಕಾರಿಯಾಗಿ ಜಾರಿ ಮಾಡಿದ್ದಲ್ಲಿ ಮಾತ್ರ ಈ ಆದೇಶದ ಉದ್ದೇಶ ಸಫಲವಾಗುತ್ತದೆ.

– ಡಾ. ದೀಪು, ಪ್ರಾಂಶುಪಾಲರು, ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು.

ಕೊರೊನಾ ಬೂಸ್ಟರ್ ಡೋಸ್ ಉಚಿತವಾಗಿ ನೀಡಲಿ

ಮಾನ್ಯರೆ,

ಏಪ್ರಿಲ್ 18 ರಿಂದ 18 ವರ್ಷ ಮೇಲ್ಪಟ್ಟವರಿಗೆ 2ನೇ ಡೋಸ್ ಪಡೆದು 9 ತಿಂಗಳು ಅಥವಾ 39 ವಾರ ಕಳೆದವರಿಗೆ ಮುನ್ನೆಚ್ಚರಿಕಾ ಡೋಸ್ ನೀಡಲು ಕೇಂದ್ರ ಸರ್ಕಾರ ತೀರ್ಮಾನಿಸಿದ್ದು, ಖಾಸಗಿಯಲ್ಲಿ ಕೋವಿಶೀಲ್ಡ್ ರೂ. 600, ಕೋವ್ಯಾಕ್ಸಿನ್‌ಗೆ ರೂ. 900 ದರ ನಿಗದಿಪಡಿಸಿದ್ದು, ಇದು ಬಡವರಿಗೆ ಹೊರೆಯಾಗಲಿದೆ. ದೇಶದಾದ್ಯಂತ 2 ಡೋಸ್ ಉಚಿತವಾಗಿ ನೀಡಿ ಹಿರಿಯ ನಾಗರಿಕರಿಗೆ 2 ಡೋಸ್ ಪಡೆದು 9 ತಿಂಗಳು ಕಳೆದವರಿಗೆ ಉಚಿತವಾಗಿ ವ್ಯಾಕ್ಸಿನ್ ನೀಡಿ ಈಗ ದರ ನಿಗದಿಪಡಿಸುವುದು ಖಂಡನೀಯ. ಸಂಭವನೀಯ 4ನೇ ಅಲೆ ಭೀತಿ ಹಿನ್ನೆಲೆಯಲ್ಲಿ ಮತ್ತು ನೆರೆ ರಾಷ್ಟ್ರವಾದ ಚೀನಾದಲ್ಲಿ ಕೊರೊನಾ ಗಣನೀಯವಾಗಿ ಹೆಚ್ಚಿದ್ದು ಈ ಸಂದರ್ಭದಲ್ಲಿ ಬೂಸ್ಟರ್ ಡೋಸ್ ಅವಶ್ಯಕತೆ ಹೆಚ್ಚಿದೆ. ಮಾನ್ಯ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವೀಯಾ ಅವರು ದೇಶದ ಎಲ್ಲಾ ಬಡವರಿಗೂ ಉಚಿತ ಬೂಸ್ಟರ್ ಡೋಸ್ ನೀಡಲಿ.

–ಜಿ. ನಾಗೇಂದ್ರ ಶರ್ಮ, ಕುವೆಂಪುನಗರ, ಮೈಸೂರು.

ಸ್ಪಷ್ಟೀಕರಣ

ಮಾನ್ಯರೆ,

ಮೈಸೂರು ನಗರ ಕೇಂದ್ರ ಗ್ರಂಥಾಲಯ ವ್ಯಾಪ್ತಿಯ ಜಯನಗರ ಶಾಖಾ ಗ್ರಂಥಾಲಯದ ಬಗ್ಗೆ ಏ. 19 ರಂದು 'ಮೈಸೂರು ಮಿತ್ರ'ನ ನಿಮ್ಮ ಪತ್ರಗಳು ವಿಭಾಗದಲ್ಲಿ ಬೂಕನಕೆರೆ ವಿಜೇಂದ್ರ ಅವರು ಬರೆದಿರುವ 'ಉದ್ಘಾಟನಾ ಫಲಕಕ್ಕೆ ಒದಗಿದ ದುರ್ಗತಿ' ಪತ್ರಕ್ಕೆ ಸ್ಪಷ್ಟೀಕರಣ. ಶಿಲಾನ್ಯಾಸದ ಕಲ್ಲನ್ನು ಈಗ ಗ್ರಂಥಾಲಯದ ಒಳಭಾಗದಲ್ಲಿ ಸೂಕ್ತ ಸ್ಥಳದಲ್ಲಿ ಇರಿಸಲಾಗಿದೆ. ಸದರಿ ಗ್ರಂಥಾಲಯಕ್ಕೆ ಆಗಮಿಸುವ ಸಾರ್ವಜನಿಕ ಓದುಗರಿಗೆ ಪಾದರಕ್ಷೆಗಳನ್ನು ಗ್ರಂಥಾಲಯದ ಹೊರಭಾಗದಲ್ಲಿ ಬಿಡುವಂತೆ ತಿಳಿಸಲಾಗಿರುತ್ತದೆ. ಹಾಗೂ ಶಿಲಾನ್ಯಾಸದ ಕಲ್ಲನ್ನು ಗೋಡೆಗೆ ಅಳವಡಿಸಲು ಮೈಸೂರು ಮಹಾನಗರ ಪಾಲಿಕೆಗೆ ಪತ್ರ ವ್ಯವಹಾರ ಮಾಡಲಾಗಿದೆ.

– ಉಪನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ನಮಗೆ ನಮ್ಮ ದೇಹವೇ ದೇಗುಲ!

> "ನಮ್ಮ ದೇಹವೇ ನಮ್ಮ ಶಾಶ್ವತವಾದ ಜೀವಂತ ವಿಳಾಸ ಎಂದು ಹೇಳಬಹುದು. ಇದನ್ನು ನಮ್ಮ ಯಾವುದೇ ಆಸ್ತಿ, ಅಥವಾ ಸಂಪತ್ತು ಕಾಪಾಡಲಾರದು. ಆದ್ದರಿಂದ ನಮ್ಮ ದೇಹವನ್ನು ಸರಿಯಾಗಿ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಏಕೆಂದರೆ ಅದು ನಮ್ಮ ಜೀವನ ಸಂಗಾತಿ. ಆದ್ದರಿಂದ ನಾವು ನಮ್ಮ ದೇಹದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ.

ನಮಗೆ ಯಾರು ಹಿತವರು? ಎಂಬುದು ಎಲ್ಲಾ ಕಾಲಕ್ಕೂ ಇರುವಂತಹ ಪ್ರಶ್ನೆಯೇ. ಒಂದು ಹಂತದಲ್ಲಿ ಇವರೇ ನಮ್ಮ ಆತ್ಮೀಯರು, ಇವರನ್ನು ಹೊರತುಪಡಿಸಿ ನಮ್ಮ ಜೀವವಿಲ್ಲ–ಜೀವನವಿಲ್ಲ ಎನ್ನಿಸಿಬಿಟ್ಟಿರುತ್ತದೆ. ಪ್ರತಿಯೊಬ್ಬರೂ ತಮ್ಮ ಜೀವನದ ಹಾದಿಯ ಹಿನ್ನೋಟ ಗಮನಿಸಿದಾಗ ಆಯಾ ಸಂದರ್ಭದಲ್ಲಿ ಅವರಿವರು ನಮಗೆ ಆತ್ಮೀಯರು ಎನಿಸಿರುತ್ತದೆ. ಆದರೆ ಕಾಲ ಕಳೆದಂತೆ ಅವರು ನಮಗೆ ಅಂತಹ ಆತ್ಮೀಯರಾಗಿದ್ದರೇ? ಎಂದು ನಮ್ಮನ್ನೇ ನಾವು ಕೇಳಿಕೊಳ್ಳುವಂತಾಗುತ್ತದೆ. ಅವರು ಅಂತಹ ಆತ್ಮೀಯರಾಗಿದ್ದರೂ ಅದು ಹೇಗೆ ನಮ್ಮ ಸಂಬಂಧ ಶಿಥಿಲಗೊಂಡಿತು? ಎಂದು ಅವಲೋಕಿಸಬೇಕಾಗುತ್ತದೆ.

ನಮಗೆ ಹುಟ್ಟು, ಬಾಲ್ಯ, ಯೌವನ, ಪ್ರೌಢಾವಸ್ಥೆ, ವೃದ್ಧಾಪ್ಯ ಎಂದೆಲ್ಲಾ ಜೀವನದ ಅವಸ್ಥೆಗಳಿವೆ. ಇವು ಬೇಡ ಎಂದರೂ ಬಂದುಹೋಗುವಂತಹುದು. ಪ್ರತಿ ಹತ್ತು ವರ್ಷದಲ್ಲಿ ನಮ್ಮ ಭಾವನೆಗಳು, ಆದ್ಯತೆಗಳು ಬದಲಾಗುತ್ತಿರುತ್ತದೆ. ಆಯಾಯ ಸಂದರ್ಭಕ್ಕೆ ತಕ್ಕಂತೆ ನಮಗೆ ಸ್ನೇಹಿತರು, ಆತ್ಮೀಯರು ದೊರಕಿರುತ್ತಾರೆ. ಅವರಿಲ್ಲದಿದ್ದರೆ ನಮ್ಮ ಜೀವನ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ ಎಂಬಂತೆ ಅವರೊಡನೆ ನಮ್ಮ ಸ್ನೇಹ, ಬಾಂಧವ್ಯ ಇರುತ್ತದೆ. ಇದು ಕೇವಲ ಸ್ನೇಹಿತರು ಎಂಬಲ್ಲಿಗೆ ನಿಲ್ಲುವುದಿಲ್ಲ. ಅದು ನೆಂಟಸ್ತಿಕೆಯಲ್ಲೂ ಇರಬಹುದು. ಅವರೊಬ್ಬರೇ ನನ್ನನ್ನು ಅರ್ಥ ಮಾಡಿಕೊಂಡು ಪ್ರೀತಿ ತೋರಿಸಿದವರು. ಅವರಿಲ್ಲದಿದ್ದರೆ ನಾನು ಯಾರಿಗೂ ಬೇಡದವನಾಗಿರುತ್ತಿದ್ದೆ ಎಂದು ಎಷ್ಟೋ ಸಮಯ ಹಾಗೂ ಬಹಳಷ್ಟು ಸಮಯ ಅನ್ನಿಸಿರುತ್ತದೆ. ಆದರೆ ಒಂದಷ್ಟು ದಿನ, ವರ್ಷ ಕಳೆದಂತೆ ಅವರ ಜಾಗದಲ್ಲಿ ಮತ್ತೊಬ್ಬರು ಬಂದು ಕುಳಿತುಕೊಂಡಿರುತ್ತಾರೆ. ಇದು ಹೇಗೆ ಸಾಧ್ಯ? ಅಷ್ಟು ಆತ್ಮೀಯರಾಗಿದ್ದವರು ಅದು ಹೇಗೆ ನೇಪಥ್ಯಕ್ಕೆ ಸರಿದರು? ಎಂಬುದರ ಬಗ್ಗೆ ಆಲೋಚಿಸಬೇಕು.

ನಿಜ, ವಯಸ್ಸಾದಂತೆ ನಮ್ಮ ಆದ್ಯತೆಗಳು ಬದಲಾಗುತ್ತಿರುತ್ತವೆ. ಆ ಆದ್ಯತೆಗೆ ಹಿಂದಿನ ಸಂಬಂಧ ಸಹಕಾರಿ ಎನಿಸದಿರುವಾಗ ಆ ಆತ್ಮೀಯರ ಜಾಗದಲ್ಲಿ ನಮ್ಮ ಆದ್ಯತೆಗೆ ಪುಷ್ಟಿ ನೀಡುವವರು ಸ್ಥಾನ ಗಳಿಸಿರುತ್ತಾರೆ.

ಹಾಗಾದರೆ ನಮಗೆ ಯಾರು ಹಿತವರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಮ್ಮ ಜೀವಮಾನ ಪೂರ್ತಿ ನಮ್ಮೊಡನಿರುವವರು ಯಾರು? ಎಂಬ ಬಗ್ಗೆ ಆಲೋಚಿಸಬೇಕಾಗುತ್ತದೆ. ನಮ್ಮ ಜೀವನಪೂರ್ತಿ ಸಂಗಾತಿ ನಮ್ಮ ತಾಯಿಯಾಗಬಹುದೆ? ಅದು ತಂದೆಯೇ? ಪತಿಯೇ/ಪತ್ನಿಯೇ? ಮಗನೇ? ಮಗಳೇ? ಅಥವಾ ಸ್ನೇಹಿತರೇ? ಎಂಬ ಬಗ್ಗೆ ಗಮನ ಹರಿಸಿದರೆ ಅವರು ಯಾರೂ ಅಲ್ಲ ಎಂಬ ಉತ್ತರ ಸಿಗುತ್ತದೆ. ಎಲ್ಲರೂ ಒಂದಷ್ಟು ಸಮಯ ಮಾತ್ರ ಸಂಗಾತಿಯಾಗಿರುತ್ತಾರೆ. ಹಾಗಿದ್ದರೆ ಇಡೀ ಜೀವನ ನಮ್ಮ ಸಂಗಾತಿಯಾಗುವುದು ಯಾವುದು? ಎಂದಾಗ 'ನಮ್ಮ ದೇಹವೇ ನಮ್ಮ ಶಾಶ್ವತ ಸಂಗಾತಿ' ಎಂದು ಹೇಳಬಹುದು. ನಮ್ಮ ದೇಹ ಮಾತ್ರ ಜೀವಮಾನಪೂರ್ತಿ ನಮ್ಮೊಡನಿರುವಂತಹುದು. ನಮ್ಮ ದೇಹ ಸ್ಪಂದಿಸುವುದನ್ನು ನಿಲ್ಲಿಸಿದಾಗ ನಮ್ಮೊಡನೆ ಇತರ ಯಾರೂ ಇರಲೂ ಸಾಧ್ಯವಿಲ್ಲ. ಹುಟ್ಟಿನಿಂದ ಸಾವಿನವರೆಗೂ ನಮ್ಮೊಡನೆ ಇರುವಂತಹುದು ನಮ್ಮ ದೇಹ ಮಾತ್ರ. ಹಾಗಿರುವಾಗ ನಾವು ನಮ್ಮ ದೇಹದ ಬಗ್ಗೆ ಎಷ್ಟರಮಟ್ಟಿಗಿನ ಕಾಳಜಿ ವಹಿಸುತ್ತೇವೆ ಎಂಬುದು ಮುಖ್ಯವಾಗುತ್ತದೆ. 'ನಾವು ನಮ್ಮ ದೇಹವನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತೇವೆಯೋ, ನಮ್ಮ ದೇಹ ನಮ್ಮನ್ನು ಅಷ್ಟೇ ಚೆನ್ನಾಗಿ ಇರಿಸುತ್ತದೆ' ಎಂದು ಹೇಳಬಹುದು. ನಾವು ಏನು ತಿನ್ನುತ್ತೇವೆ? ಏನು ಕುಡಿಯುತ್ತೇವೆ? ಎಂಬುದು ನಮ್ಮ ಖುಷಿಗಾಗಿ ಇರಬಾರದು, ಅದು ನಮ್ಮ ದೇಹವನ್ನು ಚೆನ್ನಾಗಿ ಪೋಷಿಸುವಂತಿರಬೇಕು ಎಂಬುದು ಸಾಮಾನ್ಯ ಜ್ಞಾನ ಎನಿಸಿಕೊಳ್ಳುತ್ತದೆ.

ನಮಗೆ ನಮ್ಮ ದೇಹದ ಬಗ್ಗೆ ವ್ಯಾಮೋಹ ಇರಬೇಕು. ಅಂದರೆ ದೇಹದ ಬಗೆಗಿನ ಶೃಂಗಾರವಲ್ಲ, ಬದಲಾಗಿ ಆಂತರ್ಯದ ಸಿಂಗಾರ ಬೇಕಾಗಿರುವಂತಹುದು. ನಾವು ನಮ್ಮ ಶೋಕಿಗಾಗಿ ಬೇಡದ್ದನ್ನು ತಿನ್ನುವ, ಬೇಡದ್ದನ್ನು ಕುಡಿಯುವುದು ಮಾಡಿದಲ್ಲಿ, ಬೇಡದ್ದಕ್ಕೆ ನಮ್ಮ ದೇಹ ಬಳಸುವುದಾದಲ್ಲಿ ದೇಹದ ಸ್ಪಂದನೆ ಕ್ರಮೇಣ ಕಡಿಮೆಯಾಗುತ್ತದೆ. ಯಾವುದು ನಮ್ಮ ದೇಹಕ್ಕೆ ಹಿತಕರವಲ್ಲದ್ದಾದರೆ, ದೇಹ ತೊಂದರೆ ಅನುಭವಿಸಲು ಪ್ರಾರಂಭಿಸುತ್ತದೆ. ನಮ್ಮ ದುಡಿಮೆಯ ಧಾವಂತದಲ್ಲಿ ದೇಹಕ್ಕೆ ವಿರಾಮ ನೀಡುವುದನ್ನು ಮರೆತರೂ ದೇಹ ಸ್ಪಂದಿಸುವುದನ್ನು ಕಡಿಮೆ ಮಾಡುತ್ತದೆ. ನಾವು ಅನಗತ್ಯವಾಗಿ ಒತ್ತಡದಲ್ಲಿ ಸಿಲುಕಿದರೆ ದೇಹವೂ ಒತ್ತಡಕ್ಕೆ ಸಿಲುಕಿಕೊಳ್ಳುತ್ತದೆ. ಹೀಗೆ ಸತತವಾಗಿ ದೇಹದ ಮೇಲೆ ಒತ್ತಡ ಹೇರುತ್ತಾ ಹೋದರೆ ಕೊನೆಗೆ ದೇಹ ಶಿಥಿಲಾವಸ್ಥೆಗೆ ತಲುಪುತ್ತದೆ. ನಮ್ಮಲ್ಲಿ ಚಿತೆ ಹಾಗೂ ಚಿಂತೆಗೆ ಕೇವಲ ಸೊನ್ನೆಯಷ್ಟೇ ವ್ಯತ್ಯಾಸ ಎಂದು ಹೇಳಲಾಗುತ್ತದೆ. ಚಿತೆ ಮೃತದೇಹವನ್ನು ಸುಟ್ಟರೆ, ಚಿಂತೆ ಜೀವಂತ ದೇಹವನ್ನು ಸುಡುತ್ತದೆ ಎಂಬ ಮಾತಿದೆ. ಇದು ಅಕ್ಷರಶಃ ನಿಜವಾದದ್ದು. ನಾವು ಒತ್ತಡ ಕೇವಲ ನನ್ನ ಮನಸ್ಸಿಗೆ ಸಂಬಂಧಿಸಿದ್ದು ಎಂದು ಭಾವಿಸುತ್ತೇವೆ. ಆದರೆ ಬಳಲುವುದು ನಮ್ಮ ದೇಹ ಎಂಬುದನ್ನೂ ಗಮನಿಸಬೇಕು.

ನಮ್ಮ ದೇಹವೇ ನಮ್ಮ ಶಾಶ್ವತವಾದ ಜೀವಂತ ವಿಳಾಸ ಎಂದು ಹೇಳಬಹುದು. ಇದನ್ನು ನಮ್ಮ ಯಾವುದೇ ಆಸ್ತಿ, ಅಥವಾ ಸಂಪತ್ತು ಕಾಪಾಡಲಾರದು. ಆದ್ದರಿಂದ ನಮ್ಮ ದೇಹವನ್ನು ಸರಿಯಾಗಿ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಏಕೆಂದರೆ ಅದು ನಮ್ಮ ಜೀವನ ಸಂಗಾತಿ. ಆದ್ದರಿಂದ ನಾವು ನಮ್ಮ ದೇಹದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ನಾವು ನಮ್ಮ ದೇಹದ ಬಗ್ಗೆ ಆಲೋಚಿಸದೆ ಸಿಕ್ಕ ಸಿಕ್ಕ ಆಹಾರವನ್ನು ತಿನ್ನುತ್ತಿದ್ದೇವೆ. ತಿನ್ನುವುದು ಕೇವಲ ರುಚಿಗಾಗಿ ಇರಬಾರದು, ಅದು ದೇಹಕ್ಕೆ ಪುಷ್ಟಿ ನೀಡುವಂತಿರಬೇಕು. ದೇಹದ ಸಮತೋಲನ ಕಾಯ್ದುಕೊಳ್ಳುವುದಕ್ಕಾಗಿ ನಿತ್ಯ ಶುದ್ಧವಾದ ಆಚರಣೆ ರೂಢಿಸಿಕೊಳ್ಳಬೇಕು. ನಮ್ಮಲ್ಲಿ ಯೋಗದಲ್ಲಿ ಇದೇ ವಿಷಯವನ್ನು ಹೇಳಲಾಗುತ್ತದೆ. ದೇಹ ಚೆನ್ನಾಗಿದ್ದಾಗ ಆಯಸ್ಸೂ ವೃದ್ಧಿಯಾಗುತ್ತದೆ, ದೇಹ ನಿರೋಗಿಯಾದರೆ ಅದು ಹೆಚ್ಚಿನ ಕಾಲ ಬಾಳಿ ಬದುಕುತ್ತದೆ. ಪ್ರಾಣಾಯಾಮ ನಮ್ಮ ಶ್ವಾಸಕೋಶವನ್ನು ಶುದ್ಧವಾಗಿಟ್ಟರೆ, ಧ್ಯಾನ ಮನಸ್ಸನ್ನು ಸಮಸ್ಥಿತಿಯಲ್ಲಿಡುತ್ತದೆ, ಯೋಗಾಸನ ದೇಹದ ಶಕ್ತಿಗೆ ಕಾರಣವಾದರೆ, ನಡಿಗೆ ನಮ್ಮ ಹೃದಯವನ್ನು ಚೆನ್ನಾಗಿಡುತ್ತದೆ. ಉತ್ತಮ ಆಹಾರ ನಮ್ಮ ಕರುಳನ್ನು ಚೆನ್ನಾಗಿ ನೋಡಿಕೊಂಡರೆ, ಒಳ್ಳೆಯ ಆಲೋಚನೆ ಮನದ ಶಾಂತಿ ಉತ್ತಮಗೊಳಿಸುತ್ತದೆ ಎಂದು ಹೇಳಲಾಗುತ್ತದೆ.

ನಮಗೆ ನಮ್ಮ ದೇಹದ ಮೇಲೆ ಅಧಿಕಾರ ಬರುವುದು ಅದನ್ನು ಸರಿಯಾಗಿ ನೋಡಿಕೊಂಡಾಗ ಮಾತ್ರ. ದೇಹದೆಡೆಗೆ ಗಮನ ಹರಿಸದೆ ನಾನು ನೂರಾರು ವರ್ಷ ಬದುಕಬೇಕು ಎಂದು ಹಂಬಲಿಸುವುದು ಮೂರ್ಖತನ ಎನ್ನಿಸುತ್ತದೆ. ಖ್ಯಾತ ಪಾಪ್ ಗಾಯಕ, ನರ್ತಕ ಮೈಕೇಲ್ ಜಾಕ್ಸನ್ ತಾನು ನೂರೈವತ್ತು ವರ್ಷ ಬದುಕಬೇಕೆಂದು ಬಯಸಿದ್ದ, ಒಂದು ರೀತಿಯಲ್ಲಿ ಅದು ಸಾವಿಗೆ ಸವಾಲೆಸದಂತೆ ಇತ್ತು. ಅವನು ತಾನು ಅಷ್ಟು ಅವಧಿ ಬದುಕಬೇಕೆಂದು ಹಲವಾರು ತಯಾರಿಯನ್ನೂ ಮಾಡಿಕೊಂಡಿದ್ದನಂತೆ. ತನ್ನ ಅಭಿಲಾಷೆ ಈಡೇರಿಸಲು ಅವನು ಖ್ಯಾತರಾದ 12 ತಜ್ಞ ವೈದ್ಯರನ್ನು ನೇಮಕ ಮಾಡಿಕೊಂಡಿದ್ದ, ಅವರುಗಳು ಪ್ರತಿದಿನ ಅವನನ್ನು ಪರೀಕ್ಷಿಸುತ್ತಿದ್ದರು. ಅವನು ಸೇವಿಸುತ್ತಿದ್ದ ಊಟ ತಿಂಡಿಗಳನ್ನು ಪ್ರತಿಸಲವೂ ಪ್ರಯೋಗಾಲಯದಲ್ಲಿ ಪರಿಶೀಲಿಸಲಾಗುತ್ತಿತ್ತು. 15 ಜನರನ್ನು ತನ್ನ ವ್ಯಾಯಾಮ ಮತ್ತು ಇತರೆ ದಿನಗೆಲಸಕ್ಕಾಗಿ ನೇಮಿಸಿಕೊಂಡಿದ್ದ. ತನ್ನ ಆರೋಗ್ಯದಲ್ಲಿ ಏರುಪೇರಾದರೆ ಯಾವುದೇ ತೊಂದರೆಯಾಗಬಾರದು ಎಂದು ದೇಹದ ಅಂಗಾಂಗ ದಾನ ಮಾಡುವವರನ್ನು ಹೆಚ್ಚು ಬೆಲೆ ನೀಡಿ ಖರೀದಿಸಿದ್ದ. ಇಷ್ಟೆಲ್ಲಾ ಆದರೂ ಅವನ ಜೀವನ ಮುಗಿದಿದ್ದು ಅವನ 50ನೇ ವಯಸ್ಸಿನಲ್ಲಿ.

ಹೀಗಾಗಿ ನಾವು ಆಯಸ್ಸು ಹಾಗೂ ಆರೋಗ್ಯಪೂರ್ಣವಾದ ಬದುಕು ಬಯಸಿದರೆ ಅದಕ್ಕೆ ಪೂರಕವಾದ ಜೀವನ ನಡೆಸಬೇಕು. ದೇಹಕ್ಕೆ ಬೇಡದ್ದನ್ನು ಮಾಡಬಾರದು. ಗಳಿಕೆ ಎಂದರೆ ಕೇವಲ ಹಣದ ಗಳಿಕೆಯಲ್ಲ. ಆರೋಗ್ಯದ ಗಳಿಕೆಯೂ ಅಷ್ಟೇ ಮುಖ್ಯ ಎಂಬುದನ್ನು ಅರಿಯಬೇಕು. ನನ್ನ ಜೀವನ ನಾನು ರೂಪಿಸಿದಂತೆ ಇರಬೇಕು ಎಂಬ ಬಯಕೆ ನಮ್ಮಲ್ಲಿದ್ದರೆ, ಅದಕ್ಕೆ ತಕ್ಕಂತಹ ವ್ಯವಸ್ಥೆ ಮಾಡಿಕೊಳ್ಳಬೇಕು. ನಮ್ಮ ದೇಹ ನಾವು ಹೇಳಿದಂತೆ ಕೇಳುತ್ತದೆ. ಇಲ್ಲದಿದ್ದರೆ ದೇಹಕ್ಕೂ ನಮಗೂ ಸಂಬಂಧವಿಲ್ಲ ಎನ್ನುವಂತೆ ಅದು ಅವಧಿಗೆ ಮುನ್ನವೇ ನಿಷ್ಕ್ರಿಯವಾಗುತ್ತದೆ. ಈ ಬಗ್ಗೆ ಗಮನ ಹರಿಸಬೇಕು.



ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರಿನ ಹೆಬ್ಬಾಳ ಸೂರ್ಯ ಬೇಕರಿ ಸರ್ಕಲ್‌ನ ರುಚಿ ಚಿಕನ್ಸ್ ಮಾಲೀಕರಾದ ಬಿ.ಶಿವಕುಮಾರ್(ಕುಮಾರ್) ಅವರನ್ನು ಮಂಚೇಗೌಡನಕೊಪ್ಪಲು ಸಿ.ಕೆ. ರವಿ, ಪಿ.ಹೊಸಹಳ್ಳಿ ಪ್ರಕಾಶ್, ಅಜ್ಜಪ್ಪನಕೊಪ್ಪಲು ನಾರಾಯಣ, ಲೋಕೇಶ್, ಮಜ್ಜಿಗೆಪುರದ ನವೀನ್‌ಕುಮಾರ್, ಹೆಬ್ಬಾಳು ಮಲ್ಲೇಶ್ ಹಾಗೂ ಯರಗನಹಳ್ಳಿ ಸರ್ಕಲ್ ಸತೀಶ ಸೇರಿದಂತೆ ಇತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ರಂಗಾಯಣದಲ್ಲಿ 'ವಿಶ್ವ ಭೂಮಿ ದಿನ'



ಮೈಸೂರು, ಏ. 22– ಇಂದು ವಿಶ್ವಭೂಮಿ ದಿನ. ಭೂಮಿ ಈ ಪ್ರಕೃತಿಯ ಬಗ್ಗೆ ಅರಿವು ಮೂಡಿಸುವ ದಿನ. ಭೂಮಿ ಉಳಿದರೆ ನಾವು ಉಳಿದೇವು. ಇಂದು ಮೈಸೂರು ರಂಗಾಯಣದಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ರಂಗಾಭ್ಯಾಸದಲ್ಲಿ ನಿರತರಾಗಿರುವ ಸಂವಿಧಾನದ 'ಸೂತ್ರಧಾರ' ನಾಟಕ ತಂಡ ಮತ್ತು ಇದೇ ಯೋಜನೆಯಡಿಯ ಬೀದಿ ನಾಟಕ 'ಮಾನವಮಾರ್ಗ' ತಂಡದ 25 ಜನ ಕಲಾವಿದರು ರಂಗಾಯಣದ ಆವರಣದಲ್ಲಿರುವ ಬಿ.ವಿ. ಕಾರಂತ ರಂಗವನದಲ್ಲಿ ಗಿಡಗಳಿಗೆ ಗೊಬ್ಬರ ಮತ್ತು ನೀರುಣಿಸಿ ಆರೈಕೆ ಮಾಡುತ್ತಾ ಪರಿಸರಗೀತೆಯನ್ನು ಹಾಡುತ್ತಾ ಭೂಮಿಯ ಮಹತ್ವವನ್ನು ತಿಳಿದುಕೊಳ್ಳುವ ಯತ್ನ ಮಾಡಿದರು.

ಇವರ ಭೂಮಿ ಮತ್ತು ಪರಿಸರ ಕಾಳಜಿಯ ಕಾಯಕದಲ್ಲಿ ರಂಗಾಯಣದ ನಿರ್ದೇಶಕರಾದ ಅಡ್ಡಂಡ ಕಾರ್ಯಪ್ಪ, ಉಪ ನಿರ್ದೇಶಕರಾದ ನಿರ್ಮಲಾ ಮಠಪತಿ ಮತ್ತು ಈ ಕಾರ್ಯಾಗಾರ ಸಂಚಾಲಕರಾದ ಅರಸೀಕೆರೆ ಯೋಗಾನಂದ ಅವರ ಭಾಗವಹಿಸಿದ್ದರು. ರಂಗಾಯಣದ ಆವರಣದಲ್ಲಿ ಸುಮಾರು 600ಕ್ಕೂ ಹೆಚ್ಚು ಗಿಡಗಳಿದ್ದು, ಎಲ್ಲವೂ ಈಗ ಮರಗಳಾಗಿ ಬೆಳೆಯುತ್ತಿವೆ. ರಂಗಾಯಣ ಹಸಿರು ರಂಗಾಯಣವಾಗಿ ಕಂಗೊಳಿಸುತ್ತಿದೆ.

ಹಿರಿಯರಿಂದ ಬಳುವಳಿಯಾಗಿ ಬಂದ ಅಮೂಲ್ಯ 'ಸಂಸ್ಕೃತಿ' ಸಂರಕ್ಷಿಸಿ

ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥರ ಸಲಹೆ


ಮೈಸೂರು, ಏ.22(ಎಸ್‌ಬಿಡಿ)– ಹಿರಿಯರು ನೀಡಿದ ದೊಡ್ಡ ಬಳುವಳಿ 'ಸಂಸ್ಕೃತಿ'ಯನ್ನೂ ಉಳಿಸಿ, ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕು ಎಂದು ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು ತಿಳಿ ಹೇಳಿದರು.

ಮೈಸೂರಿನ ಶ್ರೀಕೃಷ್ಣಧಾಮದ ಶ್ರೀ ಕೃಷ್ಣ ಸಭಾಭವನದಲ್ಲಿ ಶುಕ್ರವಾರ ನಡೆದ ಶ್ರೀ ಕೃಷ್ಣ ಮಿತ್ರ ಮಂಡಳಿಯ 46ನೇ ವಾರ್ಷಿಕೋತ್ಸವದ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಹಿರಿಯರ ಆಸ್ತಿ, ಜಮೀನು, ಹಣ ಹೀಗೆ ಎಲ್ಲಾ ರೀತಿಯ ಸಂಪತ್ತನ್ನೂ ಭಾಗ ಮಾಡಿಕೊಳ್ಳುತ್ತೇವೆ. ಇವೆಲ್ಲಾ ಅಳಿವಿರುವಂತದ್ದು. ಎಲ್ಲದಕ್ಕೂ ಮಿಗಿಲಾದ ಸಂಸ್ಕೃತಿ, ಭಾಷೆ, ಆಚಾರ, ವಿಚಾರವನ್ನೂ ಉಳಿಸಿ, ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕು. ಇಲ್ಲವಾದರೆ ಮುಂದಿನ ಪೀಳಿಗೆ ನಮ್ಮತ್ತ ಬೊಟ್ಟು ಮಾಡುತ್ತದೆ ಎಂದು ಎಚ್ಚರಿಸಿದರು.

ಮುಂಜಾನೆ ಎಲ್ಲರ ಮನೆಯಲ್ಲಿ ಮಂತ್ರ ಪಠಣ ಕೇಳಿಸುತ್ತಿತ್ತು. ಮುಸ್ಸಂಜೆಯಲ್ಲಿ ಎಲ್ಲಾ ಹಳ್ಳಿಗಳಲ್ಲೂ ಭಜನೆ ನಡೆಯುತ್ತಿತ್ತು. ಮನೆ ಮನೆಯಲ್ಲೂ ಒಟ್ಟಾಗಿ ಕುಳಿತು ದೇವರ ನಾಮ ಹಾಡುತ್ತಿದ್ದರು. ನಂತರ ಎಲ್ಲರೂ ರೇಡಿಯೋ ಕೇಳುವುದನ್ನು ರೂಢಿಸಿಕೊಂಡರು. ಟಿವಿ ಬಂದ ನಂತರ ಅದರ ಮುಂದೆ ಠಿಕಾಣಿ ಹಾಕಿದರು. ಈಗಂತೂ ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಕುಳಿತು ಮೊಬೈಲ್‌ಗಳಲ್ಲಿ ಮುಳುಗುತ್ತಾರೆ. 'ಹಿತ್ತಲ ಗಿಡ ಮದ್ದಲ್ಲ' ಎನ್ನುವಂತೆ ನಮ್ಮ ಸಂಸ್ಕೃತಿಯ ಮಹತ್ವದ ಬಗ್ಗೆ ಅರಿವಿಲ್ಲದಂತಾಗಿದೆ. ನಾವು ಆಚರಿಸಿದರೆ ಮಕ್ಕಳು ಅನುಕರಿಸಿ, ಅನುಸರಿಸುತ್ತಾರೆ ಎನ್ನುವುದನ್ನು ಮರೆತು, ಈಗಿನ ಕಾಲ ಕೆಟ್ಟಿದೆ, ಮಕ್ಕಳು ಹೇಳಿದ ಮಾತು ಕೇಳುವುದಿಲ್ಲ ಎಂದು ದೂಷಿಸುವುದು ಸರಿಯಲ್ಲ ಎಂದು ಕಿವಿಮಾತು ಹೇಳಿದರು.

ನಮ್ಮ ಬದುಕು ಸೀಮಿತವಾಗಬಾರದು. ಸಮಾಜದ ಜೊತೆ ಜೊತೆಗೆ ನಾವೂ ಬೆಳೆಯಬೇಕು. ದೇಶ, ಭಾಷೆ, ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕು. ಇಸ್ಕಾನ್ ಸಂಸ್ಥೆ ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳಿಗೆ ಜಗತ್ತಿನ್ನೆಲ್ಲೆಡೆ ಗೌರವ ತಂದುಕೊಟ್ಟಿದೆ. ಹೀಗೆ ದೂರದ ತುಳುನಾಡಿನಿಂದ ಮೈಸೂರಿಗೆ ಬಂದು ಬದುಕು ಕಟ್ಟಿಕೊಳ್ಳುವುದರ ಜೊತೆಗೆ ಸಾಂಸ್ಕೃತಿಕ ರಾಜಧಾನಿಯಲ್ಲಿ ತುಳು ಸಂಸ್ಕೃತಿಯನ್ನು ಸಮ್ಮಿಳಿತಗೊಳಿಸಿ, ಪೋಷಿಸುತ್ತಿರುವುದು ಅಭಿನಂದನಾರ್ಹ ಎಂದು ನುಡಿದರು.

ಸಂಶೋಧನಾ ಪ್ರತಿಷ್ಠಾನ ಆಗಲಿ: ಸಾಹಿತಿ ಹಾಗೂ ಸಂಶೋಧಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮಾತನಾಡಿ, ಶಿವಳ್ಳಿ ತುಳುವಿನ ಕಾವ್ಯ ಸಂಪತ್ತು 'ಸಮಗ್ರ ತುಳುವಿನ ಪ್ರಾಚೀನ ಸಾಹಿತ್ಯ'ವಾಗಿದೆ. ದೇವಿ ಮಹಾತ್ಮೆ, ಭಾಗವತ, ಮಹಾಭಾರತ ಸೇರಿದಂತೆ ಅಪಾರ ಸಾಹಿತ್ಯ ತುಳುವಿನಲ್ಲಿದೆ. ಆದರೆ ಯಾವ ಶಾಲಾ–ಕಾಲೇಜುಗಳಲ್ಲೂ ತುಳು ಸಾಹಿತ್ಯದ ಬಗ್ಗೆ ಹೇಳಿಕೊಡುತ್ತಿಲ್ಲ. ಈ ಸಂಬಂಧ ಯಾವ ವಿಶ್ವವಿದ್ಯಾನಿಲಯಗಳನ್ನೂ ಅಧ್ಯಯನ ನಡೆಯುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ 'ತುಳು ಸಂಶೋಧನಾ ಪ್ರತಿಷ್ಠಾನ' ಆರಂಭವಾಗಲೇಬೇಕು. ಶಿವಳ್ಳಿ ತುಳು ಭಾಷೆ, ಸಾಹಿತ್ಯ, ಸಂಸ್ಕೃತಿ ಬಗ್ಗೆ ಯುವ ಸಮುದಾಯ ಅಧ್ಯಯನ, ಸಂಶೋಧನೆ ನಡೆಸುವಂತಾಗಬೇಕು. ಇದಕ್ಕೆ ಅಗತ್ಯವಾದ ಮಾರ್ಗವನ್ನು ಹಿರಿಯರು ಸೃಷ್ಟಿಸಿಕೊಟ್ಟು, ಪ್ರೋತ್ಸಾಹಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು.



ಮೈಸೂರಿನ ಶ್ರೀ ಕೃಷ್ಣಧಾಮದಲ್ಲಿ ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಸಾಹಿತಿ ಹಾಗೂ ಸಂಶೋಧಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಹಾಗೂ ನಟ ಎನ್.ಬಾಲಸುಬ್ರಹ್ಮಣ್ಯ ಅವರನ್ನು ಅಭಿನಂದಿಸಿದರು.

ಅಮೆರಿಕಾದಲ್ಲಿ ಶಿವಳ್ಳಿ ಕುಟುಂಬ ಸಂಸ್ಥೆ ಮುಂದಿನ ಪೀಳಿಗೆಗೆ ತುಳು ಕಲಿಸಬೇಕೆಂಬ ಮಹತ್ವದ ಆಶಯದೊಂದಿಗೆ ಆನ್‌ಲೈನ್ ತುಳು ಕಲಿಕಾ ಕಾರ್ಯಕ್ರಮ ಆರಂಭಿಸಿದೆ. ಆದರೆ ಇಲ್ಲಿರುವ ನಾವು ಆ ರೀತಿಯ ಕೆಲಸ ಮಾಡುತ್ತಿಲ್ಲ. ಅದೆಷ್ಟೋ ಪದಗಳನ್ನು ಮರೆತು, ಇಂಗ್ಲಿಷ್ ಪದಗಳನ್ನು ಪರ್ಯಾಯ ಪದ ಬಳಕೆ ಮಾಡುತ್ತಿದ್ದೇವೆ ಎಂದು ವಿಷಾದಿಸಿದ ಅವರು, ನಾನು ಪ್ರಾಥಮಿಕ ವಿದ್ಯಾಭ್ಯಾಸ ಮಾಡುವಾಗ ಶ್ರೀ ಪೇಜಾವರ ಮಠದಲ್ಲಿ ಆಶ್ರಯ ಪಡೆದಿದ್ದೆ. ಉಡುಪಿಯ ಪರಿಸರ, ಅಲ್ಲಿನ ಸಂಸ್ಕೃತಿ, ಸಾಹಿತ್ಯದ ಪ್ರೇರಣೆಯಿಂದ ಇಷ್ಟು ದೂರ ನಡೆದು ಬಂದಿದ್ದೇನೆ ಎಂದು ಸ್ಮರಿಸಿಕೊಂಡರು.

ಅಭಿನಂದನೆ: ಇದಕ್ಕೂ ಮೊದಲು ಶ್ರೀ ಕೃಷ್ಣ ಮಿತ್ರ ಮಂಡಳಿ ಹಾಗೂ ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಶ್ರೀಗಳು ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಹಾಗೂ ನಟ ಎನ್.ಬಾಲಸುಬ್ರಹ್ಮಣ್ಯ(ಸುಬ್ಬಣ್ಣ) ಅವರನ್ನು ಅಭಿನಂದಿಸಿ, ಆಶೀರ್ವದಿಸಿದರು. ಇದೇ ವೇಳೆ 'ಮಿತ್ರ ಪರಿಚಯ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ವಿದುಷಿ ದಿವ್ಯಾ ಗಿರಿಧರ್ ಹಾಗೂ ವಿದ್ವಾನ್ ಅನಂತರಾಜ್ ಮಿಸ್ತ್ರಿ 'ದಾಸವಾಣಿ' ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಶ್ರೀ ಕೃಷ್ಣ ಮಿತ್ರ ಮಂಡಳಿಯ ಅಧ್ಯಕ್ಷ ಪಿ.ಎಸ್.ಚಂದ್ರಶೇಖರ್, ಕಾರ್ಯದರ್ಶಿ ಶ್ರೀಕಾಂತ್ ರಾವ್, ಖಜಾಂಚಿ ಮುರುಳೀಧರ ಭಟ್, ಶ್ರೀ ಕೃಷ್ಣ ಟ್ರಸ್ಟ್‌ನ ಸಿ.ಜೆ.ಮೋಹನ್, ಪದ್ಮನಾಭ ಭಟ್, ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ವಿಶೇಷ ಜಾಗೃತಿ ಸಮಾವೇಶ

ಮೈಸೂರು, ಏ.22– 'ಜಾಗತಿಕ ತಾಪಮಾನ ಮತ್ತು ಕೃಷಿ' ಎಂಬ ವಿಷಯ ಕುರಿತು ಉಳುಮೆ ಪ್ರತಿಷ್ಠಾನದ ವತಿಯಿಂದ ಏ.24ರಂದು ಬೆಳಗ್ಗೆ 10.30ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್‌ನ ಸಭಾಂಗಣದಲ್ಲಿ ವಿಶೇಷ ಜಾಗೃತಿ ಸಮಾವೇಶವನ್ನು ಆಯೋಜಿಸಿದ್ದು, ಅಂದು ಸಮಾವೇಶದಲ್ಲಿ ಪರಿಸರ ತಜ್ಞ ನಾಗೇಶ್ ಹೆಗಡೆ, ಆಹಾರ ತಜ್ಞ ಕೆ.ಸಿ. ರಘು, ಸಾಮಾಜಿಕ ಹೋರಾಟಗಾರ ಬೆಟ್ಟಯ್ಯ ಕೋಟೆ, ಕರ್ನಾಟಕ ರಾಜ್ಯ ರೈತ ಸಂಘ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಕೃಷಿ ತಜ್ಞ ಟಿ.ಜಿ.ಎಸ್. ಅವಿನಾಶ್ ಅವರು ಭಾಗವಹಿಸಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

FLAT FOR RENT
2 BHK furnished flat @ BRIGADE SPARKLE, Visweswaranagar, Mysuru, 24 hrs security, gymnasium, swimming pool, kids park, vast green garden.
Call: 9844041947

ಮನೆ ಬಾಡಿಗೆಗೆ ಇದೆ
1 ಬೆಡ್ ರೂಂ, ಸೋಲಾರ್ ಸೌಲಭ್ಯಗಳುಳ್ಳ ಮನೆ ವಿದ್ಯಾರಣ್ಯಪುರ 1ನೇ ಮೇನ್, 2ನೇ ಕ್ರಾಸ್‌ನಲ್ಲಿದೆ. ಸಸ್ಯಹಾರಿಗಳಿಗೆ ಮಾತ್ರ ಸಂಪರ್ಕಿಸಿ:
9845980233

FOR SALE
30'x40' - E/F Site No. 349 at Dwarakanagar, Near Ring Road Maramma Temple.

20'x30' - S/F House # 399, Double Floor, 4 bedrooms with Solar at Srirampura 2nd Stage, 12th Cross.
99004-93490

TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೇಷಿನ್, Micro Oven Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 45 ವರ್ಷ ಒಳಪಟ್ಟು, ಊಟ, ವಸತಿ, ಸೌಲಭ್ಯ ಇರುತ್ತದೆ. ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ / ಪಿಯುಸಿ ಅಗತ್ಯ ವಿವರಗಳೊಂದಿಗೆ ಸಂಪರ್ಕಿಸಿ:– #380/ಎ, 2ನೇ ಮಹಡಿ, ಕೃಷ್ಣ ವಿಲಾಸ ರಸ್ತೆ, ಮೈಸೂರು.
9513999755 / 9513089922

ಸೈಟು ಮಾರಾಟಕ್ಕಿದೆ
20x30 MUDA Allotted ದಟ್ಟಗಳ್ಳಿ 3ನೇ ಹಂತ
9741076619

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ದಟ್ಟಗಳ್ಳಿ, ಹೂಟಗಳ್ಳಿ ಮತ್ತು ಸಿದ್ಧಾರ್ಥ ಲೇಔಟ್‌ನ ಸುತ್ತಮುತ್ತ ಇರುವವರಿಗೆ ಆದ್ಯತೆ.
9901607889

WANTED
Computer Hardware Trainer To Train Harware & Networking at Educational Institute. Free Training Provided for the Trainer, Salary 20,000/- per month. Contact:
9902955544
*Conditions apply

ಬೇಕಾಗಿದ್ದಾರೆ
ಟೈಲರ್ಸ್ / ಡ್ರೈವರ್ / ಸಹಾಯಕರು (ಮಹಿಳೆಯರು ಮತ್ತು ಪುರುಷರು) ಬೇಕಾಗಿದ್ದಾರೆ. ಸಂಪರ್ಕಿಸಿ: ವಿಳಾಸ– ನಂ. R111, 8ನೇ ಮುಖ್ಯರಸ್ತೆ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೈಸೂರು–570016.
8050212434

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಕೆಲಸದಲ್ಲಿ ಅನುಭವವುಳ್ಳ ಗಾರ್ಡ್‌ಗಳು ಮೈಸೂರಿನ ಟಿ.ನರಸೀಪುರ ರಸ್ತೆಯಲ್ಲಿ ಚಿಕ್ಕಳ್ಳಿ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ ಆಸಕ್ತಿವುಳ್ಳವರು ತಕ್ಷಣವೇ ಸಂಪರ್ಕಿಸಿ.
8197807977
9108100117

ಬಟ್ಟಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬಟ್ಟಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196
9880548596

ಛತ್ರ ಖಾಲಿ ಇದೆ
ದಿನಾಂಕ: 11–05–2022 ಮತ್ತು 12–05–2022 ರಂದು ಶಿವಶಕ್ತಿ ಛತ್ರ ಖಾಲಿ ಇರುತ್ತದೆ. ಬಂಬೂ ಬಜಾರ್, ಮೈಸೂರು
9448390647

WANTED
10th or PUC passed 18 to 26 years Girls as HELPERS for a cake making shop in Gokulam.
7259757637

TEACHERS WANTED
Montessori Teacher - 03
M.Sc, B.Ed - 02
B.Sc, B.Ed - 02
M.A, B.Ed English - 02
Hindi B.Ed - 02
M.A, B.Ed in Social -02
D.Ed any Subject - 02
P.E. Teacher - 01
GAYATHRI VIDYALALYA
Hosaundavadi, K.R.Sagara
8892927318 / 8183054747

ಶ್ರೀರಾಮ್ ಟೂರ್
29/05/22 ರಿಂದ ವಿಮಾನದಲ್ಲಿ ನೇಪಾಳ ಪಶುಪತಿನಾಥ, ಮುಕ್ತಿನಾಥ, ಪುರಿಜಗನ್ನಾಥ, ಕಾಶಿ, ಜಾರ್ಖಂಡ್
9108933383
9606600383

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ–ಮೊದಲು ಬಂದವರಿಗೆ ಆದ್ಯತೆ, ವಿದ್ಯಾರ್ಹತೆ– ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5250
ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ಕೊಡಲಾಗುತ್ತದೆ. ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿಯಿಟ್ಟು ಬಿಡಿಸಿ ಕೊಳ್ಳಲಾಗದ ಚಿನ್ನದ ಆಭರಣಗಳನ್ನು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣಕೊಡುತ್ತೇವೆ. ನಿಮಗೆ ಮತ್ತೆ ಚಿನ್ನಾಭರಣ ಬೇಕಾದಲ್ಲಿ ಕೂಲಿ ವೇಸ್ಟೇಜ್ ಇಲ್ಲದೆ ಮಾಡಿಕೊಡಲಾಗುತ್ತದೆ. ಕೂಡಲೇ (T&C) ಸಂಪರ್ಕಿಸಿ– S.M ಗೋಲ್ಡ್ ಫೈನಾನ್ಸ್
8050518881

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಬಳ: 14,000 ರಿಂದ 16,000 (ESI, PF ಸೌಲಭ್ಯ ಇರುತ್ತದೆ)
8050699742

ಸೈಟ್ ಮಾರಾಟಕ್ಕಿದೆ
ಭೂಮಿಕಾ ಲೇಔಟ್, ಮೈದನ ಹಳ್ಳಿ ಇಲವಾಲ ಹೋಬಳಿ, ಕಾರ್ನರ್ ಸೈಟ್: 30X40 ಮಾರಾಟಕ್ಕಿದೆ.
ಮೊ: 8088008009

FREE TRAINING PROVIDED ON
1) Fundamentals of Computer
2) Advance M S Word
3) Advance M S Excel
4) Tally
5) Soft Skills
6) Professional Skills
9902955544
*Conditions apply

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು, ತೊಂಡವಾಡಿ ಮತ್ತು ಸಿಂಧುವಳ್ಳಿಪುರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 13,500/ – ಸಂಪರ್ಕಿಸ ಬೇಕಾದ ಸಂಖ್ಯೆಗಳು:
9620667819
9880727819

HOME LOAN
11B, 9/11A ಕಾರ್ಪೋರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

WANTED
Security Field Officer
Professional Experience Security Field Officer (5 years) for Nanjangud & Kadakola Industrial Area. Interested candidates may Contact:
9108100117 / 9035269781

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
1) ಸೂಪರ್ ವೈಸರ್ಸ್ – ಬಿ.ಬಿ.ಎ / ಬಿಕಾಂ ಆಫೀಸ್ ಮತ್ತು ಫ್ಯಾಕ್ಟರಿಗಾಗಿ
2) ಡ್ರೈವರ್ಸ್ – (ಹೆವಿ ಗೂಡ್ಸ್ ವಾಹನ ಬ್ಯಾಡ್ಜ್ ಹೊಂದಿರಬೇಕು). ಆಕರ್ಷಕ ಸಂಬಳ
STAR Al-Hamza Group Since - 1983
ಎಸ್.ಎಮ್.ಸ್ಟಾರ್ ಫೀಡ್ಸ್ ಪ್ರೈ.ಲಿ, ನಾಗಮಂಗಲ
9663001850 / 9739525293

ಮನೆಯಿಂದಲೇ ಕೆಲಸ WORK FROM HOME
ಕಂಪ್ಯೂಟರ್, ಲ್ಯಾಪ್‌ಟ್ಯಾಪ್, ಮೊಬೈಲ್ ಮೂಲಕ ನಾವು ಕೊಡುವ ಡೇಟಾವನ್ನು ಎಕ್ಸೆಲ್ (Excel) ಶೀಟ್‌ನಲ್ಲಿ ಟೈಪ್ ಮಾಡುವ ಡೇಟಾ ಎಂಟ್ರಿ ಕೆಲಸ ಗಳಿಸಿ ವಾರಕ್ಕೆ 3000–5000 ರೂ.ಗಳು
9353497350
8904253498

ಸೈಟುಗಳು ಮಾರಾಟಕ್ಕಿವೆ
MUDA Approved
Bank Loan Available
ಶ್ರೀನಗರ ಪಕ್ಕ ಮತ್ತು ಶ್ರೀರಾಂಪುರ ರಿಂಗ್ ರೋಡ್
8050345574

AVAILABLE FOR RENT
SHOWROOM SPACE 9000 Sqft on Bannur Road, Near Ring Road, 5HP, 3PH Power, Bore Well, 3 Side Compound & Gate on front with 600 Sqft RCC BLDG, 1000 Sqft Basement, 1500 Sqft Covered Area, Plus Watchmen Shelter and resting Room
Call: 94483 90918

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಡೂಪ್ಲೆಕ್ಸ್ ಮನೆ ಬಾಡಿಗೆಗಿದೆ
ಇತ್ತೀಚೆಗೆ ಗೃಹಪ್ರವೇಶವಾಗಿರುವ ಡೂಪ್ಲೆಕ್ಸ್ ಮನೆ ಬಾಡಿಗೆಗೆ ದೊರೆಯಲಿದೆ. ಮನೆ ಇರುವ ಸ್ಥಳ: ಸುಮುಕ ಎನ್‌ಕ್ಲೇವ್ ಲೇಔಟ್, ವೆಲ್ಲೆಸ್ಲಿ ಬ್ರಿಡ್ಜ್ ರಸ್ತೆ, ಬನ್ನಿ ಮಂಟಪದ ಹಿಂಭಾಗ, ಕಿರಂಗೂರು ಸರ್ಕಲ್, ಬೆಂಗಳೂರು–ಮೈಸೂರು ಹೆದ್ದಾರಿ ಬಳಿ, ಶ್ರೀರಂಗಪಟ್ಟಣ.
Mob: 9731402331

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಬಾರ್ ಮತ್ತು ರೆಸ್ಟೋರೆಂಟ್‌ಗೆ ಕ್ಯಾಷಿಯರ್, ರಿಸೆಪ್ಷನಿಸ್ಟ್, ಸ್ಟೀವರ್ಡ್ಸ್ ಹಾಗೂ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9845110410

ಬೇಕಾಗಿದ್ದಾರೆ
1) ಸ್ಟಾಫ್ ನರ್ಸ್
2) ಹೌಸ್‌ಕೀಪಿಂಗ್
3) ಅಡುಗೆಯವರು
Mob: 7795111122

ಬುಕ್ ರೈಟಿಂಗ್ ಕೆಲಸ
ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಕನ್ನಡ – ಇಂಗ್ಲೀಷ್ ಸ್ಟೋರಿ ಪುಸ್ತಕ ಬರೆಯುವ ಕೆಲಸ ಗಳಿಸಿ ತಿಂಗಳಿಗೆ 9000 – 16000/– (ಟಾರ್ಗೆಟ್ ಇರುವುದಿಲ್ಲ)
8904253623
8904253498

Sri Narayanananda Vidyalaya
(English medium School) Hinkal, Mysuru - 30
REQUIRED LADY TEACHERS
1) NST / Montessori, 2) P.U.C., D.Ed, 3) B.A., B.Ed 4) B.Sc., B.Ed, 5) C.PEd / B.PEd
Interview on 01-05-2022, Time: 10.00 a.m to 1.00 p.m
7353711673

ಬೇಕಾಗಿದ್ದಾರೆ
ಗರ್ಲ್ಸ್ ಹಾಸ್ಟೆಲ್‌ಗೆ ಪುರುಷ ಅಡುಗೆಯವರು ಬೇಕಾಗಿದ್ದಾರೆ. ವಯಸ್ಸು: 45 ವರ್ಷದೊಳಗಿರಬೇಕು. ಸಂಬಳ: ರೂ. 25,000 / ತಿಂಗಳಿಗೆ. ಸ್ಥಳ: ಬನ್ನಿಮಂಟಪ, ಮೈಸೂರು.
Mob: 8123081238

ಬೇಕಾಗಿದ್ದಾರೆ
ನರ್ಸಿಂಗ್ ಗರ್ಲ್ಸ್ ಹಾಸ್ಟೆಲ್‌ಗೆ ಮಹಿಳಾ ವಾರ್ಡನ್ ಬೇಕಾಗಿದ್ದಾರೆ. ವಯಸ್ಸು: 35 ವರ್ಷದೊಳಗೆ. ಸಂಬಳ: 10,000 ತಿಂಗಳಿಗೆ. ಸ್ಥಳ: ಬನ್ನಿಮಂಟಪ, ಮೈಸೂರು. ಸಂಪರ್ಕಿಸಿ:
Mob: 8123081238

HOUSE FOR RENT
#945, 6th Cross, Srirampura, 2nd Stage, Near Vijaya College, 3 bedroms house 1st floor with solar is for rent.
9945250004, 9141412690

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
26/5 ಕಾಶಿ ವಿಶ್ವನಾಥ, ಜಾರ್ಖಂಡ್ ವೈದ್ಯನಾಥ, ಗಯ, ಬುದ್ಧ ಗಯ, ಪ್ರಯಾಗ ರಾಜ್, ಅಯೋಧ್ಯಾ. 2/5 ದೆಹಲಿ, ವೈಷ್ಣೋದೇವಿ, ಕುಲು, ಮನಾಲಿ, ಶಿಮ್ಲಾ, ಹಿಮಾಚಲ. 16/05 ಕೇರಳ ಪ್ರವಾಸ. ಕೊಚಿನ್, ಗುರುವಾಯೂರು, ಚೋಟಾನಿಕೆರೆ, ಅಲ್ಲೆಪ್ಪಿ, ಟ್ರಿವಂಡ್ರಮ್. 19/5 ಶಿರಡಿ, ಪಂಡರಾಪುರ, ಶನಿಸಿಂಗನಪುರ, ಎಲ್ಲೋರ, ಗೃಷ್ಣೇಶ್ವರ. 26/5 ರಾಮೇಶ್ವರಂ, ಮಧುರೈ, ಶ್ರೀರಂಗಂ, ತಂಜಾವೂರು. 13/6 Gangtok, ಡಾರ್ಜಿಲಿಂಗ್, ಸಿಕ್ಕಿಂ, ಕೋಲ್ಕತ್ತಾ. 01/07 ಅಮರನಾಥ ಯಾತ್ರೆ
9964527782 / 9591017782

WANTED TEACHERS
PAVAMAN INNOVATIVE SCHOOL (1st Std to 8th std)
Post :4 .English. Science, Social &, Computer. Qua:D Ed /,B Ed,/Any Degree (Females only). English & computer Knowledge must. #7th Cross 3rd Main, B.M. Shree Nagar, Metagalli Mysore.
Mob: 8197695840 / 8431891316
email: himalayanschool100@gmail.com

WANTED
Beauticians - 4 No.s Vontikoppal & Kuvempunagar
9008102327

SITE FOR SALE
30x40 ಅಳತೆ ಪೂರ್ವಾಭಿಮುಖ ಜ್ಞಾನಭಾರತಿ ಲೇಔಟ್ ದಡದಹಳ್ಳಿ, ಮುಡಾ ಖಾತೆ ಆಗಿದೆ. ಬೆಲೆ : 20 ಲಕ್ಷ
9342123373

ತಕ್ಷಣ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಕೆಲಸ ಮಾಡಲು ಅನುಭವವುಳ್ಳ ಹುಡುಗಿಯರು ಬೇಕಾಗಿದ್ದಾರೆ. Fix Salary + Incentive
9880328865

ಶಿಕ್ಷಕರು ಬೇಕಾಗಿದ್ದಾರೆ
ಪ್ರೇರಣಾ ವಿದ್ಯಾ ಸಂಸ್ಥೆ, ಅಂಕನಶೆಟ್ಟಿಪುರ, ಚಾಮರಾಜನಗರ ತಾಲ್ಲೂಕು, ಜಿಲ್ಲೆ
B.Sc, B.Ed - 2
B.A, B.Ed (ಇಂಗ್ಲೀಷ್, ಹಿಂದಿ)-2
P.E.T - 1
PUC, D.Ed - 2
NST -2
8453857576 / 8762718423

ಕಳೆದಿದೆ
ಸಂಯುಕ್ತ .ಎಂ.ಬಿ. ಆದ ನಾನು ನಮ್ಮ ಊರಿನಿಂದ ಮೈಸೂರಿಗೆ ಪ್ರಯಾಣಿಸುವಾಗ ಜಗದೀಶರವರ ಕ್ರಯಪತ್ರ, ಖಾತಪತ್ರ ಮತ್ತು ನಂಜುಂಡಸ್ವಾಮಿ ಯವರ ಖಾತಪತ್ರ (ನಿವೇಶನದ ಸಂಖ್ಯೆ 298/7) ಕಳೆದು ಹೋಗಿದ್ದು ಸದರಿ ಮೂಲಪತ್ರಗಳು ಯಾರಿಗಾದರು ಸಿಕ್ಕಿದಲ್ಲಿ ಈ ಕೆಳಕಂಡ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ:
9900486705

ಕಳೆದಿದೆ
ಎನ್.ಸೋಮಣ್ಣ ಆದ ನಾನು ದಿನಾಂಕ: 15.04.2022 ರಂದು ಕೆ.ಆರ್.ನಗರ ಬಸ್ ನಿಲ್ದಾಣದಲ್ಲಿ ನನ್ನ ಬ್ಯಾಗ್ ಕಳೆದು ಹೋಗಿದ್ದು, ಅದರಲ್ಲಿ ಕೆ.ಆರ್.ನಗರ ಟೌನ್ ಅರ್ಕನಾಥ ರಸ್ತೆಯಲ್ಲಿರುವ ಆರ್‌ಸಿಸಿ ಮನೆಯ ಖಾತಾ ನಂ.501/491 ಮತ್ತು 1668 / 1138 ರ 20*100 ಅಳತೆಯ ಕ್ರಯಪತ್ರ ಕಳೆದು ಹೋಗಿದ್ದು, ಸಿಕಿದ್ದಲ್ಲಿ ಸಂಪರ್ಕಿಸಿ:
9945149716

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Any Degree Pass / Fail ಆದವರಿಗೆ Helper, Packing, Labelling ಮತ್ತು Cashier, Billing, Data Entry, Receptionist, Front office ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14,000-39000 (ESI+PF+OT) ಸೇರಿ. ಸಂಪರ್ಕಿಸಿ
7892878915 / 9663704915

30x40 ಸೈಟು ಮಾರಾಟಕ್ಕಿದೆ
ವಿಜಯನಗರ 4ನೇ ಹಂತ ಹತ್ತಿರ, ಪ್ರೀತಿ ಬಡಾವಣೆ ಪಕ್ಕ, ಬೋಗಾದಿ ಪಟ್ಟಣ ಪಂಚಾಯಿತಿ ನಮೂನೆ – 3
9620563026

WANTED URGENT
ಹೊಸದಾಗಿ ಆರಂಭಿಸಿರುವ Impulse Project ಗಳಿಗೆ 10th, PUC, Age (18-22) Earn (8,500/- ರಿಂದ 16,500/-) pm Freshers Only, No.Fee, Full Time Work ಪರಸ್ಥಳದವರಿಗೆ ವಸತಿಗಾಗಿ Call: 9am to 5.30pm, ಕಾವ್ಯ:
9342827788
9353475598

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ. ಸಂಪರ್ಕಿಸಿ.
9449380528
7026498386

ಕಲಸಕ್ಕೆ ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್ ಅನುಭವ ಇರುವ ಮಹಿಳಾ ಅಭ್ಯರ್ಥಿ ಕೆಲಸಕ್ಕೆ ಬೇಕಾಗಿದ್ದಾರೆ
ಅಶೋಕಪುರಂ, ಜಯನಗರ, ಕೆ.ಜಿ.ಕೊಪ್ಪಲು, ಕೃಷ್ಣಮೂರ್ತಿಪುರಂ ಸುತ್ತಮುತ್ತಲಿನವರಿಗೆ ಮೊದಲ ಆದ್ಯತೆ
ಭುವನಶ್ರೀ ಪರಿವಾರ, ಕೃಷ್ಣಮೂರ್ತಿಪುರಂ, ಮೈಸೂರು
9480497300 / 9342101387

MUDA SITE FOR SALE
40'x60' NORTH FACING VIJAYANAGAR 4th STAGE 2nd PHASE MYSORE -17
Site No : 11759
Per sqft : 4750, Negotiable
9342113036

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ಅನಿಮಲ್ ಫೀಡ್ ಕಂಪನಿಗೆ ಪ್ಯಾಕಿಂಗ್, ಲೋಡಿಂಗ್ ಕೆಲಸಕ್ಕೆ 18 ರಿಂದ 50 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆಇಲ್ಲ. ಸಂಬಳ: 12,000/– (ಹನ್ನೆರಡು ಸಾವಿರ) ಇ.ಎಸ್.ಐ+ ಪಿ.ಎಫ್ ಬೋನಸ್ ಇರುತ್ತದೆ. ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್ ಪ್ರೈಸಸ್, Interview: ಬೆಳಿಗ್ಗೆ 10 ಗಂಟೆಯಿಂದ 11.30 ರ ವರೆಗೆ, ಸ್ಥಳ: CIEPT ಕಾಲೇಜು ಹತ್ತಿರ
ಲೋಕೇಶ್: 8722844236

ಅನುಗ್ರಹ ಯಾತ್ರ
29.4.2022 ಅಮವಾಸ್ಯೆಗೆ ಸಿಗಂದೂರು, ಕಮಲಶಿಲೆ, ಉಡುಪಿ.
29.4.2022 ಚಿಕ್ಕಮಗಳೂರು, ಕೆಮ್ಮಣ್ಣಗುಂಡಿ.
7.6.2022 ಚಾರ್‌ದಾಮ್.
13.5.2022 ನಾಗರಹೊಳೆ, ಮಡಿಕೇರಿ
9880079351

ತಕ್ಷಣ ಬೇಕಾಗಿದ್ದಾರೆ
ಮೈಸೂರು ನಗರದ ಅರಸು ರೋಡ್‌ನಲ್ಲಿರುವ ಹೆಸರಾಂತ ಬಟ್ಟೆ ಅಂಗಡಿಯಲ್ಲಿ 18 ರಿಂದ 30 ವರ್ಷ ವಯಸ್ಸಿನ SSLC ಪಾಸಾಗಿದ್ದು ದೃಢಕಾಯರಾಗಿರುವ ಹುಡುಗ ಹಾಗೂ ಹುಡುಗಿಯರು ಕೆಲಸ ಮಾಡಲು ಬೇಕಾಗಿದ್ದಾರೆ. ಮತ್ತು ಮೈಸೂರಿನ ಕೂರ್ಗಳ್ಳಿ ಹಾಗೂ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿ ಮತ್ತು ಮೈಸೂರು ಸಿಟಿಯ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಅನುಭವವಿರುವವರಿಗೆ ಮೊದಲ ಆದ್ಯತೆ. (ಆಕರ್ಷಕ ಸಂಬಳವಿರುತ್ತದೆ)
9035050656 / 9035050653

ಕಳೆದು ಹೋಗಿದೆ
ಮಂಡ್ಯ ಸಿಟಿ, ಗಾಂಧಿನಗರ, 4ನೇ ಕ್ರಾಸ್, #2751 ರಲ್ಲಿ ವಾಸವಾಗಿರುವ ಲೇ ಕೆ ಎಸ್ ನಂಜುಂಡಸ್ವಾಮಿ ರವರ ಮಗ ಕೆ.ಎಸ್.ಶಿವಕುಮಾರ್ ಆದ ನಾನು ಈ ಮೂಲಕ ತಿಳಿಸುವುದೇನೆಂದರೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ನಾಗವಾಲ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಹುಯಿಲಾಳು ಗ್ರಾಮದ ಸರ್ವೆ ನಂ.69 ರಲ್ಲಿನ ನಿವೇಶನ ಸಂಖ್ಯೆ 55 ಖಜರ್ ಸಂಖ್ಯೆ 528/253 ಕ್ಕೆ ಸಂಬಂಧಿಸಿದ ಶುದ್ಧ ಕ್ರಯಪತ್ರ ಮೂಲಪ್ರತಿ, ನಕಲುಪ್ರತಿ, ಸ್ಟೇಟ್‌ಮೆಂಟ್ ಅಗ್ರಿಮೆಂಟ್, ಸೇಲ್ ಡೀಡ್ ನಂ.1, 2, 3 ಮತ್ತು 4 ದಾಖಲಾತಿಗಳು ಮಂಡ್ಯದ ಆರ್.ಪಿ.ರಸ್ತೆಯಲ್ಲಿರುವ ಜೆರಾಕ್ಸ್ ಅಂಗಡಿಯಲ್ಲಿ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಸಿಕ್ಕಿದವರು ಮೊ: 8217327976 ಸಂಖ್ಯೆಗೆ ಕರೆ ಮಾಡಿ ತಿಳಿಸುವಂತೆ ಕೋರಲಾಗಿದೆ.

WANTED ಬೇಕಾಗಿದ್ದಾರೆ
Distributor ವಿತರಕರು AADI
9480381235

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಅನಿಮಲ್ ಫೀಡ್ ಕಂಪನಿಗೆ ಲೋಡಿಂಗ್, ಪ್ಯಾಕಿಂಗ್ ಮತ್ತು ಪೌಡರಿಂಗ್ ಮಾಡಲು 18 ರಿಂದ 50 ವರ್ಷದ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆಇಲ್ಲ. ಸಂಬಳ: 12,300/– ಸಂಪರ್ಕಿಸಿ:
ಸಾಯಿಕೃಪ ಎಂಟರ್ ಪ್ರೈಸಸ್
ಬೋರೇಗೌಡ: 8050905152
ರತ್ನಮ್ಮ: 9900889325

ಮನೆ ಮಾರಾಟಕ್ಕಿದೆ
20x30 ಅಳತೆಯ ಹೊಸ ಮನೆ ಲಾಲ್ ಬಹದ್ದೂರ್ ಶಾಸ್ತ್ರಿನಗರದಲ್ಲಿ ಮಾರಾಟಕ್ಕಿದೆ. W/N
7795316684

BRIDE / GROOMS MATCH MAKERS ವಧು–ವರರ ಮಾಹಿತಿ ಕೇಂದ್ರ
ಎಲ್ಲಾ ಜಾತಿಯ 18 to 65 ಡಾಕ್ಟರ್, ಇಂಜಿನಿಯರ್, Diploma, Any Degree etc. Govt. Jobs, Private Jobs/ Private /Own Business 18000 ವಧುಗಳಿಗೆ ವರಬೇಕು. 28000 ವರಗಳಿಗೆ ವಧು ಬೇಕು. 3200 ಡೈವೋರ್ಸಿಗಳು ವಿಧವೆಯರಿಗೆ ವಿಧುರರಿಗೆ ಮದುವೆಗೆ SSLC ಓದಿರುವ ಬಡವರ 420 ವಧುಗಳಿಗೆ ವರಬೇಕು. Life Partner ಗಾಗಿ ನೇರ ಸಂಪರ್ಕಿಸಿ. K R Circle, Mysore
ಚೇತನ ಗಂಗಾ: 7975728012

ಹೊಸ ಮನೆ ಮಾರಾಟಕ್ಕಿದೆ
30x40 ಹೊಸ ಮನೆ ಮಾರಾಟಕ್ಕಿದೆ. ವಿಜಯನಗರ 4ನೇ ಹಂತ, 2ನೇ ಫೇಸ್, ಪೂರ್ವ ದಿಕ್ಕು ಡ್ಯೂಪ್ಲೇಕ್ಸ್ 4BHK ಬೆಲೆ: 1,50,00,000/– (ಒಂದು ಕೋಟಿ 50 ಲಕ್ಷ)
8951787133

ವಧು – ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು – ವರರಿಗಾಗಿ ಕೂಡಲೇ ಸಂಪರ್ಕಿಸಿ. (II Marriages Also)
9343175000

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಸೇವ ಮನೋಭಾವವುಳ್ಳ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಆಧಾರ್ ಕಾರ್ಡ್ ಕಡ್ಡಾಯ, ಕೂಡಲೇ ಸಂಪರ್ಕಿಸಿ. ಸಂಬಳ 10,000 ರಿಂದ 15,000 ರವರೆಗೆ.
9035324777 / 7259306665
9035081222

ಮನೆ ಬಾಡಿಗೆಗಿದೆ
ಮೈಸೂರು, ಕುವೆಂಪುನಗರದ 'ಎಂ' ಬ್ಲಾಕಿನಲ್ಲಿರುವ 2BHK, AEH ಸೋಲಾರ್ ಸೌಲಭ್ಯವಿರುವ ಉತ್ತರ ದಿಕ್ಕಿಗೆ ಬಾಗಿಲಿರುವ ಎರಡನೇ ಮಹಡಿ (2nd Floor) ಮನೆ ಬಾಡಿಗೆಗೆ ಇರುತ್ತದೆ. ಸಂಪರ್ಕಿಸಿ.
9449703452

ಬೇಕಾಗಿದ್ದಾರೆ
ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಮೈಸೂರಿನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. Hebbal, Hootagahalli, Hinkal, Ontikoppal, KRS, Vidyaranyapuram, V.V.Puram, J.P.Nagar, Madkeri, Hunsuru, K.R.Nagar, H.D.Kote, Nanjangudu, Gundalpete, Kuvempunagar, Jayanagar. #37/A, 2nd Main, 18th Cross, Near Iskcon Temple, Jayanagar, Mysore. Contact:
9620581899 / 9880056545
9886056545 / 9901243624

ಹೊಸ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ
30x40 E/F 3BHK ಹೊಸ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ
9901899355

ಬೇಕಾಗಿದ್ದಾರೆ
ಬಟ್ಟೆಯಂಗಡಿಯಲ್ಲಿ ಕೆಲಸ ಮಾಡಲು ಚುರುಕಾದ ಮಹಿಳೆಯರು / ಹುಡುಗಿಯರು ಬೇಕಾಗಿದ್ದಾರೆ. ಸಮಯ ಬೆ: 9.30 ರಿಂದ 9.00 ವರೆಗೆ
ಮನೆ ಕೆಲಸ ಹಾಗೂ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಸ್ಥಳ: ಅಗ್ರಹಾರ ಸ್ಥಳೀಯರಿಗೆ ಮಾತ್ರ ಆದ್ಯತೆ
9986311444
9986322444

ಮನೆ ಭೋಗ್ಯಕ್ಕಿದೆ
20x30 ಸಿಂಗಲ್ ಬೆಡ್ ರೂಂ, ಮನೆ ವಿಜಯನಗರ 4ನೇ ಹಂತ, 1ನೇ ಫೇಸ್, ಮೈಸೂರು
9945534749

ಬೇಕಾಗಿದ್ದಾರೆ
ಮೈಸೂರಿನ ಸ್ಥಳೀಯ ಟಿವಿ ಚಾನೆಲ್‌ಗೆ ಬೇಕಾಗಿದ್ದಾರೆ. Female Anchor, Video Editor, Cameraman Contact:
9945995757

SITES FOR SALE
30x40 - R.T.Nagar, Entrance 50 m from Ring Road.
30x30 - 3 k m from Bogadi Ring Road
7026901111

ಕಛೇರಿ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸು: 21 to 30, ವಿದ್ಯಾರ್ಹತೆ: Any Degree (ಯಾವುದೇ ಪದವಿ), ಸಂಬಳ: 8k to 15k (8000-15000), ಸಮಯ: 10 to 5.30 pm, ಸ್ಥಳ: No.451/A, Skanda Complex, RTO Circle, Mysore
8904847399

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಗೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ|| ಎಸ್.ಮಣಿಕಂಠನ್
ಮೊ: 9480743991
ಮಹಾಮಾಂತ್ರಿಕ ಅಘೋರಿ ದೈವ ದೇವರ ಬಲಿಷ್ಠ ಪೂಜಾ ಶಕ್ತಿಗಳಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ 3 ದಿನಗಳಲ್ಲಿ ಶಾಶ್ವತ ಪರಿಹಾರ ವಿದ್ಯೆ ಉದ್ಯೋಗ, ಸಂತಾನ, ಪ್ರೀತಿ, ಪ್ರೇಮ, ಮದುವೆ, ಕೋರ್ಟ್, ಕೇಸು, ದಾಂಪತ್ಯ, ಗಂಡ ಹೆಂಡತಿ ಕಿರಿಕಿರಿ ಇಲ್ಲಿ ಹೇಳುವಂತ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು. ಖಾಯಂ ವಿಳಾಸ: ಅಶೋಕ ರೋಡ್, ಈಸ್ಟ್ ಕ್ರಾಸ್ 36, ಶುಭಂ ಜ್ಯುವಲರಿ ಎದುರು ಕನ್ನಿಕ ಪರಮೇಶ್ವರಿ ದೇವಸ್ಥಾನದ ಹತ್ತಿರ, ಮೈಸೂರು.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಪಾಂಡವಪುರದಲ್ಲಿ ರೈತ ಸಂಘದ ಪ್ರತಿಭಟನೆ



ಪಾಂಡವಪುರ,ಏ.22– ತಾಲೂಕು ಮಟ್ಟದ ಎಲ್ಲಾ ಇಲಾಖೆಗಳಲ್ಲಿ ಭ್ರಷ್ಟಾಚಾರ ಮಿತಿ ಮೀರಿದ್ದು, ರೈತರು ಮತ್ತು ಸಾರ್ವಜನಿಕರು ಕಚೇರಿಗಳಿಗೆ ಅಲೆಯುವುದು ತಪ್ಪುತ್ತಿಲ್ಲ ಎಂದು ಆರೋಪಿಸಿ ರೈತಸಂಘ ಕಾರ್ಯಕರ್ತರು ತಾಲೂಕು ಕಚೇರಿ ಮುಂಭಾಗ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ಐದು ದೀಪ ವೃತ್ತದಲ್ಲಿ ಜಮಾವಣೆಗೊಂಡ ಪ್ರತಿಭಟನಾಕಾರರು, ಮೆರವಣಿಗೆ ಮೂಲಕ ತಾಲೂಕು ಕಚೇರಿಗೆ ತೆರಳಿ ಧರಣಿ ನಡೆಸಿದರು. ಈ ವೇಳೆ ಭ್ರಷ್ಟ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತಸಂಘ ತಾಲೂಕು ಅಧ್ಯಕ್ಷ ಚಿಕ್ಕಾಡೆ ಹರೀಶ್ ಮಾತನಾಡಿ, ಸಾರ್ವಜನಿಕ ಕೆಲಸ ನಿರ್ವಹಿಸಲು ನೇಮಕವಾದವರು ಸಾರ್ವಜನಿಕರನ್ನು ಕಿತ್ತು ತಿನ್ನುತ್ತಿದ್ದಾರೆ. ರಾಜಕಾರಣಿಗಳು, ಪ್ರಭಾವಿಗಳ ಹಿಂಬಾಲಕರಾಗಿ ಅವರನ್ನು ಸಂತೋಷಪಡಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಕೆಲಸದಲ್ಲಿ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ, ಮಾನವೀಯತೆಯನ್ನು ಉಳಿಸಿಕೊಂಡಿಲ್ಲ. ಕಚೇರಿಗೆ ತೆರಳುವ ವೃದ್ಧರನ್ನು ತಾತ್ಸಾರದಿಂದ ಕಾಣಲಾಗುತ್ತಿದೆ. ಸರ್ಕಾರಿ ನೌಕರರಿಗೆ ವೇತನ ಹೆಚ್ಚಿಸಲು ಆಯೋಗ ರಚನೆ ಮಾಡಲಾಗಿದೆ. ರೈತರ ಬೆಳೆ ನಿಗದಿ ಮಾಡಲು ಯಾವುದೇ ಆಯೋಗ ಇಲ್ಲ. ಎಲ್ಲಾ ಪಕ್ಷಗಳು ರೈತರನ್ನು ಗುತ್ತಿಗೆ ಪಡೆದಿದ್ದೇವೆ ಎನ್ನುವಂತೆ ವರ್ತಿಸುತ್ತಿವೆ. ರೈತರು ಪಕ್ಷಾತೀತವಾಗಿ ಒಂದಾಗದಿದ್ದರೆ ರೈತರಿಗೆ ಉಳಿಗಾಲವಿಲ್ಲ ಎಂದರು.

40 ಪರ್ಸೆಂಟ್ ಸರ್ಕಾರ ಎನ್ನುತ್ತಾರೆ. ಇದರಲ್ಲಿ ಎಲ್ಲಾ ಪಕ್ಷದ ಶಾಸಕರಿಗೂ ಪರ್ಸೆಂಟೇಜ್ ತಲುಪುತ್ತದೆ. ಶೇ.98 ಅಧಿಕಾರಿಗಳು ಭ್ರಷ್ಟರಾಗಿದ್ದಾರೆ. ಶೇ.2ರಷ್ಟು ಅಧಿಕಾರಿಗಳು ಪ್ರಾಮಾಣಿಕರಿದ್ದಾರೆ. ಇಂತಹವರನ್ನು ಅಭಿನಂದಿಸುತ್ತೇವೆ ಎಂದರಲ್ಲದೇ, ಕೆ.ಎಸ್.ಪುಟ್ಟಣ್ಣಯ್ಯ ರೈತಸಂಘಟನೆ ಉಳಿಸಿಕೊಳ್ಳಿ ಎನ್ನುತ್ತಿದ್ದರು. ಆ ಮಾತು ಈಗ ಅರ್ಥವಾಗುತ್ತಿದೆ. ಅಧಿಕಾರಿಗಳು ಆಡಳಿತ ಸರಳೀಕರಣ ಮಾಡಿಕೊಂಡರೆ ಹಣ ಸಿಗಲ್ಲ ಎಂಬ ಕಾರಣಕ್ಕೆ ಸರಳೀಕರಣ ಮಾಡುತ್ತಿಲ್ಲ ಎಂದು ದೂರಿದರು.

ಅಧಿಕಾರಿಗಳಿಗೆ ರೈತರ ತರಾಟೆ: ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸೆಸ್ಕ್ ಎಇಇ, ಸಬ್ ರಿಜಿಸ್ಟ್ರಾರ್, ಎಡಿಎಲ್ಆರ್ ಸಹಾಯಕ ನಿರ್ದೇಶಕ, ಕೃಷಿ, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರು, ನೀರಾವರಿ ಎಇಇ, ತಾಪಂ ಇಒ, ತೋಟಗಾರಿಕೆ, ಉಪವಿಭಾಗೀಯ ಆಸ್ಪತ್ರೆ ಆಡಳಿತಾಧಿಕಾರಿ ಸೇರಿದಂತೆ ಎಲ್ಲ ಇಲಾಖೆಯ ಅಧಿಕಾರಿಗಳಿಗೆ ಪ್ರತಿಭಟನಾ ನಿರತ ರೈತರು ಪ್ರಶ್ನೆಗಳ ಸುರುಮಳೆಗೈದು ಇಲಾಖೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ಪ್ರಶ್ನಿಸಿದರು.

ತಹಸೀಲ್ದಾರ್ ಎಸ್.ಎಲ್.ನಯನ ಪ್ರತಿಭಟನೆ ಪ್ರಾರಂಭದಿಂದ ಅಂತ್ಯದವರೆಗೆ ಸ್ಥಳದಲ್ಲಿದ್ದು ರೈತರ ಸಮಸ್ಯೆ ಆಲಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಪ್ರಸನ್ನ ಎನ್.ಗೌಡ, ಜಿಪಂ ಮಾಜಿ ಸದಸ್ಯ ಕೆ.ಟಿ.ಗೋವಿಂದೇಗೌಡ, ರೈತಸಂಘ ತಾಲೂಕು ಗೌರವಾಧ್ಯಕ್ಷ ಡಿ.ಕೆ.ಸ್ವಾಮಿಗೌಡ, ಕಾರ್ಯದರ್ಶಿ ಕೆನ್ನಾಳು ವಿಜಯ ಕುಮಾರ್, ಉಪಾಧ್ಯಕ್ಷ ಕ್ಯಾತನಹಳ್ಳಿ ಮಹದೇವು, ಕೆನ್ನಾಳು ನಾಗರಾಜು, ಹೊಸಕೋಟೆ ವಿಜಯ ಕುಮಾರ್, ಹರವು ಎಚ್.ಎಲ್.ಪ್ರಕಾಶ್, ಎಣ್ಣೆಹೊಳೆಕೊಪ್ಪಲು ಮಂಜು, ವೈ.ಜಿ.ರಘು, ಬೀರಶೆಟ್ಟಹಳ್ಳಿ ಗಿರೀಶ್ ಇತರರು ಇದ್ದರು.

ಕಾವೇರಿ ನದಿಯಲ್ಲಿ ಮುಳುಗಿ ಶಿಕ್ಷಕ ಸಾವು

ಶ್ರೀರಂಗಪಟ್ಟಣ, ಏ.22(ಮಂಜು)– ಕೃಷ್ಣರಾಜಸಾಗರದ ಸಮೀಪದ ಬೆಳಗೊಳ ಗ್ರಾಮದ ಬಳಿಯ ಬಲಮುರಿ ಪ್ರವಾಸಿ ತಾಣದ ಕಾವೇರಿ ನದಿಯಲ್ಲಿ ಆಟವಾಡಲು ಹೋಗಿ ಬೆಳಗಾವಿ ಜಿಲ್ಲೆಯ ಶಿಕ್ಷಕ ನಾಗನಗೌಡ ಎಂ.ಪಾಟೀಲ್(38) ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಗುರುವಾರ ಸಂಜೆ ನಡೆದಿದೆ. ಮೃತರು ಬೆಳಗಾವಿಯ ರಾಮದುರ್ಗದ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದು, ಇವರ ಪತ್ನಿ ರಾಣಿ ನಾಗನಗೌಡ ಪಾಟೀಲ್ ಕೂಡ ಶಿಕ್ಷಕಿಯಾಗಿದ್ದು, ಮೃತರಿಗೆ ಓರ್ವ ಪುತ್ರನಿದ್ದಾನೆ. ಮೃತರ ಪತ್ನಿ ನೀಡಿದ ದೂರಿನ ಮೇರೆಗೆ ಕೆ.ಆರ್.ಸಾಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡ ಪಿ.ಎಸ್ಐ ಲಿಂಗರಾಜು, ಮೈಸೂರು ನಗರದ ಕೆ.ಆರ್.ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ ಸಂಬಂಧಿಕರಿಗೆ ನೀಡಲಾಯಿತು.

ಮುದ್ರಣ ಮಾಧ್ಯಮ ವಿಶ್ವಾಸಾರ್ಹತೆ ಉಳಿಸಿಕೊಳ್ಳಬೇಕಿದೆ

ರಾಜ್ಯಸಭೆ ಉಪಸಭಾಪತಿ ಹರಿವಂಶ್ ನಾರಾಯಣ್‌ಸಿಂಗ್ ಪ್ರತಿಪಾದನೆ



ಮಂಡ್ಯ,ಏ.22(ಮೋಹನ್‌ರಾಜ್)– ಪ್ರಸ್ತುತ ಸನ್ನಿವೇಶದಲ್ಲಿ ಸಾಮಾಜಿಕ ಮಾಧ್ಯಮಗಳ ಅಬ್ಬರದ ಮುಂದೆ ಮುದ್ರಣ ಮಾಧ್ಯಮ ಮಂಕಾಗುವುದನ್ನು ತಪ್ಪಿಸಲು ಮುದ್ರಣ ಮಾಧ್ಯಮದಲ್ಲಿ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಬೇಕಿದೆ ಎಂದು ರಾಜ್ಯಸಭೆ ಉಪ ಸಭಾಪತಿ ಹರಿವಂಶ್ ನಾರಾಯಣ್ ಸಿಂಗ್ ಪ್ರತಿಪಾದಿಸಿದರು.

ಶುಕ್ರವಾರ ನಗರದ ಕಲಾಮಂದಿರ ರಸ್ತೆಯಲ್ಲಿರುವ ಜೆ.ಪಿ.ಸ್ಮಾರಕ ವಿದ್ಯಾ ಸಂಸ್ಥೆ ಆವರಣದಲ್ಲಿ ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟ, ನವದೆಹಲಿ ಮತ್ತು ಮಂಡ್ಯದ ಜೆ.ಪಿ.ಸ್ಮಾರಕ ವಿದ್ಯಾಸಂಸ್ಥೆ ಏರ್ಪಡಿಸಿದ್ದ ಬೆಳೆಯುತ್ತಿರುವ ವಿದ್ಯುನ್ಮಾನ ಪತ್ರೋದ್ಯಮ, ಮುಂದೆಯೂ ಗಾಂಧಿ ಮತ್ತು ಜಯಪ್ರಕಾಶ ನಾರಾಯಣ್ ಮಾರ್ಗದರ್ಶಕರು ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಆಧುನಿಕತೆ ಬೆಳೆದಂತೆ ಪತ್ರಿಕಾ ಕ್ಷೇತ್ರದಲ್ಲಿಯೂ ಡಿಜಿಟಲೀಕರಣ ಅಡಕವಾಗಿದೆ. ವಿದ್ಯುನ್ಮಾನ ಕ್ಷೇತ್ರದಲ್ಲಿ ಸುದ್ದಿಮಾಧ್ಯಮಗಳು ಹೆಚ್ಚು ಪ್ರಭಾವ ಬೀರತೊಡಗಿದಂತೆ ಸುದ್ದಿ ವಾಹಿನಿಗಳ ಒಂದಷ್ಟು ವೀಕ್ಷಕರು ಕಾಲಕ್ರಮೇಣ ಮುದ್ರಣ ಮಾಧ್ಯಮದಿಂದ ವಿಮುಖರಾಗತೊಡಗಿದರು. ಇದರ ಜೊತೆಗೇ ಸಾಮಾಜಿಕ ಮಾಧ್ಯಮ ಪ್ರವೇಶವಾಯಿತು. ಪ್ರತಿಯೊಬ್ಬರ ಕೈಯಲ್ಲೂ ಮೊಬೈಲ್ ಬಂದ ಪರಿಣಾಮ ಈ ಸಾಮಾಜಿಕ ಮಾಧ್ಯಮ ಅತಿ ಕಡಿಮೆ ಅವಧಿಯಲ್ಲಿ ತನ್ನ ಪ್ರಭಾವ ವಿಸ್ತರಿಸುತ್ತಾ ಹೋಯಿತು. ಇದರಿಂದ ಎಷ್ಟು ಉಪಯುಕ್ತವಿದೆಯೋ ಅಷ್ಟೇ ಅಪಾಯಕಾರಿಯಾಗಿಯೂ ಪರಿಣಮಿಸಿದ್ದನ್ನು ದೇಶದ ಜನ ನೋಡಿದ್ದಾರೆ ಆದ್ದರಿಂದ ಮುದ್ರಣ ಮಾಧ್ಯಮ ತನ್ನ ವಿಶ್ವಾಸಾರ್ಹತೆಯನ್ನು ಗಳಿಸಿಕೊಳ್ಳಬೇಕಾದರೆ ಗಾಂಧಿ, ಜೆಪಿ ಅವರು ತೋರಿದಂತಹ ವಿಶಾಸಾರ್ಹ ವರದಿ, ಲೇಖನಗಳ ಮೂಲಕ ಓದುಗರ ಮನ ಸೆಳೆಯಬೇಕೆಂದು ಸಲಹೆ ನೀಡಿದರು.

ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು ಮಾತನಾಡಿ, ಜಗತ್ತಿನಲ್ಲಿ ಯಾವುದೇ ಹೋರಾಟದ ಇತಿಹಾಸದ ಪುಟಗಳನ್ನು ಗಮನಿಸಿದರೆ ಪತ್ರಿಕಾ ರಂಗದ ಮಹತ್ವದ ಅರಿವಾಗುತ್ತದೆ. ಜನಾಭಿಪ್ರಾಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತ ಬಂದಿದೆ. ನಿರಂಕುಶತ್ವದ ವಿರುದ್ಧ ಜಾಗೃತಿ ಮೂಡಿಸುವಲ್ಲಿ ಮತ್ತು ಪ್ರಜಾಪ್ರಭುತ್ವದ ಜೀವಾಳವನ್ನು ಬೆಳೆಸುವಲ್ಲಿ ಸಂಯಮ ಮತ್ತು ನೈತಿಕತೆಯಿಂದ ಕೆಲಸ ಮಾಡಬೇಕಾಗಿದೆ. ಆದರೆ ಇಂದು ಬಂಡವಾಳಶಾಹಿಗಳ ಹಿಡಿತಕ್ಕೆ ಪತ್ರಿಕಾರಂಗ ಸಿಲುಕಿ ನಲುಗುತ್ತಿದೆ. ಇದರಿಂದ ನೈತಿಕತೆಯ ಅವನತಿ ಹೊಂದುತ್ತದೆಂದು ಎಚ್ಚರಿಸಿದರು.

ಒಕ್ಕೂಟದ ಗೌರವ ಕಾರ್ಯದರ್ಶಿ ಕೌಡ್ಲೆ ಚೆನ್ನಪ್ಪ ಮಾತನಾಡಿ, ಲೋಕನಾಯಕ ಜಯಪ್ರಕಾಶ ನಾರಾಯಣ್ ಅವರ ರಾಷ್ಟ್ರೀಯ ಸ್ಮಾರಕ ನಿರ್ಮಾಣವಾಗಬೇಕು ಹಾಗೂ ನಗರದ ಕಲಾಮಂದಿರ ರಸ್ತೆಗೆ ಜೆಪಿ ಅವರ ಹೆಸರನ್ನು ನಾಮಕರಣಗೊಳಿಸಬೇಕೆಂದು ಪ್ರಧಾನಿ ಹಾಗೂ ಮುಖ್ಯಮಂತ್ರಿಗಳಿಗೆ ಮಾಡಿರುವ ಮನವಿಯನ್ನು ನೀಡಿ, ಈ ಬಗ್ಗೆ ತಾವು ಗಮನ ನೀಡಬೇಕೆಂದು ಕೋರಿದರು.

ಕಾರ್ಯಕ್ರಮದಲ್ಲಿ ಒಕ್ಕೂಟದ ಅಧ್ಯಕ್ಷ ಬಿ.ವಿ.ಮಲ್ಲಿಕಾರ್ಜುನಯ್ಯ, ಪ್ರಧಾನ ಕಾರ್ಯದರ್ಶಿ ಪರಮಾನಂದ ಪಾಂಡೆ, ಪತ್ರಕರ್ತರಾದ ಎ.ಎಲ್.ಬಸವೇಗೌಡ, ಹೇಮಂತ್ ತಿವಾರಿ, ಎ.ಎಚ್.ನಾರಾಯಣ ಮತ್ತಿತರರಿದ್ದರು.

ಸೋಮನಹಳ್ಳಿ ಪಿಎಸಿಸಿ ಅಧ್ಯಕ್ಷರ ಆಯ್ಕೆ



ಕೆ.ಆರ್.ಪೇಟೆ,ಏ.22(ಶ್ರೀನಿವಾಸ್)– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಸೋಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸಾಕಮ್ಮ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಬ್ರಹ್ಮರಾಜಯ್ಯ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಇಂದು ಚುನಾವಣೆ ನಿಗದಿಯಾಗಿತ್ತು. ಸಾಕಮ್ಮ ಮತ್ತು ಶಿವು ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಟಿಎಪಿಸಿಎಂಎಸ್ ನಿರ್ದೇಶಕ ಮೋಹನ್‌ಕುಮಾರ್ ಬೆಂಬಲಿತ ಅಭ್ಯರ್ಥಿ ಸಾಕಮ್ಮ 6 ಮತಗಳನ್ನು ಪಡೆದು ಆಯ್ಕೆಯಾದರು. ಪ್ರತಿಸ್ಪರ್ಧಿ ಶಿವು 5 ಮತಗಳನ್ನು ಪಡೆದು ಪರಾಭವಗೊಂಡದರು. ಚುನಾವಣಾಧಿಕಾರಿಯಾಗಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ನಾಗಭೂಷಣ್ ಕಾರ್ಯನಿರ್ವಹಿಸಿದರು.

ನೂತನ ಅಧ್ಯಕ್ಷೆ ಸಾಕಮ್ಮ ಅವರನ್ನು ಟಿಎಪಿಸಿಎಂಎಸ್ ನಿರ್ದೇಶಕ ಮೋಹನ್‌ಕುಮಾರ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ಮೇಲ್ವಿಚಾರಕ ಆರ್.ಜಲೇಂದ್ರ, ಮುಖಂಡರಾದ ಪರಮೇಶ್ವರ್, ದೇವರಾಜೇಗೌಡ, ವೆಂಕಟೇಶ್‌ಗೌಡ್ರು, ಮಧು, ಪುರದ ಸುರೇಶ್, ರೇಣುಕೇಗೌಡ, ಸಂಗಾಪುರ ಸಿದ್ದೇಗೌಡ, ಜಗದೀಶ್, ಅಂಬಿಗರಹಳ್ಳಿ ಕುಮಾರ್, ಶಶಿ ಕುಮಾರ್ ನಿರ್ದೇಶಕರಾದ ಅಣ್ಣೇಗೌಡ, ದೇವರಾಜ್, ಎ.ಟಿ.ರಾಮೇಗೌಡ, ಪ್ರಸನ್ನ, ಬ್ರಹ್ಮರಾಜಯ್ಯ ಬೋಜರಾಜು, ಶಿವರಾಜು, ಮಂಜೇಗೌಡ, ಕುಮಾರ್, ಶೇಷಗೌಡ ಇತರರು ಅಭಿನಂದಿಸಿದರು.

ನಿಷ್ಠೆ, ಶ್ರದ್ಧೆಯಿಂದ ಉನ್ನತ ಸ್ಥಾನ ಲಭ್ಯ

ಶ್ರೀರಂಗಪಟ್ಟಣ,ಏ22(ವಿನಯ್ ಕಾರೇಕುರ)–ಮನೆಯಲ್ಲಿ ತಾಯಿಯ ಸ್ಫೂರ್ತಿ, ತಂದೆ ಆದರ್ಶ ಹಾಗೂ ಪತಿಯ ಬೆಂಬಲದಿಂದ ಉನ್ನತ ಸ್ಥಾನಗಳು ದೊರೆತಿವೆ ಎಂದು ಪಾಂಡವಪುರದ ನೂತನ ತಹಸೀಲ್ದಾರ್ ನಯನಾ ಲಿಂಗರಾಜು ಹೇಳಿದರು.

ಶ್ರೀರಂಗಪಟ್ಟಣದ ತವರು ಗ್ರಾಮ ಕೆ.ಶೆಟ್ಟಿಹಳ್ಳಿಯಲ್ಲಿ ಡಾ.ಬಿಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಮಂಡ್ಯ ಜಿಲ್ಲಾ ಕಬಡ್ಡಿ ಅಮೇಚೂರ್ ಅಸೋಸಿಯನ್ ಆಶ್ರಯದಲ್ಲಿ ಮೈಸೂರು ವಿಭಾಗಮಟ್ಟದ ಪುರುಷರ ಕಬಡ್ಡಿ ಪಂದ್ಯಾವಳಿಯಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ತವರುಗ್ರಾಮ ಕೆ.ಶೆಟ್ಟಿಹಳ್ಳಿಯಂತಹ ಚಿಕ್ಕ ಗ್ರಾಮದಲ್ಲಿ ಹುಟ್ಟಿ ಇದೀಗ ತಹಸೀಲ್ದಾರ್ ಹುದ್ದೆಯಲ್ಲಿದ್ದು ಎಲ್ಲಾ ಕಡೆ ಗೌರವ ದೊರೆಯುತ್ತಿದ್ದು, ತವರು ಗ್ರಾಮದಲ್ಲಿ ಸನ್ಮಾನ ಸ್ವೀಕರಿಸುವುದು ನನ್ನ ಪುಣ್ಯವಾಗಿದೆ. ಇಲ್ಲಿ ಆಟವಾಡಿಕೊಂಡು ಬೆಳೆದ ನನ್ನವರು ಗುರುತಿಸಿರುವುದು ವಿಶೇಷವಾಗಿದೆ. ಬಹಳ ಶ್ರದ್ಧೆಯಿಂದ ಶಿಕ್ಷಣದ ಕಡೆ ಗಮನವಿಟ್ಟು ಓದಬೇಕು. ಆಗ ಎಲ್ಲಾ ಹುದ್ದೆಗಳು ಹುಡುಕಿಕೊಂಡು ಬರುತ್ತವೆ. ಈ ಸ್ಥಾನಕ್ಕೆ ಬರಲು ನನ್ನ ತಾಯಿಯಿಂದ ಸಮಾಜದಲ್ಲಿ ಬೆಳೆಯುವುದರ ಬಗ್ಗೆ ಕಲಿತೆ. ತಂದೆ ಲಿಂಗರಾಜು ಸಮಾಜ ಸೇವೆಯಲ್ಲಿ ಹೆಸರಾ ದವರು, ನನ್ನ ಜೊತೆಗೆ ನಿಂತು ಬೆಂಬಲಿಸಿದ್ದು ನನ್ನ ಪತಿ ಎಸ್.ಸಚ್ಚಿದಾನಂದ, ಸಹೋದರ ದರ್ಶನ್ ಕೂಡ ನನಗೆ ಬಹಳ ಸಹಕಾರ ನೀಡಿದ್ದು, ತಹಸೀಲ್ದಾರ್ ಹುದ್ದೆಯಲ್ಲಿ ಸೇವೆ ಸಲ್ಲಿಸಲು ಕಾರಣವಾಗಿದ್ದಾರೆ ಎಂದರು. ಈ ವೇಳೆ ಆಟಗಾರರು ಹಾಗೂ ಗ್ರಾಮಸ್ಥರು ಇದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೈಸೂರು ಮಿತ್ರ ಶನಿವಾರ 23 ಏಪ್ರಿಲ್ 2022

ಸಹಕಾರ ಸಂಘಗಳಿಗೆ ಕಂಪ್ಯೂಟರ್ ವಿತರಣೆ

ಮಡಿಕೇರಿ, ಏ.22– ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಉಚಿತವಾಗಿ ನೀಡಲಾಗುತ್ತಿರುವ ಎಲೆಕ್ಟ್ರಾನಿಕ್ ಉಪಕರಣಗಳ ಸದುಪಯೋಗವನ್ನು ಎಲ್ಲಾ ಸಹಕಾರ ಬ್ಯಾಂಕ್‌ಗಳು ಪಡೆದುಕೊಳ್ಳುವಂತೆ ಕೆ.ಜಿ.ಬೋಪಯ್ಯ ಹೇಳಿದರು.



ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಹಾಗೂ ಅಪೆಕ್ಸ್ ಬ್ಯಾಂಕಿನ ನಿರ್ದೇಶಕರ ಅನುದಾನದಿಂದ ಸಹಕಾರ ಸಂಘಗಳಿಗೆ ನಗರದ ಕೊಡವ ಸಮಾಜದಲ್ಲಿ ಏರ್ಪಡಿಸಲಾಗಿದ್ದ ಕಂಪ್ಯೂಟರ್ ಸೇರಿದಂತೆ ಎಲೆಕ್ಟ್ರಾನಿಕ್ ಉಪಕರಣ ವಿತರಣಾ ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಫ್ರೂಟ್ಸ್ ಆ್ಯಪ್ ತಂತ್ರಾಂಶವನ್ನು ಸರ್ಕಾರ ರೈತರ ಒಳಿತಿಗಾಗಿ ಜಾರಿಗೊಳಿಸಿದೆ. ಇದು ಕೇಂದ್ರ ಸರ್ಕಾರ ಯೋಜನೆಯಾಗಿದ್ದು, ಯಾವುದೇ ರೀತಿಯ ಅವ್ಯವಹಾರಗಳು ನಡೆಯಬಾರದು ಎಂಬ ದೃಷ್ಟಿಕೋನದಿಂದ ಫ್ರೂಟ್ಸ್ ತಂತ್ರಾಂಶ ಜಾರಿಗೊಳಿಸಿದೆ ಎಂದು ಅವರು ಹೇಳಿದರು.

ಸಹಕಾರ ಸಂಘಗಳು ರೈತರಿಗೆ ಸಾಲ ಸೌಲಭ್ಯಗಳ ಮೂಲಕ ಸಹಾಯ ಮಾಡುತ್ತಾ ಬಂದಿದ್ದು. ಸಹಕಾರ ಸಂಘಗಳು ರೈತರಿಗೆ ಸಹಕಾರಿಯಾಗಿದೆ. ಸಹಕಾರ ಸಂಘಗಳು ಉಳಿಯುವುದರ ಜೊತೆಗೆ ರೈತರನ್ನು ಆರ್ಥಿಕವಾಗಿ ಪ್ರಬಲರನ್ನಾಗಿಸಲು ಸಹಕಾರಿಯಾಗಬೇಕು ಎಂದು ಅವರು ಹೇಳಿದರು.

ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ, ಸಹಕಾರ ಸಂಘಗಳು ರೈತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮತ್ತು ರೈತರಿಗೆ ಕೃಷಿ ಚಟುವಟಿಕೆಗಳಲ್ಲಿ ತೊಡಗಲು ಸಹಕಾರ ಬ್ಯಾಂಕ್‌ಗಳು ಆರ್ಥಿಕವಾಗಿ ಸಹಾಯ ಮಾಡುತ್ತಿದೆ. ಸಹಕಾರ ಬ್ಯಾಂಕುಗಳು ಜಿಲ್ಲೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ರವಿಕುಶಾಲಪ್ಪ ಮಾತನಾಡಿ, ರೈತರ ಕಣ್ಣೀರು ಒರೆಸುವ ಕೆಲಸ ಸಹಕಾರ ಸಂಘಗಳಿಂದ ಆಗುತ್ತಿದೆ. ರೈತಪರವಾದ ಸಹಕಾರ ಸಂಘವು ಜಿಲ್ಲೆಯಲ್ಲಿದೆ ಎಂದು ಅವರು ಹೇಳಿದರು.

ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾದ ಕೊಡಂದೇರ ಪಿ. ಗಣಪತಿ ಮಾತನಾಡಿದರು.

ಬ್ಯಾಂಕಿನ ಉಪಾಧ್ಯಕ್ಷ ಕೆಟೋಳಿರ ಹರೀಶ್ ಪೂವಯ್ಯ, ನಿರ್ದೇಶಕರುಗಳಾದ ಬಿ.ಕೆ. ಚಿಣ್ಣಪ್ಪ, ಪಟ್ರಪಂಡ ಬಿ. ರಘು ನಾಣಯ್ಯ, ಹೊಟ್ಟೆಂಗಡ ಎಂ ರಮೇಶ್, ಹೊಸೂರು ಜೆ ಸತೀಶ್‌ಕುಮಾರ್, ಕಿಮ್ಮುಡೀರ ಎ ಜಗದೀಶ್, ಅರುಣ್ ಬೀಮಯ್ಯ, ಎ.ಗೋಪಾಲಕೃಷ್ಣ, ಪ್ರಧಾನ ವ್ಯವಸ್ಥಾಪಕಿ ಎ.ಎಸ್.ಪಾರ್ವತಿ ಉಪಸ್ಥಿತರಿದ್ದರು.

ಸಾಲ ಬಾಧೆ: ಗುಂಡು ಹೊಡೆದುಕೊಂಡು ವ್ಯಕ್ತಿ ಆತ್ಮಹತ್ಯೆ

ನಾಪೋಕ್ಲು,ಏ.22– ಸಾಲಬಾಧೆಯಿಂದ ವ್ಯಕ್ತಿಯೋರ್ವ ಗುಂಡು ಹೊಡೆದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಇಟ್ಟಿಗೆ ಸಮೀಪದ ಚೋನಾಕೆರೆ ಗ್ರಾಮದಿಂದ ವರದಿಯಾಗಿದೆ.



ಗ್ರಾಮದ ನಿವಾಸಿ ಕಲ್ಲೆಂಗಡ ಕುಟ್ಟಪ್ಪ ಅಲಿಯಾಸ್ ಕುಮಾರ (56) ಆತ್ಮಹತ್ಯೆಗೆ ಶರಣಾದವನಾಗಿದ್ದು, ತವರು ಮನೆಯಲ್ಲಿದ್ದ ಅವರ ಪತ್ನಿ ಇಂದು ಬೆಳಗ್ಗೆ ಪತಿ ಮೊಬೈಲ್‌ಗೆ ಕರೆ ಮಾಡಿದಾಗ, ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ಅವರು ನೆರೆ ಮನೆಯವರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ನೆರೆ ಮನೆಯವರು ಬಂದು ನೋಡಿದಾಗ ಕುಟ್ಟಪ್ಪ ಮನೆಯ ಕೋಣೆಯಲ್ಲಿ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಈ ಕುರಿತು ನಾಪೋಕ್ಲು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಇಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಶತಮಾನೋತ್ಸವ

ಮಡಿಕೇರಿ, ಏ.22–ಸೋಮವಾರಪೇಟೆ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಂ.2759) 103 ನೇ ವರ್ಷ ಪ್ರಯುಕ್ತ ಶತಮಾನೋತ್ಸವ ಸಮಾರಂಭವು ಏ.23 ರಂದು ಬೆಳಗ್ಗೆ 9.30 ಗಂಟೆಗೆ ಸಂಘದ ಮುಖ್ಯ ಕಚೇರಿಯಲ್ಲಿ ನಡೆಯಲಿದೆ.

ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಂತರ ಬೆಳಗ್ಗೆ 10 ಗಂಟೆಗೆ ವಿವೇಕಾನಂದ ವೃತ್ತದಿಂದ ಒಕ್ಕಲಿಗರ ಸಮುದಾಯ ಭವನದವರೆಗೆ ಶೋಭಾ ಯಾತ್ರೆ ನಡೆಯಲಿದೆ. ಶಾಸಕ ಕೆ.ಜಿ.ಬೋಪಯ್ಯ ಅವರು ಶೋಭಾಯಾತ್ರೆಗೆ ಚಾಲನೆ ನೀಡಲಿದ್ದಾರೆ. ಬೆಳಗ್ಗೆ 10.30 ಗಂಟೆಗೆ ಸೋಮವಾರಪೇಟೆ ಒಕ್ಕಲಿಗರ ಸಮುದಾಯ ಭವನದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಶತಮಾನೋತ್ಸವ ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸೋಮವಾರಪೇಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಎಚ್.ಕೆ.ಮಾದಪ್ಪ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಅವರು ಶತಮಾನೋತ್ಸವ ನೆನಪಿಗಾಗಿ ಸದಸ್ಯರಿಗೆ ಬೆಳ್ಳಿ ನಾಣ್ಯ ವಿತರಣೆ ಮಾಡಲಿದ್ದಾರೆ. ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್ ಮತ್ತು ಅತಿಥಿಗಳಿಂದ ಸಹಕಾರ ಸಂಘದ ಸ್ಥಾಪಕ ಅಧ್ಯಕ್ಷರಾದ ದಿ.ಡಿ.ನಾರಾಯಣ ಶೆಟ್ಟಿಯವರ ಹಾಗೂ ಕೊಡಗಿನ ಪ್ರಥಮ ಸಹಕಾರ ಸಂಘದ ಸ್ಥಾಪಕರಾದ ದಿ.ಕುರಾದಗೌಡ್ನಮನೆ ದೊಡ್ಡಯ್ಯರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಸಂಸದ ಪ್ರತಾಪ್ ಸಿಂಹ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ.

ವಾಹನ ಸಂಚಾರ ನಿಷೇಧ; ಬದಲಿ ರಸ್ತೆ ಬಳಸಲು ಸೂಚನೆ

ಮಡಿಕೇರಿ, ಏ.22–ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕು ಬೆಂಗಳೂರು–ಜಾಲೂರು ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡು ಕಾಂಕ್ರೀಟ್ ರಸ್ತೆ ನಿರ್ಮಿಸುವ ನಿಟ್ಟಿನಲ್ಲಿ ಸೋಮವಾರಪೇಟೆ ತಾಲೂಕು ಬೆಂಗಳೂರು–ಚಾಲ್ಲೂರು ರಸ್ತೆಯ ಕಿ.ಮೀ. 241.00 ರಿಂದ ಕಿ.ಮೀ. 242.00 ರವರೆಗಿನ (ಸ್ಥಳ: ಆಲೆಕಟ್ಟೆ) ರಸ್ತೆಯಲ್ಲಿ ಏ.24 ರಿಂದ ಮೇ 23ರ ವರೆಗೆ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಡಾ.ಬಿ.ಸಿ.ಸತೀಶ ಅವರು ಆದೇಶ ಹೊರಡಿಸಿದ್ದಾರೆ. ಸಾರ್ವಜನಿಕರು ಬದಲಿ ರಸ್ತೆಯಾದ ಜೂನಿಯರ್ ಕಾಲೇಜು ಚೌಡ್ಲು–ಶಾಂತಳ್ಳಿ ಮಾರ್ಗವಾಗಿ ಅಥವಾ ಕಕ್ಕೆಹೊಳೆ–ಹಾನಗಲ್ಲು–ಬಿ.ಟಿ.ಸಿ.ಜಿ ಕಾಲೇಜು–ಕಲ್ಕಂದೂರು ಜಂಕ್ಷನ್ ಮಾರ್ಗವನ್ನು ಬಳಸುವಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ತಿಳಿಸಿದ್ದಾರೆ.

ಈಶಾನ್ವಿಗೆ ಸ್ವಾಮಿ ವಿವೇಕಾನಂದ ಸದ್ಭಾವನ ಪ್ರಶಸ್ತಿ

ವಿರಾಜಪೇಟೆ, ಏ.22–ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ನಯನ ಸಭಾಂಗಣದಲ್ಲಿ ಸ್ವಾನ್ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಸಂಸ್ಥೆ ಹಾಗೂ ಹೆಗಡೆ ಕಲ್ಚರಲ್ ಮತ್ತು



ಸೋಶಿಯಲ್ ಅಕಾಡೆಮಿ ವತಿಯಿಂದ ನಡೆದ ಸಾಂಸ್ಕೃತಿಕ ಸ್ಪರ್ಧೆ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಭರತನಾಟ್ಯ ಕಲಾವಿದೆ ಕೆ. ಈಶಾನ್ವಿ ಅವರಿಗೆ ಸ್ವಾಮಿ ವಿವೇಕಾನಂದಾ ಸದ್ಭಾವನಾ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಈ ಸಂದರ್ಭ ಪ್ರಶಸ್ತಿ ಫಲಕದೊಂದಿಗೆ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದಿಂದ ಭಾರತ ಸರ್ಕಾರದ ಚಿಹ್ನೆಯನ್ನು ಹೊಂದಿರುವಂತಹ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಗಿದೆ. ಕುಮಾರಿ ಕೆ. ಈಶಾನ್ವಿ ವಿರಾಜಪೇಟೆ ಆರ್ಜಿ ಗ್ರಾಮದ ಕಿರಣ್ ಮತ್ತು ರಜಿತ ದಂಪತಿಯ ಪುತ್ರಿ. ಇವರು ಅರಮೇರಿ ಎಸ್.ಎಂ.ಎಸ್ ಶಾಲೆಯ ನಾಲ್ಕನೇ ತರಗತಿ ವಿದ್ಯಾರ್ಥಿನಿಯಾಗಿದ್ದು, ನಾಟ್ಯಮಯೂರಿ ನೃತ್ಯ ಶಾಲೆಯ ವಿದುಷಿ ಪ್ರೇಮಾಂಜಲಿ ಆಚಾರ್ಯರವರ ಶಿಷ್ಯೆ. ಪ್ರಶಸ್ತಿ ಪ್ರದಾನ ಸಮಾರಂಭದ ಸಂದರ್ಭ ಖ್ಯಾತ ಗಾಯಕ ಶಶಿಧರ್ ಕೋಟೆ, ಡಾ.ಪಿ.ಎನ್ ಹೆಗಡೆ, ಕೆಂಚನೂರ್ ಶಂಕರ್, ಹಾಗೂ ಹಲವಾರು ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

ಇಂದು ಜಿಲ್ಲಾ ಮಟ್ಟದ ವೀರಶೈವ ಲಿಂಗಾಯತ ದೊಡ್ಡವೀರ ರಾಜೇಂದ್ರ ಒಡೆಯರ್ ಕ್ರೀಡಾಕೂಟ

ಕುಶಾಲನಗರ, ಏ.22–ಅಖಿಲ ಭಾರತ ವೀರಶೈವ ಮಹಾಸಭಾ ಕೊಡಗು ಜಿಲ್ಲಾ ಘಟಕದ ಆಶ್ರಯದಲ್ಲಿ ಏ.23ರಂದು ಜಿಲ್ಲಾ ಮಟ್ಟದ ವೀರಶೈವ ಲಿಂಗಾಯತ ದೊಡ್ಡ ವೀರ ರಾಜೇಂದ್ರ ಒಡೆಯರ್ ಕ್ರೀಡಾ ಕೂಟ ಹೆಬ್ಬಾಲೆಯ ಸಂಯುಕ್ತ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ಎಚ್.ವಿ.ಶಿವಪ್ಪ ತಿಳಿಸಿದ್ದಾರೆ.

ಅಂದು ಬೆಳಗ್ಗೆ 8.30ಕ್ಕೆ ಹೆಬ್ಬಾಲೆ ಬನಶಂಕರಿ ಅಮ್ಮನವರ ದೇವಸ್ಥಾನದಿಂದ ಬೈಕ್ ರ‍್ಯಾಲಿ ಮೂಲಕ ಕಾಲೇಜು ಮೈದಾನಕ್ಕೆ ಕ್ರೀಡಾ ಜ್ಯೋತಿ ತರಲಾಗುವುದು. ಅ ನಂತರ ಗುಂಪು ಆಟಗಳಾದ ಕ್ರಿಕೆಟ್, ಹಗ್ಗ ಜಗ್ಗಾಟ, ಥ್ರೋಬಾಲ್, ಶಟಲ್, ಬಾಲಕ–ಬಾಲಕಿಯರಿಗೆ ವೈಯಕ್ತಿಕ ಸ್ಪರ್ಧೆಗಳಾದ ಕಾಳು ಹೆಕ್ಕುವುದು, ಕಪ್ಪೆ ಕುಪ್ಪಳಿಸುವುದು, ಓಟದ ಸ್ಪರ್ಧೆಗಳು ಸೇರಿದಂತೆ ಮತ್ತಿತರ ಸ್ಪರ್ಧೆಗಳು, ಪುರುಷ ಮತ್ತು ಮಹಿಳೆಯರಿಗೆ ವೈಯಕ್ತಿಕ ಸ್ಪರ್ಧೆಗಳಾದ ನಿದಾನ ಬೈಕ್ ಚಾಲನೆ, ಭಾರದ ಗುಂಡು ಎಸೆತ, ರಂಗೋಲಿ, ಓಟ ಮತ್ತಿತರ ಸ್ಪರ್ಧೆಗಳು ನಡೆಯಲಿವೆ. ಏ.26ರಂದು ಜಿಲ್ಲಾ ಯುವ ಘಟಕ ಉದ್ಘಾಟನೆ, ಪ್ರತಿಭಾ ಪುರಸ್ಕಾರ, ಹಾನಗಲ್ಲು ಶ್ರೀ ಕುಮಾರಸ್ವಾಮಿಗಳ ಮತ್ತು ಡಾ.ಶ್ರೀ ಶಿವಕುಮಾರಸ್ವಾಮಿ ಜಯಂತಿ ಮತ್ತು ಧಾರ್ಮಿಕ ಸಭೆ ಕುಶಾಲನಗರದ ರೈತ ಸಹಕಾರ ಭವನದಲ್ಲಿ ನಡೆಯಲಿದೆ ಎಂದು ಮಾಹಿತಿ ನೀಡಿದರು. ಕ್ರೀಡಾ ಸಮಿತಿ ಅಧ್ಯಕ್ಷರಾಗಿ ಮೋಕ್ಷಿಕ್ ರಾಜ್, ಕ್ರೀಡಾ ಸಂಯೋಜಕರಾಗಿ ಆದರ್ಶ ಕಾರ್ಯ ನಿರ್ವಹಿಸಲಿದ್ದು, ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಜಿಲ್ಲಾಧ್ಯಕ್ಷ ಶಿವಪ್ಪ, ಪ್ರಧಾನ ಕಾರ್ಯದರ್ಶಿ ಸಾಂಭಶಿವಮೂರ್ತಿ, ಕೋಶಾಧ್ಯಕ್ಷ ಹೆಚ್.ಪಿ.ಉದಯಕುಮಾರ್, ಕುಶಾಲನಗರ ತಾಲೂಕು ಘಟಕ ಅಧ್ಯಕ್ಷ ಹೆಚ್.ಎಂ. ಮಧುಸೂದನ್ ಪತ್ರಿಕಾ ಪ್ರಕಟಣೆ ಮೂಲಕ ಕೋರಿದ್ದಾರೆ.

ಮರ ಬಿದ್ದು ದೇವಾಲಯಕ್ಕೆ ಹಾನಿ

ಮಡಿಕೇರಿ,ಏ.22– ಬೃಹತ್ ಗಾತ್ರದ ಮರವೊಂದು ಬಿದ್ದು ಇತಿಹಾಸ ಪ್ರಸಿದ್ಧ ಶ್ರೀ ಪನ್ನಂಗಾಲತಮ್ಮೆ ದೇಗುಲಕ್ಕೆ ಹಾನಿಯಾಗಿರುವ ಘಟನೆ ವಿರಾಜಪೇಟೆಯ ಅರಮೇರಿ ಗ್ರಾಮದಲ್ಲಿ ನಡೆದಿದೆ.



ಗಾಳಿ, ಮಳೆಯ ವಾತಾವರಣ ಇಲ್ಲದಿದ್ದರೂ ಇದ್ದಕ್ಕಿದ್ದ ಹಾಗೆ ಬೆಳಗ್ಗೆ 10 ಗಂಟೆ ಸುಮಾರಿಗೆ ಮರ ಬಿದ್ದಿದ್ದು, ದೇಗುಲದ ಮುಖ್ಯ ಪ್ರಾಂಗಣ ಹಾಗೂ ಗರ್ಭಗುಡಿ ಸೇರಿದಂತೆ ದೇವಾಲಯ ಹಾನಿಗೀಡಾಗಿದೆ. ದೇವಾಲಯದ ಆವರಣದಲ್ಲಿ ಸ್ಥಳೀಯ ಇಬ್ಬರು ಕುಳಿತು ಉಭಯ ಕುಶಲೋಪರಿಯಲ್ಲಿ ತೊಡಗಿದ್ದಾಗಲೇ ಈ ಘಟನೆ ನಡೆದಿದ್ದು, ಅದೃಷ್ಟವಶಾತ್ ಕೂದಲೆಳೆಯ ಅಂತರದಲ್ಲಿ ಅಪಾಯದಿಂದ ಪಾರಾಗಿದ್ದಾರೆ.

ಸ್ಥಳಕ್ಕೆ ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಇತ್ತೀಚೆಗಷ್ಟೇ ದೇವಾಲಯದಲ್ಲಿ ವಾರ್ಷಿಕ ಉತ್ಸವ ನಡೆದಿತ್ತು.

ವಿ.ಪೇಟೆಯಲ್ಲಿ ಸಕಾಲ ಅರಿವು ಜಾಥಾ

ವಿರಾಜಪೇಟೆ,ಏ.22– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಸಕಾಲ ಯೋಜನೆ ಯಶಸ್ವಿಯಾಗಿ 10 ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಜನರಿಗೆ ಅರಿವು ಮೂಡಿಸುವ ಸಲುವಾಗಿ ಕಂದಾಯ ಇಲಾಖೆ, ತಾಲೂಕು ಆಡಳಿತ, ಹಾಗೂ ಸರ್ವೆ ಇಲಾಖೆ ವತಿಯಿಂದ ಪಟ್ಟಣದ ಗಡಿಯಾರ ಕಂಬದಿಂದ ತಾಲೂಕು ಕಚೇರಿವರೆಗೆ ಜಾಥಾ ಹಮ್ಮಿಕೊಳ್ಳಲಾಯಿತು.

ರಾಜ್ಯದಲ್ಲಿ ಒಟ್ಟು 99 ಸಂಸ್ಥೆ ಇಲಾಖೆಗಳಿದ್ದು 1115 ಸೇವೆಗಳಿದೆ. ಅದರಲ್ಲಿ ಫೆಬ್ರವರಿ 28ರ ವರೆಗೆ 26,56,63,232 ಅರ್ಜಿಗಳು ಸ್ವಿಕೃತ ಗೊಂಡಿದೆ. 26,41,38,646 ಅರ್ಜಿಗಳು ವಿಲೇವಾರಿಯಾಗಿದೆ. ಜಾಥಾದ ನೇತೃತ್ವವನ್ನು ತಹಸೀಲ್ದಾರ್ ಡಾ, ಆರ್.ಯೋಗಾನಂದ್ ವಹಿಸಿದ್ದರು. ಈ ಸಂದರ್ಭ ಗ್ರೇಡ್ 2 ತಹಸೀಲ್ದಾರ್ ಪ್ರದೀಪ್ ಕುಮಾರ್, ಭೂ ದಾಖಲೆಗಳ ಸಹಾಯಕ ನಿರ್ದೇಶಕ ಮಹೇಶ್‌ಕುಮಾರ್, ಅಧೀಕ್ಷಕ ಬಿ.ಡಿ ಅರುಣ, ಶಿರಸ್ಥೆದಾರ್ ಪೊನ್ನು, ಕಂದಾಯ ಪರಿವೀಕ್ಷಕರಾದ ಎಂ.ಹರೀಶ್, ಅನೀಲ್ ಹಾಗೂ ಇಲಾಖೆಗಳ ಸಿಬ್ಬಂದಿಗಳು ಭಾಗವಹಿಸಿದ್ದರು.



ಮೇ 15ರೊಳಗೆ ಅಭಿವೃದ್ಧಿ ಕಾಮಗಾರಿಗಳ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿ

ಜಿಲ್ಲಾ ಪಂಚಾಯಿತಿ ಆಡಳಿತಾಧಿಕಾರಿ ಬಿ.ಬಿ.ಕಾವೇರಿ ಸೂಚನೆ

ಚಾಮರಾಜನಗರ, ಏ.22 –ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಇಲಾಖೆಗಳು ಕ್ರಿಯಾಯೋಜನೆ ತಯಾರಿಸಿ ಮೇ 15ರೊಳಗೆ ಅಗತ್ಯ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಜಿಪಂ ಆಡಳಿತಾಧಿಕಾರಿಯೂ ಆದ ಬಿ.ಬಿ. ಕಾವೇರಿ ಅಧಿಕಾರಿಗಳಿಗೆ ಸೂಚಿಸಿದರು.



ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ನಡೆದ ಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸುವ ಅಭಿವೃದ್ಧಿ ಕಾಮಗಾರಿ, ಕಾರ್ಯಕ್ರಮಗಳಿಗೆ ಕ್ರಿಯಾಯೋಜನೆ ರೂಪಿಸಬೇಕು. ವಿವಿಧ ಇಲಾಖೆಗಳು ತಯಾರಿಸುವ ಕ್ರಿಯಾಯೋಜನೆಗೆ ಅನುಮೋದನೆ ಪಡೆಯಬೇಕು. ಕ್ರಿಯಾ ಯೋಜನೆಯಲ್ಲಿ ಸ್ಪಷ್ಟತೆ ಇರಬೇಕು. ಅತೀ ಅವಶ್ಯವಿರುವ ಕಾಮಗಾರಿಗಳಿಗೆ ಮೊದಲ ಆದ್ಯತೆ ನೀಡಬೇಕು. ಅದರಲ್ಲೂ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗಳ ಕಾರ್ಯಕ್ರಮಗಳಿಗೆ ಪ್ರಥಮಾದ್ಯತೆ ನೀಡಿ ಅನುದಾನಕ್ಕೆ ಅಂದಾಜುಪಟ್ಟಿ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ಅನುದಾನ ಸರ್ಕಾರಕ್ಕೆ ವಾಪಸ್ಸಾಗದಂತೆ ಎಲ್ಲಾ ಅಧಿಕಾರಿಗಳು ಗಮನ ಹರಿಸಬೇಕು ಎಂದು ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ 1423 ಅಂಗನವಾಡಿ ಕೇಂದ್ರಗಳಿದ್ದು, ಕೆಲ ಅಂಗನವಾಡಿಗಳು ಬಾಡಿಗೆ ಕಟ್ಟಡ ದಲ್ಲಿವೆ. ಸಾಕಷ್ಟು ಅಂಗನವಾಡಿಗಳು ಶಿಥಿಲಾವಸ್ಥೆಯಲ್ಲಿವೆ. ಹೊಸ ಅಂಗನವಾಡಿ ಕಟ್ಟಡಕ್ಕೆ 36 ಶಾಲೆಗಳಲ್ಲಿ ಈಗಾಗಲೇ ಜಾಗ ಗುರುತಿಸಲಾಗಿದೆ. ಅಲ್ಲಿ ಮೂಲಸೌಲಭ್ಯಗಳು ಸಮರ್ಪಕವಾಗಿ ನಿರ್ವಹಣೆಯಾಗಬೇಕು. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅಂಗನವಾಡಿಗಳಿಗೆ ಖುದ್ದು ಭೇಟಿ ಅಲ್ಲಿನ ನಿರ್ವಹಣೆ ಪರಿಶೀಲಿಸಬೇಕು ಎಂದು ತಾಕೀತು ಮಾಡಿದರು.

ಜಿಲ್ಲೆಯಲ್ಲಿ ಈ ಬಾರಿ 11,548 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗಿದ್ದು, ಪರೀಕ್ಷಾ ಮೌಲ್ಯಮಾಪನಾ ಕಾರ್ಯ ಆರಂಭವಾಗಿದೆ. ಮೇ ಮೊದಲ ವಾರದಲ್ಲಿ ಫಲಿತಾಂಶ ನಿರೀಕ್ಷಿಸಬಹುದಾಗಿದೆ ಎಂದರಲ್ಲದೆ, ಅಕ್ಷರ ದಾಸೋಹ ಯೋಜನೆ ಯಡಿ ಈ ಸಾಲಿನಲ್ಲಿ ಪ್ರಾದೇಶಿಕ ಆಹಾರ ರಾಗಿಗೆ ಆದ್ಯತೆ ನೀಡುವಂತೆ ಮಾರ್ಗಸೂಚಿ ಬಿಡುಗಡೆಯಾಗಿದೆ ಅದನ್ವಯ ಮಕ್ಕಳಿಗೆ ರಾಗಿ ಆಹಾರವನ್ನು ನಿಗದಿತ ಮೆನು ಜೊತೆ ನೀಡುವಲ್ಲಿ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಮಲೆಮಹದೇಶ್ವರ ಬೆಟ್ಟದಲ್ಲಿ 30 ಹಾಗೂ ಹನೂರಿನಲ್ಲಿ 100 ಹಾಸಿಗೆಗಳ ಆಸ್ಪತ್ರೆ, ಡಯಲಿಸಿಸ್ ಯೂನಿಟ್ ಹಾಗೂ ಕೌದಳ್ಳಿಯಲ್ಲಿ ಟ್ರಾಮಾಕೇರ್ ಸೆಂಟರ್ ನಿರ್ಮಾಣಕ್ಕಾಗಿ ಅಗತ್ಯ ಕ್ರಿಯಾಯೋಜನೆ ತಯಾರಿಸಿ ಅನುಮೋದನೆ ಪಡೆಯಬೇಕು. ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯಡಿ ಆರೋಗ್ಯ ಕಾರ್ಡುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ವಿತರಿಸಬೇಕು. ಪಿಹೆಚ್‌ಸಿ ಹಾಗೂ ಸಿಹೆಚ್‌ಸಿ ಸೇರಿದಂತೆ ಆರೋಗ್ಯ ಉಪ ಕೇಂದ್ರಗಳಿಗೆ ವೈದ್ಯರು ಪ್ರತಿದಿನ ಹಾಜರಾಗುವಂತೆ ನಿರ್ದೇಶನ ನೀಡುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು. ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

ಗುಂಡ್ಲುಪೇಟೆಯಲ್ಲಿ ಆರೋಗ್ಯ ಮೇಳ

ಗುಂಡ್ಲುಪೇಟೆ,ಏ.22(ಸೋಮ್.ಜಿ)– ಸಾರ್ವಜನಿಕರು ಆರೋಗ್ಯದ ಕಡೆಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಪುರಸಭೆ ಅಧ್ಯಕ್ಷ ಪಿ.ಗಿರೀಶ್ ಹೇಳಿದರು.



ಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಆಯೋಜಿಸಿದ್ದ ಆರೋಗ್ಯ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರವು ತಾಲೂಕು ಮಟ್ಟಗಳಲ್ಲಿ ಆರೋಗ್ಯ ಮೇಳಗಳನ್ನು ಆಯೋಜಿಸುವ ಮೂಲಕ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಆರೋಗ್ಯ ಸೇವೆ ದೊರಕುವಂತೆ ಮಾಡಲಾಗುತ್ತಿದೆ. ಕೊರೊನಾ ಸಂದರ್ಭದಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಸೇವೆ ಸ್ಮರಣೀಯ ಎದರಲ್ಲದೆ, ಆರೋಗ್ಯಪೂರ್ಣ ಸಮಾಜದ ನಿರ್ಮಾಣಕ್ಕಾಗಿ ಗ್ರಾಮಗಳ ಮಟ್ಟದಲ್ಲಿ ಮನೆ–ಮನೆಗೆ ತೆರಳಿ ಅರಿವು ಮೂಡಿಸಬೇಕು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಒತ್ತಡದಿಂದ ಜನತೆ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದರೊಂದಿಗೆ ಉತ್ತಮ ಆರೋಗ್ಯ ಹೊಂದಬೇಕು. ತಾಲೂಕು ಮಟ್ಟದಲ್ಲಿ ಆರೋಗ್ಯ ಮೇಳ ಆಯೋಜಿಸುವ ರಾಜ್ಯ ಸರ್ಕಾರದ ವಿನೂತನ ಪ್ರಯತ್ನದಿಂದ ಅತ್ಯಂತ ಕಡು ಬಡವರು ಹಾಗೂ ಮಧ್ಯಮವರ್ಗದವರಿಗೆ ಅನುಕೂಲವಾಗಲಿದೆ. ಆದ್ದರಿಂದ ಸಾರ್ವಜನಿಕರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ತಹಸೀಲ್ದಾರ್ ಸಿ.ಜೆ.ರವಿಶಂಕರ್, ತಾಲೂಕು ಆರೋಗ್ಯಾಧಿಕಾರಿ ಡಾ.ಎಂ.ಎಸ್.ರವಿಕುಮಾರ್, ಡಾ.ಮಂಜುನಾಥ್, ಡಾ.ಹರ್ಷದ್ ಅಲಿ, ತಾಪಂ ಇಓ ಶ್ರೀಕಂಠರಾಜೇ ಅರಸ್, ಪುರಸಭೆ ಸದಸ್ಯರಾದ ನಾಗೇಶ್, ನಿರ್ಮಲಾ, ರಾಜಗೋಪಾಲ್, ಕುಮಾರ್, ಮಹದೇವಮ್ಮ, ಮಂಗಳಮ್ಮ ಸೇರಿದಂತೆ ಹಲವರಿದ್ದರು.

ಅಂಬೇಡ್ಕರ್ ಭಾವಚಿತ್ರವಿದ್ದ ಫ್ಲೆಕ್ಸ್ ಹರಿದು ವಿಕೃತಿ ಮೆರದ ಕಿಡಿಗೇಡಿಗಳು

ಬೇಗೂರು, ಏ.22(ಕಿರಣ್)–ಗುಂಡ್ಲುಪೇಟೆ ತಾಲೂಕಿನ ಬೆಳಚಲವಾಡಿ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರವಿದ್ದ ಫ್ಲೆಕ್ಸ್‌ಅನ್ನು ದುಷ್ಕರ್ಮಿಗಳು ಹರಿದು ಹಾಕಿದ್ದರಿಂದ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು.

ಗುರುವಾರ ರಾತ್ರಿ ಕೆಲ ಕಿಡಿಗೇಡಿಗಳು ಗ್ರಾಮದ ಯಡಿಯಾಲ–ಬೇಗೂರು ರಸ್ತೆಯಿಂದ ಬೆಳಚಲವಾಡಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಪ್ರವೇಶ ದ್ವಾರದ ಅರಳಿಮರದ ಬಳಿ ಅಳವಡಿಸಲಾಗಿದ್ದ ಫ್ಲೆಕ್ಸ್ ಅನ್ನು ಹರಿದು ವಿರೂಪಗೊಳಿಸಿದ್ದರು. ಬೆಳಗ್ಗೆ ವಿಷಯ ತಿಳಿದು ಗ್ರಾಮದಲ್ಲಿ ಉದ್ವಿಗ್ನತೆ ಉಂಟಾಯಿತು. ಕಿಡಿಗೇಡಿಗಳನ್ನು ಪತ್ತೆ ಹಚ್ಚುವಂತೆ ಒತ್ತಾಯಿಸಿ ಯುವಕರು ಪ್ರತಿಭಟಿಸಿದರು. ಸ್ಥಳಕ್ಕೆ ಆಗಮಿಸಿದ ಬೇಗೂರು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ್, ಸಬ್‌ಇನ್ಸ್‌ಪೆಕ್ಟರ್ ರಿಹಾನಾ ಬೇಗಂ, ಗ್ರಾಮಸ್ಥ ಚಿಕ್ಕಮಹದೇವ್ರ ನೀಡಿದ ದೂರು ಸ್ವೀಕರಿಸಿ ಕಿಡಿಗೇಡಿಗಳನ್ನು ಬಂಧಿಸುವ ಭರವಸೆ ನೀಡಿ, ಪರಿಸ್ಥಿತಿ ತಿಳಿಗೊಳಿಸಿದರು.



ಅಪಾಯಕಾರಿಯಾಗಿ ಬೈಕ್ ಚಾಲನೆ: ಸವಾರ ವಶಕ್ಕೆ

ಚಾಮರಾಜನಗರ, ಏ.22(ಎಸ್‌ಎಸ್)– ನಗರದ ಹೊರ ವಲಯದಲ್ಲಿ ಬೈಕ್‌ನ ಪೆಟ್ರೋಲ್ ಟ್ಯಾಂಕ್ ಮೇಲೆ ಯುವತಿ ಕೂರಿಸಿಕೊಂಡು ಅಜಾಗರೂಕತೆಯಿಂದ ಹೆಲ್ಮೆಟ್ ಧರಿಸದೆ ಬೈಕ್ ಸವಾರಿ ಮಾಡುತ್ತಿದ್ದ ಯುವಕನನ್ನು ಪೊಲೀಸರು ಬೈಕ್ ಸಮೇತ ವಶಕ್ಕೆ ಪಡೆದು ಕಾನೂನು ಕ್ರಮ ಜರುಗಿಸಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಶಿವಪುರ ಗ್ರಾಮದ ನಿವಾಸಿ ಎಸ್.ಸಿ.ಸ್ವಾಮಿ ಅಜಾಗರೂಕತೆಯಿಂದ ಬೈಕ್ ಚಾಲನೆ ಮಾಡುತ್ತಿದ್ದ ಯುವಕ ಎನ್ನಲಾಗಿದೆ. ಈತ ಏ.21ರಂದು ಸಂಜೆ ನಗರದ ಗುಂಡ್ಲುಪೇಟೆ ರಸ್ತೆಯ ಯಡಪುರ ಗ್ರಾಮದ ಬಳಿ, ತನ್ನ ಪಲ್ಸರ್ ಬೈಕ್‌ನ ಟ್ಯಾಂಕ್ ಮೇಲೆ ಯುವತಿಯೋರ್ವಳನ್ನು ಅಸಭ್ಯವಾಗಿ ಕೂರಿಸಿಕೊಂಡು ಚಾಲನೆ ಮಾಡುತ್ತಿದ್ದ. ಹೆಲ್ಮೆಟ್ ಸಹ ಧರಿಸದೇ ಬೈಕ್ ಯದ್ವಾತದ್ವಾ ಓಡಿಸುತ್ತಿದ್ದ. ಈ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಈ ಬಗ್ಗೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡ ಚಾ.ನಗರ ಸಂಚಾರ ಠಾಣೆ ಪೊಲೀಸರು, ಬೈಕ್ ಸವಾರನ ಪತ್ತೆಗೆ ಕ್ರಮ ಕೈಗೊಂಡಿದ್ದರು. ಬೈಕ್ ನಂಬರ್ ಪರಿಶೀಲಿಸಿ ಎಸ್.ಸಿ.ಸ್ವಾಮಿಯನ್ನು ಪತ್ತೆ ಹಚ್ಚಿ ಶುಕ್ರವಾರ ವಶಕ್ಕೆ ಪಡೆದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಂಬೇಡ್ಕರ್ ಕನಸು ಈಡೇರಿಸುವ ಜವಾಬ್ದಾರಿ ಸರ್ಕಾರಿ ನೌಕರರ ಮೇಲಿದೆ

ಚಾಮರಾಜನಗರ.ಏ.22(ಎಸ್‌ಎಸ್)– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಕಂಡ ಕನಸನ್ನು ನನಸು ಮಾಡುವ ಜವಾಬ್ದಾರಿ ಸರ್ಕಾರಿ ನೌಕರರ ಮೇಲಿದೆ ಎಂದು ಬೆಂಗಳೂರು ಕ್ರೈಸ್ಟ್ ಕಾಲೇಜು ಪ್ರಾಧ್ಯಾಪಕ ಪ್ರೊ.ಹ.ರಾ. ಮಹೇಶ್ ಹೇಳಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ಜಿಲ್ಲಾ ಶಾಖೆಯಿಂದ ಭಾರತರತ್ನ, ವಿಶ್ವಜ್ಞಾನಿ, ಸಂವಿಧಾನ ಶಿಲ್ಪಿ, ಪ್ರಜಾಪ್ರಭುತ್ವದ ಪಿತಾಮಹ ಹಾಗೂ ರಾಷ್ಟ್ರನಾಯಕ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 113ನೇ ಜನ್ಮದಿನಾಚರಣೆ, ಸ್ವಾಭಿಮಾನ್ ದಿವಸ್ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರ ನೀಡಿರುವ ಮೀಸಲಾತಿ ಋಣದಿಂದ ಶಿಕ್ಷಣ ಪಡೆದು ಸರ್ಕಾರಿ ನೌಕರರು ಹಾಗೂ ರಾಜಕಾರಣಿಗಳು ತಮ್ಮ ಕುಟುಂಬಗಳಿಗೆ ಸೀಮಿತವಾಗದೆ ಸ್ವಾರ್ಥ ಬಿಟ್ಟು ಸಮುದಾಯಗಳ ಮಕ್ಕಳ ಶಿಕ್ಷಣ, ಗ್ರಾಮಗಳ ಅಭಿವೃದ್ಧಿಯತ್ತ ಚಿಂತಿಸುವ ಮೂಲಕ ಅಂಬೇಡ್ಕರ್ ಅವರು ಕಂಡ ಕನಸುನ್ನು ನನಸು ಮಾಡುವತ್ತ ಗಮನಹರಿಸಬೇಕು ಎಂದರು.

ಅಂಬೇಡ್ಕರ್ ಅವರು ಸಂವಿಧಾನದಡಿ ನೀಡಿರುವ ಶಿಕ್ಷಣಹಕ್ಕು, ಉದ್ಯೋಗ ಹಕ್ಕು ನಾಶ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಹೊಸ ಶಿಕ್ಷಣ ನೀತಿ ಜಾರಿಗೆ ತಂದಿದೆ. ಇದರ ವಿರುದ್ಧ ಅಂಬೇಡ್ಕರ್ ಅವರ ಮೀಸಲಾತಿಯಡಿ ಚುನಾಯಿತರಾಗಿರುವ ಸಂಸದರು ಪ್ರಶ್ನೆ ಮಾಡುತ್ತಿಲ್ಲ. ಇದರ ವಿರುದ್ಧ ನಾವು ಜಾಗೃತರಾಗಬೇಕು ಇದಕ್ಕೆ ನಾವು ಹೆದರಬೇಕಾಗಿಲ್ಲ ಎಂದರು.



ಚಾಮರಾಜನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ 113ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ತಿ.ನರಸೀಪುರ ಕೂಡ್ಲೂರು ಬೌದ್ಧಮಹಾ ಸಂಸ್ಥಾನ ಭೋದಿರತ್ನ ಬಂತೇಜಿ ಉದ್ಘಾಟಿಸಿದರು.

ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಡಿ.ಶಿವಶಂಕರ್ ಮಾತನಾಡಿ, ಅಂಬೇಡ್ಕರ್ ಅವರನ್ನು ಎಸ್‌ಸಿ ಎಸ್‌ಟಿಗಳಿಗೆ ಸೀಮಿತಗೊಳಿಸಿಲಾಗಿದ್ದು, ಎಲ್ಲರೂ ಅವರ ವಿಚಾರಗಳತ್ತ ಚಿತ್ತಹರಿಸಬೇಕು. ಇಲ್ಲದಿದ್ದರೆ ನಮ್ಮ ಬದುಕು ಹಾಳಾಗುತ್ತದೆ. ಅಂಬೇಡ್ಕರ್ ಅವರು ನೀಡಿರುವ ಮತದಾನದ ಹಕ್ಕು ಅರಿಯಬೇಕು. ಇಲ್ಲದಿದ್ದರೆ ನಮ್ಮ ಸಮುದಾಯ ಮುಂದಿನ ದಿನಗಳಲ್ಲಿ ಕರಾಳ ದಿನ ಎದುರಿಸಬೇಕಾಗುತ್ತದೆ ಎಂದರು. ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕ ಷಣ್ಮುಗಂ ಮಾತನಾಡಿದರು. ಟಿ.ನರಸೀಪುರ ಕೂಡ್ಲೂರು ಬೌದ್ಧ ಮಹಾ ಸಂಸ್ಥಾನ ಭೋದಿರತ್ನ ಬಂತೇಜಿ ಕಾರ್ಯಕ್ರಮ ಉದ್ಘಾಟಿಸಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಸರ್ಕಾರಿ ನೌಕರರ ಸಮನ್ವಯ ಸಮಿತಿ ಜಿಲ್ಲಾಧ್ಯಕ್ಷ ಎ.ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಎಎಸ್ಪಿ ಸುಂದರ್ ರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಜಿಪಂ ಉಪಕಾರ್ಯದರ್ಶಿ ಗೂಡೂರು ಭೀಮಸೇನ, ಪ್ರಾಂಶುಪಾಲ ಬಂಗಾರನಾಯಕ, ಸರ್ಕಲ್ ಇನ್‌ಪೆಕ್ಟರ್ ಪುಟ್ಟಸ್ವಾಮಿ ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ಜಿಲ್ಲಾ ಶಾಖೆ ಸಮಿತಿ ಗೌರವ ಅಧ್ಯಕ್ಷ ಡಾ.ಪಿ.ದೇವರಾಜ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಖಜಾಂಚಿ ರಾಜು ಪದಾಧಿಕಾರಿಗಳು, ಸದಸ್ಯರಿದ್ದರು.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ಈಗಿನಂತೆ ಉಳಿಸಿಕೊಂಡರೆ ಮೈಸೂರು ಮತ್ತೊಂದು ಹಾಳು ಹಂಪೆ

ಮೈಸೂರು, ಏ.22– ನಗರದ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ಈಗಿರುವ ಸ್ಥಿತಿಯಲ್ಲೇ ಸ್ಮಾರಕವಾಗಿ ಉಳಿಸಿಕೊಂಡರೆ ಮೈಸೂರು ಮತ್ತೊಂದು ಹಾಳು ಹಂಪೆಯಂತಾಗುತ್ತದೆಯಲ್ಲವೇ? ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಪ್ರಶ್ನಿಸಿದ್ದಾರೆ.



ಈ ಎರಡೂ ಕಟ್ಟಡಗಳನ್ನು ಪುನಶ್ಚೇತನಗೊಳಿಸಬೇಕೋ? ಅಥವಾ ಸಂಪೂರ್ಣವಾಗಿ ನೆಲಸಮಗೊಳಿಸಿ ಪಾರಂಪರಿಕ ಶೈಲಿಯಲ್ಲೇ ಪುನರ್ ನಿರ್ಮಾಣ ಮಾಡಬೇಕೋ? ಎಂಬ ಜಿಜ್ಞಾಸೆ ಮುಂದುವರೆದಿರುವ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಪಾರಂಪರಿಕ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳ ಭಾಗಶಃ ಪುನಶ್ಚೇತನದೊಂದಿಗೆ ಹೊಸ ನಿರ್ಮಾಣವನ್ನೂ ಮಾಡುವ ಪ್ರಯತ್ನ ದಶಕದ ಹಿಂದೆಯೇ ನಡೆದಿತ್ತು ಆದರೆ ಇಂದಿಗೂ ಕಗ್ಗಂಟಾಗಿ ಉಳಿದಿರುವುದು ವಿಷಾಧನೀಯ ಎಂದಿದ್ದಾರೆ.

ಹಾಗಾಗಿ ಮಾರುಕಟ್ಟೆ ಸುತ್ತಲಿನ ಕಟ್ಟಡ ಹಾಗೂ ಅದರಲ್ಲಿರುವ ಮಳಿಗೆಗಳು ಮಾತ್ರ ಪಾರಂಪರಿಕ. ಮಧ್ಯಭಾಗದಲ್ಲಿರುವ ಶೀಟ್ ಮೇಲ್ಛಾವಣಿಯುಳ್ಳ ಮಳಿಗೆಗಳು ಬೆಂಕಿ ಅವಘಡದ ನಂತರ ನಿರ್ಮಿಸಲಾಗಿದೆ. ಈ ನಡುವೆ 2006–07ರಲ್ಲಿ ಸಯ್ಯಾಜಿರಾವ್ ರಸ್ತೆ ಭಾಗದ ಮಳಿಗೆಯೊಂದು ಕುಸಿದು ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ಬಳಿಕ ಪಾಲಿಕೆಯಿಂದ ವೈಜ್ಞಾನಿಕ ಯೋಜನೆಯೊಂದನ್ನು ರೂಪಿಸಲಾಗಿತ್ತು. ದೇವರಾಜ ಮಾರುಕಟ್ಟೆ ಸುತ್ತಲಿನ ಪಾರಂಪರಿಕ ಕಟ್ಟಡವನ್ನು ಪುನಶ್ಚೇತಗೊಳಿಸಿ, ಅದರ ಮಧ್ಯಭಾಗದ ಸುಮಾರು 3 ಎಕರೆಯಷ್ಟು ಜಾಗದಲ್ಲಿ ಪಾರ್ಕಿಂಗ್ ಇನ್ನಿತರ ನಿರ್ಮಾಣಕ್ಕೆ ಚಿಂತನೆ ಮಾಡಲಾಗಿತ್ತು. ಅಂದು ಪಾಲಿಕೆ ಆಯುಕ್ತರಾಗಿದ್ದ ರಾಯ್ಕರ್ ನೇತೃತ್ವ ದಲ್ಲಿ ಅಧಿಕಾರಿಗಳ ತಂಡ ಪರಿ ಶೀಲನೆ ನಡೆಸಿ, ನೆಲ ಮಾಳಿಗೆ ಯಲ್ಲಿ 1,200ಕ್ಕೂ ಹೆಚ್ಚು ವಾಹನ ಗಳ ಪಾರ್ಕಿಂಗ್‌ಗೆ ವ್ಯವಸ್ಥೆ, ನೆಲ ಹಂತ ಹಾಗೂ ಮೊದಲ ಅಂತಸ್ತಿನ ಕಟ್ಟಡದಲ್ಲಿ 2,200ಕ್ಕೂ ಹೆಚ್ಚು ಮಳಿಗೆ ನಿರ್ಮಿಸಿ, ಅರಮನೆ ಸುತ್ತಮುತ್ತ ಹಾಗೂ ಪ್ರಮುಖ ರಸ್ತೆ ಬದಿಗಳಲ್ಲಿ ವ್ಯಾಪಾರ ಮಾಡುತ್ತಿದ್ದವರಿಗೆ ಅವಕಾಶ ಕಲ್ಪಿಸುವ ಉದ್ದೇಶದೊಂದಿಗೆ 30 ಕೋಟಿ ರೂ. ಅಂದಾಜು ಮೊತ್ತದ ಯೋಜನೆ ರೂಪಿಸಲಾಗಿತ್ತು. ಹಾಗೆಯೇ ಲ್ಯಾನ್ಸ್‌ಡೌನ್ ಕಟ್ಟಡ ಶಿಥಿಲಾವಸ್ಥೆ ತಲುಪುವ ಮುನ್ನ ನೆಲ ಮಹಡಿಯ ಕಲ್ಲುಕಂಬಗಳು ಹಾಗೂ ನಿರ್ಮಾಣವನ್ನು ಹಾಗೆಯೇ ಉಳಿಸಿಕೊಂಡು ಅದರ ಛಾವಣಿಯನ್ನು ಮಾತ್ರ ಬದಲಿಸಿ, ಮೊದಲ ಮಹಡಿಯನ್ನು ಕೆಡವಿ ಪಾರಂಪರಿಕ ಶೈಲಿಯಲ್ಲೇ ಪುನರ್ ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿತ್ತು. ಆದರೆ ಕಾರಣಾಂತರಗಳಿಂದ ಈ ಯೋಜನೆಗಳು ಸಾಕಾರವಾಗಲಿಲ್ಲ.

ಆದರೆ ಈಗಲೂ ಈ ಎರಡೂ ಕಟ್ಟಡಗಳ ಬಗ್ಗೆ ಜಿಜ್ಞಾಸೆ, ಗೊಂದಲ ಮುಂದುವರೆದಿರುವುದು ವಿಷಾಧನೀಯ. ಮಾರುಕಟ್ಟೆ ಮಧ್ಯ ಭಾಗದಲ್ಲಿರುವ ಶೀಟ್ ಛಾವಣಿಯುಳ್ಳ ಮಳಿಗೆಗಳನ್ನು ಹಾಗೆಯೇ ಇನ್ನೂ ಎಷ್ಟು ವರ್ಷಗಳು ಉಳಿಸಿಕೊಳ್ಳಲು ಸಾಧ್ಯ?. ಪಾರಂಪರಿಕ ಕಟ್ಟಡದ ಕುಸಿದಿರುವ ಭಾಗವನ್ನು ಪುನರ್ ನಿರ್ಮಾಣ ಮಾಡಲೇಬೇಕು. ಹಾಗೆಯೇ ಸ್ಮಾರಕವಾಗಿ ಉಳಿಸಿಕೊಳ್ಳುವುದಾದರೆ ಮೈಸೂರು ಮತ್ತೊಂದು ಹಾಳು ಹಂಪೆಯಂತಾಗುವುದಿಲ್ಲವೇ?. ಈ ಗೊಂದಲವನ್ನು ಶೀಘ್ರ ಪರಿಹರಿಸಿ, ಸೂಕ್ತ ನಿರ್ಧಾರ ಕೈಗೊಳ್ಳುವುದು ಅನಿವಾರ್ಯವಾಗಿದೆ ಎಂದು ಅಭಿಪ್ರಾಯಿಸಿದ್ದಾರೆ.



ಮೈಸೂರು ನಗರ ಪಾಲಿಕೆ ವಾರ್ಡ್ ನಂ.6ರ ಗೋಕುಲಂ ಹಾಗೂ ಬೃಂದಾವನ ಬಡಾವಣೆಯಲ್ಲಿ ಹೆಬ್ಬಾಗಿಲು ಆರ್ಚ್ ನಿರ್ಮಾಣ ಕಾಮಗಾರಿಗೆ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಬಡಾವಣೆಯ ಮುಖಂಡರಾದ ಗುರುಸಿದ್ದಪ್ಪ, ವಿರೂಪಾಕ್ಷಮೂರ್ತಿ, ಕುಮಾರಣ್ಣ, ಲಕ್ಕನ್ ಗೌಡ್ರು, ಹೇಮಂತ್, ಅರುಣ್, ಡಾ.ಲೋಕೇಶ್, ಕೃಷ್ಣಸ್ವಾಮಿ, ಜನಾರ್ಧನ್, ವರದರಾಜ್, ಇಂಜಿನಿಯರ್ ಗುರುಸಿದ್ದಯ್ಯ ಇನ್ನಿತರರಿದ್ದರು

ಒಂದನೇ ಪುಟದಿಂದ

ಸಿಎಂ ಬೊಮ್ಮಾಯಿ ಅಲರ್ಟ್!

ಮುನ್ನವೇ ಒಕ್ಕಲಿಗ ಸಮುದಾಯಕ್ಕೆ ಸೇರಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಇಲ್ಲವೆ ರಾಜ್ಯದ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್‌ನಾರಾಯಣ್ ಅವರನ್ನು ಈ ಸ್ಥಾನಕ್ಕೆ ತರಲು ದೆಹಲಿ ಸಭೆಯಲ್ಲಿ ಚರ್ಚೆ ಮಾಡಲಾಗಿದೆ ಎನ್ನಲಾಗಿದೆ.

ಬಿಜೆಪಿಯ ಆರ್‌ಎಸ್‌ಎಸ್ ಮುಖಂಡ ದತ್ತಾತ್ರೇಯ ಹೊಸಬಾಳೆ ಎರಡು ದಿನಗಳಿಂದ ರಾಜ್ಯ ಪ್ರವಾಸದಲ್ಲಿದ್ದು, ಇಂದು ನಗರದ ಕೇಶವಶಿಲ್ಪದಲ್ಲೇ ಉಳಿದುಕೊಂಡು ರಾಜ್ಯ ಸಂಘಟನೆಯ ನಾಯಕರೊಟ್ಟಿಗೆ ಸಮಾಲೋಚನೆ ನಡೆಸಿದ್ದಾರೆ. ಅವರು ನಾಳೆಯು ಬೆಂಗಳೂರಿನಲ್ಲೇ ಉಳಿದರೆ, ಮುಖ್ಯಮಂತ್ರಿಯವರು ಪ್ರವಾಸದಿಂದ ಹಿಂತಿರುಗುತ್ತಿದ್ದಂತೆ ಹೊಸಬಾಳೆ ಅವರನ್ನು ಭೇಟಿ ಮಾಡಿ, ಮಾತನಾಡಲಿದ್ದಾರೆ ಎಂದು ಹೇಳಲಾಗಿದೆ.

ಉದ್ಯೋಗ ನೀಡು' ಕಾರ್ಯಾಗಾರ

ಇದೆ ಎಂಬುದನ್ನು ವಿಷಯ ತಜ್ಞರು ವಿವರಿಸಲಿದ್ದಾರೆ. ಕೃಷಿ ತಂತ್ರಜ್ಞಾನ/ಆಹಾರ ಸಂಸ್ಕರಣೆ, ಸ್ಟಾರ್ಟ್‌ಅಪ್‌ಗಳಲ್ಲಿ ಹೂಡಿಕೆ ಅವಕಾಶಗಳ ಮೇಲೆ ತಜ್ಞರು ಬೆಳಕು ಚೆಲ್ಲಲಿದ್ದಾರೆ. ಪ್ರೇರಣಾ ಭಾಷಣದ ಜತೆಗೆ ಯಶಸ್ವಿ ಉದ್ಯಮಗಳ ಯಶೋಗಾಥೆ ಕೇಳುವ ಅವಕಾಶ ದೊರೆಯಲಿದೆ. 'ಉದ್ಯಮಿಯಾಗು ಉದ್ಯೋಗ ನೀಡು ಕಾರ್ಯಕ್ರಮ'ದಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ತರಬೇತಿ, ಸಲಹೆ, ಮಾರ್ಗದರ್ಶನ ನೀಡಲಾಗುತ್ತದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಹೊಸ ಉದ್ಯಮ ಆರಂಭಿಸುವವರು ಇದರ ಸದುಪಯೋಗಪಡಿಸಿಕೊಳ್ಳಬೇಕು.

ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರೂ ಉದ್ಯಮಿಗಳಾದರೆ ಸಂತೋಷ. ಎಂಬ ನಿರೀಕ್ಷೆ ಇದೆ. ಒಂದು ದಿನದ ಕಾರ್ಯಾಗಾರಕ್ಕೆ ಈ ಕಾರ್ಯಕ್ರಮ ಸೀಮಿತವಾಗದು. ಕಾರ್ಯಕ್ರಮಕ್ಕೆ ನೋಂದಣಿ ಮಾಡಿಕೊಂಡ ಆಸಕ್ತರಿಗೆ ಮುಂದಿನ ದಿನಗಳಲ್ಲಿ ಹೆಚ್ಚುವರಿ ಮೂರು ತಿಂಗಳು ತರಬೇತಿ ನೀಡಲಾಗುವುದು.

ಉದ್ಯಮಿಯಾಗುವುದರ ಜತೆಗೆ ಇನ್ನೊಬ್ಬರಿಗೆ ಉದ್ಯೋಗ ನೀಡಬೇಕು ಎಂಬುದೇ ಕಾರ್ಯಕ್ರಮದ ಆಶಯ. ವಿದ್ಯಾರ್ಥಿಗಳಿಗೆ ಉದ್ಯಮ ಕುರಿತ ಮಾಹಿತಿ/ತರಬೇತಿಗೆ ಪ್ರತ್ಯೇಕ ಪಠ್ಯಕ್ರಮ ರೂಪಿಸಲಾಗುವುದು. ಟೆಕ್ಸಾಕ್ ಎಂಬ ತಾಂತ್ರಿಕ ಸಂಸ್ಥೆ ಮೂಲಕ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು. ಉದ್ಯಮಿಗಳ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕೈಗಾರಿಕಾ ಇಲಾಖೆಯು ಮೈಸೂರು ವಿಭಾಗದಲ್ಲಿ 2022ರ ಏಪ್ರಿಲ್28ರಂದು ಮಧ್ಯಾಹ್ನ 3.30ಕ್ಕೆ 'ಕೈಗಾರಿಕಾ ಅದಾಲತ್' ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ಮೂಲಕ ಸರ್ಕಾರವೇ ಉದ್ಯಮಿಗಳ ಮನೆ ಬಾಗಿಲಿಗೆ ಹೋಗಿ ಉದ್ಯಮದಾರರ ಸಮಸ್ಯೆ ಆಲಿಸಿ, ಸಮಸ್ಯೆ ಇತ್ಯರ್ಥ ಪಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಿದೆ.

ದ್ವಿತೀಯ ಪಿಯುಸಿ ಪರೀಕ್ಷೆ ಪ್ರಾರಂಭ

ಪರೀಕ್ಷಾ ಅಕ್ರಮಗಳನ್ನು ತಡೆಯಲು ಎಲ್ಲಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಜೆರಾಕ್ಸ್, ಸ್ಟೇಷನರಿ ಅಂಗಡಿಗಳನ್ನು ಬಂದ್ ಮಾಡಿಸಲಾಗಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಆಯಾ ವ್ಯಾಪ್ತಿಯ ಠಾಣೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭದ್ರತೆ ಒದಗಿಸಲಾಗಿದ್ದು, ವಿದ್ಯಾರ್ಥಿಗಳು ಪರೀಕ್ಷಾ ಕರ್ತವ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ನ್ನು ಹೊರತುಪಡಿಸಿ ಬೇರೆಯವರು ಸುಳಿಯದಂತೆ ಎಚ್ಚರ ವಹಿಸಲಾಗಿದೆ. ಪದವಿಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಡಿ.ಕೆ.ಶ್ರೀನಿವಾಸ ಮೂರ್ತಿ ಅವರು ಇಂದು ಕೆಲ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಯಾವುದೇ ಗೊಂದಲವಿಲ್ಲದೇ ಮೊದಲ ದಿನ ಪರೀಕ್ಷೆ ಸುಗಮವಾಗಿ ಮುಕ್ತಾಯವಾಯಿತು.

ಕಟ್ಟಡ ನೆಲಸಮ ನಿರ್ಧಾರ ಅವೈಜ್ಞಾನಿಕ

ಶಿಥಿಲಾವಸ್ಥೆ ತಲುಪಿತ್ತು. ಅದನ್ನು ನಾವು ಪುನಶ್ಚೇತನ ಮಾಡಿದ್ದೇವೆ. ಪ್ರಯತ್ನ ಮಾಡಿದರೆ ಎಲ್ಲವೂ ಸಾಧ್ಯವಾಗುತ್ತದೆ. ಮಾರುಕಟ್ಟೆ ಉಳಿಸಿ ಕೊಳ್ಳುವುದು ಕಷ್ಟವೇನಲ್ಲ. ಸರ್ಕಾರ ಸಹಕಾರ ನೀಡುವ ಭರವಸೆ ನೀಡಿದರೆ ನಾವೇ ಪುನಶ್ಚೇತನಗೊಳಿಸುತ್ತೇವೆ ಎಂದರು.

ಪಾರಂಪರಿಕ ಕಟ್ಟಡಗಳ ಮೇಲೆ ಮೈಸೂ ರಿಗರಿಗೆ ಭಾವನಾತ್ಮಕ ಸಂಬಂಧ ಇದೆ. ಮೈಸೂರಿಗೆ ಪಾರಂಪರಿಕ ಕಟ್ಟಡ ಗಳು ಮುಕುಟವಿದ್ದಂತೆ. ಈ ಕಟ್ಟಡಗಳ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿ ನಿರ್ಧಾರ ಕೈಗೊಳ್ಳಬೇಕಾಗಿತ್ತು. ಜನರ ಭಾವನೆಗೆ ಧಕ್ಕೆ ತರುವ ಕೆಲಸ ಆಗಬಾರದು. ಜನರ ಅಭಿಪ್ರಾಯ ಗೌರವಿಸಿದರೆ ಪ್ರತಿಭಟನೆಗಳು ನಡೆಯುವುದಿಲ್ಲ ಎಂದು ತಿಳಿಸಿದರು.

ಪರೀಕ್ಷೆಗಳಿಗೆ 2023ರ ಪಠ್ಯಕ್ರಮ ಬಿಡುಗಡೆ

ಲಭ್ಯವಿರುವ ಪಠ್ಯಕ್ರಮವನ್ನು ಡೌನ್‌ಲೋಡ್ ಕೂಡ ಮಾಡಬಹುದು. ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್(CBSE) ಬೋರ್ಡ್ ಪರೀಕ್ಷೆ 2022 ಪಠ್ಯಕ್ರಮವನ್ನು 10, 12ನೇ ತರಗತಿ ವಿದ್ಯಾರ್ಥಿಗಳಿಗೆ ಬಿಡುಗಡೆ ಮಾಡಲಾಗಿದೆ. ಪರಿಷ್ಕೃತ ಪಠ್ಯಕ್ರಮವು ಪ್ರಮುಖ ವಿಷಯಗಳಿಗೆ ಈ ವರ್ಷ ಮತ್ತಷ್ಟು ಕಡಿತವನ್ನು ಕಂಡಿದ್ದು ಈ ವರ್ಷವೂ ಸೀಮಿತವಾದ ಅಧ್ಯಾಯಗಳ ಪ್ರಮಾಣವನ್ನು ಇರಿಸಲು ಮಂಡಳಿಯು ನಿರ್ಧರಿಸಿದೆ.

ಪವರ್‌ಸ್ಟಾರ್ ಡಾ. ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ

ಮೇ 1ಕ್ಕೆ ಮೈಸೂರಲ್ಲಿ 'ಗೋ ಗ್ರೀನ್, ಗೋ ಕ್ಲೀನ್' ಓಟ

● 500 ಮಂದಿ ಕ್ರೀಡಾಪಟುಗಳು, ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆ ● ಮೊದಲು ನೋಂದಣಿಯಾದ 300 ಮಂದಿಗೆ ಟೀ ಶರ್ಟ್ ● ಹಿರಿಯ ಕ್ರಿಕೆಟಿಗ ಜಾವಗಲ್ ಶ್ರೀನಾಥ್‌ಗೆ ಆಹ್ವಾನ

ಮೈಸೂರು,ಏ.22(ಎಂಟಿವೈ)– ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಕಾರ್ಮಿಕ ದಿನಾಚರಣೆ ದಿನವಾದ ಮೇ 1ರಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಾನವ್ ಟ್ರಸ್ಟ್, ಡೆಕಥ್ಲಾನ್ ಸಹಯೋಗದಲ್ಲಿ 'ಗೋ ಗ್ರೀನ್, ಗೋ ಕ್ಲೀನ್' ರಸ್ತೆ ಓಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಸುರೇಶ್ ತಿಳಿಸಿದ್ದಾರೆ.



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಕಾರಣದಿಂದ ಕಳೆದ ಎರಡು ವರ್ಷಗಳಿಂದ ಕ್ರೀಡಾ ಚಟುವಟಿಕೆ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ಇದೀಗ ಕೊರೊನಾ ಸೋಂಕು ಕ್ಷೀಣಿಸಿರುವುದರಿಂದ ಕ್ರೀಡಾ ಚಟುವಟಿಕೆ ಗರಿಗೆದರುತ್ತಿದೆ. ಕ್ರೀಡಾ ಕ್ಷೇತ್ರಕ್ಕೆ ಹೊಸ ಕ್ರೀಡಾಪಟುಗಳನ್ನು ಆಕರ್ಷಿಸುವ ನಿಟ್ಟಿನಲ್ಲಿ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಕಾರ್ಯಕ್ರಮ ರೂಪಿಸಿದೆ. ಅದರ ಮೊದಲ ಹೆಜ್ಜೆಯಾಗಿ ರಸ್ತೆ ಓಟ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದರು.

ಮೇ.1ರಂದು ಬೆಳಗ್ಗೆ 6.30ಕ್ಕೆ ಚಾಮುಂಡಿ ವಿಹಾರ ಕ್ರೀಡಾಂಗಣದ ಮುಂಭಾಗದಿಂದ ಆರಂಭವಾಗಲಿರುವ ಓಟವು ಎಸ್‌ಪಿ ಕಚೇರಿ ವೃತ್ತ, ಹಾರ್ಡಿಂಜ್ ವೃತ್ತ, ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಖಾಂತರ ಕೆ.ಆರ್.ವೃತ್ತ, ಪಾಲಿಕೆ ವೃತ್ತ, ಕೋಟೆ ಮಾರಮ್ಮನ ದೇವಸ್ಥಾನ, ಅರಮನೆ ಬಲರಾಮ ದ್ವಾರ ರಸ್ತೆ, ಹಾರ್ಡಿಂಜ್ ವೃತ್ತ, ಪೊಲೀಸ್ ಆಯುಕ್ತರ ಕಚೇರಿ, ನಜರ್‌ಬಾದ್ ಪೊಲೀಸ್ ಠಾಣೆ ಮೂಲಕ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮುಕ್ತಾಯಗೊಳ್ಳಲಿದೆ.

5 ಕಿ.ಮೀ. ದೂರದ ಈ ಓಟದ ಸ್ಪರ್ಧೆಯಲ್ಲಿ 16 ವರ್ಷದೊಳಗಿನ ಬಾಲಕ, ಬಾಲಕಿಯರು, 45 ವರ್ಷದೊಳಗಿನ ಪುರುಷ, ಮಹಿಳೆಯರು, 45 ವರ್ಷ ಮೇಲ್ಪಟ್ಟ ಪುರುಷರು ಹಾಗೂ ಮಹಿಳೆಯರು ಪಾಲ್ಗೊಳ್ಳಬಹುದಾಗಿದೆ. ಮೊದಲು ನೋಂದಣಿಯಾದ 300 ಮಂದಿಗೆ ಟೀ–ಶರ್ಟ್ ನೀಡಲಾಗುತ್ತದೆ. ಸ್ಪರ್ಧೆಯಲ್ಲಿ 500 ಕ್ರೀಡಾಪಟುಗಳು, ಸಾರ್ವಜನಿಕರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದರು.

ಹಿರಿಯ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರನ್ನು ಆಹ್ವಾನಿಸಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸೇರಿದಂತೆ ವಿವಿಧ ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಓಟದ ಮಾರ್ಗದಲ್ಲಿ ಮೂರು ಕಡೆ ವಾಟರ್ ಪಾಯಿಂಟ್ ಇರಲಿದೆ. ಅಲ್ಲದೆ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಆಂಬುಲೆನ್ಸ್ ಹಾಗೂ ಆರೋಗ್ಯ ಸೇವೆ ಕಲ್ಪಿಸಲಾಗುತ್ತದೆ. ಓಟ ಮುಗಿದ ನಂತರ ಚಾಮುಂಡಿ ಕ್ರೀಡಾಂಗಣದಲ್ಲಿ ಉಪಾಹಾರದ ವ್ಯವಸ್ಥೆ ಮಾಡಲಾಗಿದೆ. ಜಾಥಾದಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲೇಬೇಕಾಗಿದೆ. ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಕ್ರೀಡಾ ಇಲಾಖಾ ಕಚೇರಿ, ಚಾಮುಂಡಿಬೆಟ್ಟ ಹಾಗೂ ಕುಕ್ಕರಹಳ್ಳಿ ಕೆರೆ ಬಳಿ ಹೆಸರು ನೋಂದಾಯಿಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ 0821–2564179, ಎಂ.ವಿಶ್ವ (ದೂ. 94810 75364), ಜೆ.ಎಸ್.ಮಂಜುನಾಥ್ (8495905616) ಸಂಪರ್ಕಿಸುವಂತೆ ಕೋರಿದರು.

ರಸ್ತೆ ಓಟ ಸಮಾಪ್ತಿಗೊಂಡ ಬಳಿಕ ಮಕ್ಕಳಿಗಾಗಿ 'ಟ್ರಾಕ್ ಅಂಡ್ ಫೀಲ್ಡ್' ಚಟುವಟಿಕೆ ನಡೆಸಲಾಗುತ್ತದೆ. 10 ವರ್ಷದೊಳಗಿನ ಬಾಲಕ, ಬಾಲಕಿಯರಿಗೆ 60 ಮೀಟರ್ ಓಟ, ಹರ್ಡಲ್ಸ್, 12 ವರ್ಷದೊಳಗಿನ ಮಕ್ಕಳಿಗೆ 80 ಮೀಟರ್ ಓಟ ಹಾಗೂ ಲಾಂಗ್ ಜಂಪ್, 14 ವರ್ಷ ಮೇಲ್ಪಟ್ಟ ಮಕ್ಕಳಿಗೆ 100 ಮೀಟರ್ ಓಟ, ಲಾಂಗ್‌ಜಂಪ್ ಹಾಗೂ ಶಾಟ್‌ಪುಟ್ ನಡೆಸಲಾಗುವುದು ಎಂದು ತಿಳಿಸಿದರು.

ಮಹನೀಯರ ಜಯಂತಿ ದಿನ ಕ್ರೀಡಾ ಚಟುವಟಿಕೆ: ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ವತಿಯಿಂದ ಇನ್ನು ಮುಂದೆ ಮಹನೀಯರ ಜಯಂತಿ ದಿನ ಕ್ರೀಡಾ ಚಟುವಟಿಕೆ ನಡೆಸಲು ಉದ್ದೇಶಿಸಲಾಗಿದೆ. ಡಾ.ಅಂಬೇಡ್ಕರ್ ಜಯಂತಿ, ಬಸವೇಶ್ವರರ ಜಯಂತಿ, ವಿವೇಕಾನಂದ ಜಯಂತಿ ಹಾಗೂ ರಾಷ್ಟ್ರೀಯ ಹಬ್ಬದ ದಿನದಂದು ಮ್ಯಾರಥಾನ್ ಅಥವಾ ಓಟದ ಸ್ಪರ್ಧೆ ಸೇರಿದಂತೆ ಇನ್ನಿತರ ಕ್ರೀಡಾ ಚಟುವಟಿಕೆ ನಡೆಸಲು ನಿರ್ಧರಿಸಲಾಗಿದ್ದು, ಅದಕ್ಕಾಗಿ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮಾನವ್ ಟ್ರಸ್ಟ್ ಉಪಾಧ್ಯಕ್ಷ ವಿವೇಕ್, ಕಾರ್ಯದರ್ಶಿ ಉಜ್ವಲ್, ಸಹಕಾರ್ಯದರ್ಶಿ ಸಚಿನ್ ಇದ್ದರು.

ಚಾಮುಂಡಿಬೆಟ್ಟದಲ್ಲಿ ಜಯಚಾಮರಾಜೇಂದ್ರ ಪುತ್ಥಳಿ ಅನಾವರಣ

ಬೆಟ್ಟದ ನಿವಾಸಿಗಳಿಂದ ಮಹಾರಾಜರ ಕೊಡುಗೆ ಸ್ಮರಿಸುವ ಕೆಲಸ: ಪ್ರಮೋದಾದೇವಿ

ಮೈಸೂರು, ಏ.22(ಎಂಟಿವೈ)–ಮೈಸೂರಿನ ಇತಿಹಾಸ ಪ್ರಸಿದ್ಧ ಚಾಮುಂಡಿಬೆಟ್ಟದಲ್ಲಿ ನೂತನವಾಗಿ ಪ್ರತಿಷ್ಠಾಪಿಸಲಾಗಿರುವ ಜಯಚಾಮರಾಜೇಂದ್ರ ಒಡೆಯರ್ ಅವರ ಪುತ್ಥಳಿಯನ್ನು ಶುಕ್ರವಾರ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು.



ಚಾಮುಂಡಿಬೆಟ್ಟದ ಗ್ರಾಮ ಪಂಚಾಯಿತಿ ಮತ್ತು ಗ್ರಾಮಸ್ಥರ ಸಹಕಾರದಲ್ಲಿ 8 ಲಕ್ಷ ರೂ. ವೆಚ್ಚದಲ್ಲಿ ಮೂರೂವರೆ ಅಡಿ ಎತ್ತರ, 3 ಅಡಿ ಅಗಲದ ಪುತ್ಥಳಿಯನ್ನು ಬೆಟ್ಟದ ಮೇಲಿನ ದಾಸೋಹ ಭವನದ ರಸ್ತೆಯ ಜಂಕ್ಷನ್‌ನಲ್ಲಿ ಪ್ರತಿಷ್ಠಾಪಿಸಲಾಗಿದ್ದು, ಇಂದು ಬೆಳಗ್ಗೆ 9.30ಕ್ಕೆ ಸಂದ ಶುಭ ಘಳಿಗೆಯಲ್ಲಿ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿದ ಬಳಿಕ ಪ್ರಮೋದಾದೇವಿ ಒಡೆಯರ್ ಪುತ್ಥಳಿಯನ್ನು ಅನಾವರಣಗೊಳಿಸಿದರು.

ಇದೇ ವೇಳೆ ಪ್ರಮೋದಾದೇವಿ ಒಡೆಯರ್ ಮಾತನಾಡಿ, ಚಾಮುಂಡಿ ಬೆಟ್ಟದ ಗ್ರಾಮಸ್ಥರು ಜಯಚಾಮರಾಜೇಂದ್ರ ಒಡೆಯರ್ ಪುತ್ಥಳಿ ನಿರ್ಮಿಸಿರುವುದು ಸಂತೋಷವಾಗಿದೆ. ಮಹಾರಾಜರ ಕೊಡುಗೆಗಳನ್ನು ಸ್ಮರಿಸುವ ಕೆಲಸ ಮಾಡಿದ್ದಾರೆ. ಮೈಸೂರು ರಾಜಮನೆತನಕ್ಕೂ ಚಾಮುಂಡಿಬೆಟ್ಟಕ್ಕೂ ಅವಿನಾಭಾವ ಸಂಬಂಧವಿದೆ. ಈ ನಿಟ್ಟಿನಲ್ಲಿ ಬೆಟ್ಟದಲ್ಲಿ ಪುತ್ಥಳಿ ಪ್ರತಿಷ್ಠಾಪಿಸಿರುವುದು ಸಂತೋಷವನ್ನುಂಟು ಮಾಡಿದೆ. ಎಲ್ಲರಿಗೂ ಚಾಮುಂಡೇಶ್ವರಿ ತಾಯಿ ಒಳ್ಳೆಯದು ಮಾಡಲಿ ಎಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್, ಶಾಸಕ ಜಿ.ಟಿ.ದೇವೇಗೌಡ, ಚಾಮುಂಡಿ ದೇವಸ್ಥಾನದ ಪ್ರಧಾನ ಅರ್ಚಕ ಡಾ.ಎನ್.ಶಶಿಶೇಖರ್ ದೀಕ್ಷಿತ್, ದೇವಾಲಯದ ಆಡಳಿತಾಧಿಕಾರಿ ಡಾ.ಯತಿರಾಜ್ ಸಂಪತ್‌ಕುಮಾರನ್, ಸೇರಿದಂತೆ ಮುಖಂಡರು, ದೇವಾಲಯದ ಸಿಬ್ಬಂದಿಗಳು, ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು. ಶ್ವೇತವರ್ಣದ ಜಯಚಾಮರಾಜ ಒಡೆಯರ್ ಅವರ ಪುತ್ಥಳಿಯನ್ನು ಶಿಲ್ಪಿ ಸೂರ್ಯಪ್ರಕಾಶ್ ಅವರು ಕೆತ್ತಿದ್ದಾರೆ.

ಚಾಮುಂಡಿಬೆಟ್ಟ ಗ್ರಾ.ಪಂ ಅಧ್ಯಕ್ಷ ಭರತ್ ಕಾಳಯ್ಯ ಮಾತನಾಡಿ, ನಾಡಿನ ಆದಿದೇವತೆಯಾಗಿರುವ ಚಾಮುಂಡೇಶ್ವರಿದೇವಿ ಮೈಸೂರು ರಾಜಮನೆತನದವರ ಕುಲದೇವರೂ ಆಗಿರುವುದರಿಂದ ದಸರಾ ಮಹೋತ್ಸವ, ರಥೋತ್ಸವ, ತೆಪ್ಪೋತ್ಸವ, ಆಷಾಡ ಮಾಸದ ವಿಶೇಷ ಪೂಜಾ ಮಹೋತ್ಸವ ವೇಳೆ ರಾಜವಂಶಸ್ಥರು ಬೆಟ್ಟಕ್ಕೆ ಬಂದು ವಿಶೇಷ ಪೂಜೆ ಸಲ್ಲಿಸುವ ಪದ್ಧತಿ ಅನುಸರಿಸುತ್ತಿದ್ದಾರೆ. ಈ ಮೊದಲಿನಿಂದಲೂ ಚಾಮುಂಡಿಬೆಟ್ಟಕ್ಕೂ ಮೈಸೂರು ರಾಜಮನೆತನಕ್ಕೂ ಅವಿನಾಭಾವ ಸಂಬಂಧವಿದೆ. ಮೈಸೂರು ಅರಸರು ನೀಡಿರುವ ಕೊಡುಗೆಯನ್ನು ಸ್ಮರಿಸುವ ನಿಟ್ಟಿನಲ್ಲಿ ಜಯಚಾಮರಾಜೇಂದ್ರರ ಪುತ್ಥಳಿ ನಿರ್ಮಿಸಲಾಗಿದೆ. ಈ ಸಮಾರಂಭವನ್ನು ಬೆಟ್ಟದ ನಿವಾಸಿಗಳು ಸಂಭ್ರಮದಿಂದ ನೆರವೇರಿಸಿಕೊಟ್ಟಿದ್ದಾರೆ ಎಂದು ವಿವರಿಸಿದರು.



ಚೀನಾದಲ್ಲಿ ನಡೆಯುವ ವರ್ಲ್ಡ್ ಯೂನಿವರ್ಸಿಟಿ ಅಥ್ಲೆಟಿಕ್ಸ್‌ನಲ್ಲಿ ಗುಂಡು ಎಸೆತ ವಿಭಾಗದಲ್ಲಿ ಪ್ರತಿನಿಧಿಸುತ್ತಿರುವ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿರುವ ಮೈಸೂರಿನ ಅಂಬಿಕಾ ಅವರನ್ನು ಮೈಸೂರು ಯುವ ಬಳಗದ ವತಿಯಿಂದ ಮುಡಾ ಸದಸ್ಯ ನವೀನ್ ಕುಮಾರ್ ಸನ್ಮಾನಿಸಿ, ಶುಭಾಶಯ ಕೋರಿದರು ಈ ಸಂದರ್ಭದಲ್ಲಿ ಪಿ.ಜಿ. ಸತ್ಯನಾರಾಯಣ್, ಪಿ.ಜಿ.ಚಂದ್ರಶೇಖರ್, ಸುಬ್ಬಣ್ಣ, ಬಿ.ಕೆ.ಸೋಮಶೇಖರ್, ಚಂದ್ರಶೇಖರ್, ಪ್ರಮೋದ್, ಶ್ರೀನಿವಾಸ್, ಶಾಮಲ, ನಿವೇದಿತಾ, ಇತರರು ಉಪಸ್ಥಿತರಿದ್ದರು.



ಸಮೂಹ ಶಕ್ತಿ ಮೈಸೂರು ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿರುವ ಕಾಮನಕೆರೆಹುಂಡಿ ಹೆಚ್.ಗಿರೀಶ್‌ಗೌಡರನ್ನು ಅವರ ಬೆಂಬಲಿಗರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಡಾ ಬಿ.ಆರ್. ಅಂಬೇಡ್ಕರ್ ಪ್ರಚಾರ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಿಚ್ಚ ಪುರುಷೋತ್ತಮ್, ಟಿ.ಎ.ಪಿ.ಸಿ.ಎಂ.ಎಸ್ ನಿರ್ದೇಶಕ ಪ್ರಕಾಶ್.ಹೆಚ್, ಯುವ ಮುಖಂಡ ಧರ್ಮರಾಜ್, ರವಿಕಿರಣ್, ಮೈಸೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಂಜುನಾಥ್ ಹಾಗೂ ಇತರರು ಉಪಸ್ಥಿತರಿದ್ದರು.

ಡಾ.ರಾಜ್ ಸ್ಮರಣಾರ್ಥ ರಂಗೋತ್ಸವಕ್ಕೆ ಚಾಲನೆ

ಮೈಸೂರು, ಏ.22(ಜಿಎ)– ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ಸ್ಮರಣಾರ್ಥ ಜಿಪಿಐಇಆರ್ ರಂಗತಂಡ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಆಯೋಜಿಸಿರುವ ರಂಗೋತ್ಸವವನ್ನು ಹಿರಿಯ ರಂಗಕರ್ಮಿ ಬಿ.ಎಂ.ರಾಮಚಂದ್ರ ಅವರು ಶುಕ್ರವಾರ ಸಂಜೆ ಉದ್ಘಾಟಿಸಿದರು.



ನಂತರ ಮಾತನಾಡಿದ ಅವರು, ಡಾ. ರಾಜ್‌ಕುಮಾರ್ ಅವರು ಚಿತ್ರರಂಗದಲ್ಲಿ ಅಷ್ಟು ಎತ್ತರಕ್ಕೆ ಬೆಳೆದರೂ ರಂಗಭೂಮಿ ನಂಟನ್ನು ಕೊನೆಯವರೆಗೂ ಮರೆಯಲಿಲ್ಲ. ಅವರು ಕಾಲವಾಗುವ ಆರು ತಿಂಗಳ ಮುನ್ನ 'ಭಕ್ತ ಅಂಬರೀಶ' ನಾಟಕವನ್ನು ಚಿತ್ರ ಮಾಡಬೇಕು ಎಂದು ಎಲ್ಲಾ ತಯಾರಿಗಳು ನಡೆಯುತ್ತಿದ್ದವು ಅದಕ್ಕೆ ಅವರು ಪ್ರತಿದಿನ ಬೆಳಗ್ಗೆ ಹಾಡುಗಳ ಅಭ್ಯಾಸ ಮಾಡುತ್ತಿದರು. ಅದನ್ನು ನಾನು ಹತ್ತಿರದಿಂದ ನೋಡಿದ ಭಾಗ್ಯ ನನ್ನದು ಎಂದು ಸ್ಮರಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಂಗಭೂಮಿ ಕಲಾವಿದರ ಬಗ್ಗೆ ನಿಗವಹಿಸಬೇಕು. ಏಕೆಂದರೆ ಅನೇಕ ಕಲಾವಿದರು ಅನಾರೋಗ್ಯದಿಂದ ಸಾವನ್ನಪ್ಪುತ್ತಿದ್ದಾರೆ. ಅವರ ಮತ್ತು ಅವರ ಕುಟುಂಬಗಳ ಸ್ಥಿತಗತಿಗಳ ಬಗ್ಗೆ ತಿಳಿದು ಅವರಿಗೆ ಸ್ಪಂದಿಸುವ ಕಾರ್ಯಕ್ಕೆ ಇಲಾಖೆ ಮುಂದಾಗಬೇಕು ಎಂದ ಅವರು ಇಂದು ಆರಂಭವಾಗಿರುವ ರಂಗೋತ್ಸವದಲ್ಲಿ 3 ವಿಭಿನ್ನ ಪ್ರಕಾರದ ನಾಟಕಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಲ್ಲರೂ ಬಂದು ನೋಡಿ ಎಂದು ಕರೆ ನೀಡಿದರು.

ಇದೇ ವೇಳೆ ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ ಮಾತನಾಡಿ, ಡಾ.ರಾಜ್ ಕುಮಾರ್ ಅವರು ನಟನೆಯಲ್ಲಿ ಹಿಮಾಲಯ ಪರ್ವತ ವಿದ್ದಂತೆ. ಕನ್ನಡವನ್ನು ಅತಿ ಶುದ್ಧವಾಗಿ ಉಚ್ಚರಣೆ ಮಾಡುತ್ತಿದ್ದ ಏಕೈಕ ನಟ ರಾಜ್‌ಕುಮಾರ್ ಒಬ್ಬರೇ ಎಂದ ಅವರು ಕುವೆಂಪು ಅವರ ಮೇಲೆ ಅವರಿಗೆ ವಿಶೇಷ ಗೌರವವಿತ್ತು ಏಕೆಂದರೆ ಕರ್ನಾಟಕ ರತ್ನ ಪ್ರಶಸ್ತಿ ಅವರಿಗೆ ಘೋಷಣೆಯಾದಾಗ ಮೊದಲು ಕುವೆಂಪು ಅವರಿಗೆ ನೀಡಿ ನಂತರ ನಾನು ಸ್ವೀಕರಿಸುತ್ತೇನೆ ಎಂದು ವಿಶೇಷ ಗೌರವವನ್ನು ತೋರಿಸಿದರು ಎಂದರು.

ರಂಗೋತ್ಸವದ ಮೊದಲ ದಿನವಾದ ಇಂದು ರಾಜಪ್ಪ ದಳವಾಯಿ ಅವರ ರಚನೆಯ 'ಒಂದು ಬೊಗಸೆ ನೀರು' ನವೀನ್ ಕುಮಾರ್ ನಿರ್ದೇಶನದಲ್ಲಿ ಪ್ರದರ್ಶನಗೊಂಡಿತ್ತು.

ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ಮೈಮ್ ರಮೇಶ್, ಹೆಚ್.ಎಂ. ಕುಮಾರಸ್ವಾಮಿ ಹಾಗೂ ಜಿಪಿಐಇಆರ್ ರಂಗ ತಂಡದ ಸದಸ್ಯರು ಭಾಗಿಯಾಗಿದ್ದರು.

ಕಾಯ್ದೆಗಳ ಜಾರಿಯಲ್ಲಿ ಸರ್ಕಾರ ವಿಫಲ

ದಸಂಸ ಕಾರ್ಯಕರ್ತರ ಪ್ರತಿಭಟನೆ



ಮೈಸೂರು, ಏ.22(ಆರ್‌ಕೆಬಿ)– ದಲಿತ, ಹಿಂದುಳಿದ, ಶೋಷಿತರ ಸಂವಿಧಾನಿಕವಾದ ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿ ಪೂರಕ ಕಾಯ್ದೆಗಳನ್ನು ಜಾರಿ ಮಾಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಚಾಲಕ ಸೋಸಲೆ ರಾಜಶೇಖರ ಮೂರ್ತಿ ನೇತೃತ್ವದಲ್ಲಿ ಶುಕ್ರವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎಂದು ಪ್ರತಿಭಟನೆ ನಡೆಸಲಾಯಿತು.

ಸರ್ಕಾರ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಸರ್ಕಾರ ಸುಳ್ಳು ಜಾತಿ ಪ್ರಮಾಣ ಪತ್ರಗಳ ದಂಧೆ ತಡೆಗಟ್ಟಬೇಕು. ಎಸ್‌ಟಿಪಿ ಮತ್ತು ಟಿಎಸ್‌ಪಿ ಕಾಯ್ದೆಗಳ ಸಮರ್ಪಕ ಅನುಷ್ಠಾನ ಆಗಬೇಕು. ಎಚ್.ಕಾಂತರಾಜು ಆಯೋಗದ ಜಾತಿ ಜನಗಣತಿ ವರದಿ ಬಿಡುಗಡೆ ಮಾಡಬೇಕು. ಸುಪ್ರೀಂ ಕೋರ್ಟ್ ತೀರ್ಪಿನಂತೆ ಪಂಚಾಯತ್‌ರಾಜ್ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲು ಸ್ಥಾನ ನಿಗದಿಪಡಿಸಿ, ಚುನಾವಣೆ ನಡೆಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ನಂತರ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಪತ್ರ ಸಲ್ಲಿಸಿದರು.

ಹಳೇ ಮೈಸೂರು ಭಾಗದ ಮೇಲೆ ಜೆಡಿಎಸ್ ಕಣ್ಣು

● ಬೃಹತ್ ಸಮಾವೇಶದ ಮೂಲಕ ಇತರೆ ಪಕ್ಷದ ಕಾರ್ಯಕರ್ತರು, ಮುಖಂಡರ ಸೆಳೆಯಲು ಚಿಂತನೆ
● ಸಿದ್ದರಾಮಯ್ಯರಂತೆ ಕುಮಾರಸ್ವಾಮಿ ಅವರಿಂದಲೂ ಮೈಸೂರಿನಲ್ಲಿ ಮುಸ್ಲಿಂ ಬಾಂಧವರಿಗೆ ಇಫ್ತಾರ್ ಕೂಟ

ಮೈಸೂರು, ಏ.22(ಜಿಎ)– ಹಳೇ ಮೈಸೂರು ಭಾಗದಿಂದ ಪಕ್ಷ ಸಂಘಟನೆಗೆ ಮುಂದಾಗಿರುವ ಜೆಡಿಎಸ್ ಮೇ ತಿಂಗಳಿನಲ್ಲಿ ಬೃಹತ್ ಸಮಾವೇಶ ನಡೆಸಲು ಚಿಂತನೆ ನಡೆಸಿದ್ದು, ಅಂದಿನ ಸಮಾವೇಶದಲ್ಲಿ ಇತರೆ ಪಕ್ಷಗಳ ಪ್ರಮುಖ ನಾಯಕರ ಜೆಡಿಎಸ್‌ಗೆ ಸೆಳೆಯುವ ತಂತ್ರಗಾರಿಕೆ ಹೆಣೆಯಲಾಗುತ್ತಿದೆ.



ವಿಧಾನಸಭಾ ಚುನಾವಣೆಗೆ ಇನ್ನು ಒಂದು ವರ್ಷ ಬಾಕಿಯಿದ್ದು, ರಾಜ್ಯದ ಪ್ರಮುಖ ಪಕ್ಷಗಳಾದ ಬಿಜೆಪಿ. ಕಾಂಗ್ರೆಸ್ ಮತ್ತು ಜೆಡಿಎಸ್ ಈಗಿನಿಂದಲೇ ಚುನಾವಣೆಗಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದು, ಜೆಡಿಎಸ್ ತನ್ನ ಚಟುವಟಿಕೆಯನ್ನು ತೀವ್ರಗೊಳಿಸುತ್ತಿದೆ.

ಕಾಂಗ್ರೆಸ್‌ಗೆ ಗುಡ್ ಬೈ ಹೇಳಿ ಜೆಡಿಎಸ್ ಸೇರ್ಪಡೆಯಾದ ಸಿ.ಎಂ. ಇಬ್ರಾಹಿಂ ಅವರು ಜೆಡಿಎಸ್ ಪಕ್ಷದ ನೂತನ ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ದಿನವೇ ಕಾಂಗ್ರೆಸ್ ಪಕ್ಷದಿಂದ ಉಚ್ಚಾಟನೆಯಾದ ಮೈಸೂರಿನ ನರಸಿಂಹರಾಜ ಕ್ಷೇತ್ರದ ಕೆಲ ಕಾಂಗ್ರೆಸ್ಸಿಗರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದರು.

ಹಳೆ ಮೈಸೂರು ಭಾಗವಾದ ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು ಮತ್ತು ಮೈಸೂರು ಜಿಲ್ಲೆಗಳ ಮೇಲೆ ಕಣ್ಣಿಟ್ಟಿರುವ ಜೆಡಿಎಸ್ ನೂತನ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ಮೈಸೂರಿನ ನರಸಿಂಹರಾಜ ಕ್ಷೇತ್ರದಿಂದ ರಾಜಕೀಯ ಆರಂಭಿಸಿ ಅಲ್ಲಿರುವ ಮುಖಂಡರನ್ನೂ ಪಕ್ಷದತ್ತ ಸೆಳೆಯಲು ಮುಂದಾಗಿದ್ದಾರೆ.

ರಂಜಾನ್ ನಂತರ ಮೈಸೂರಿನಲ್ಲಿ ಬೃಹತ್ ಸಮಾವೇಶ ನಡೆಸುವ ಮೂಲಕ ಶಕ್ತಿ ಪ್ರದರ್ಶನಕ್ಕೆ ಸಿದ್ಧತೆ ಕೈಗೊಳ್ಳಲಾಗುತ್ತಿದೆ. ಅಂದು ಹೆಚ್ಚಿನ ಸಂಖ್ಯೆಯಲ್ಲಿ ಇತರೆ ಪಕ್ಷಗಳು ಕಾರ್ಯಕರ್ತರು ಪಕ್ಷ ಸೇರುವ ನಿರೀಕ್ಷೆ ಇದ್ದು, ಅದಕ್ಕಾಗಿ ತಯಾರಿ ನಡೆಸಲಾಗುತ್ತಿದೆ ಎಂದು ಹೇಳಲಾಗಿದೆ.

1998ರಿಂದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಸ್ಲಿಂ ಬಾಂಧವರಿಗಾಗಿ ಮೈಸೂರಿನಲ್ಲಿ ಇಫ್ತಾರ್ ಕೂಟ ಆಯೋಜಿಸುತ್ತಿದ್ದು, ಅದರಂತೆ ಏ.17 ರಂದು ಮೈಸೂರಿನ ಖಾಸಗಿ ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಿದ್ದರು. ಆದರೆ ಈಗ ಜೆಡಿಎಸ್ ಪಕ್ಷದಿಂದಲೂ ಅದ್ದೂರಿಯಾಗಿ ಇಫ್ತಾರ್ ಕೂಟ ಆಯೋಜಿಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ನಡೆಸುತ್ತಿದ್ದು, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ಲಾ ಮತ್ತುಅಬ್ದುಲ್ ಖಾದರ್ ಶಾಹಿದ್ ನರಸಿಂಹರಾಜ ಕ್ಷೇತ್ರದ ಮುಖಂಡರ ನೇತೃತ್ವದಲ್ಲಿ ಏ.24 ರಂದು ಮಾಜಿ ಮುಖ್ಯಮಂತ್ರಿ ಸಿದ್ದಾರಾಮಯ್ಯನವರು ಆಯೋಜಿಸಿದ್ದ ಕನ್ವೆನ್ಷನ್ ಹಾಲ್‌ನಲ್ಲಿ ಇಫ್ತಾರ್ ಕೂಟ ಏರ್ಪಡಿಸಲಾಗಿದೆ ಈ ಕೂಟದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಸಿ.ಎಂ. ಇಬ್ರಾಹಿಂ ಸೇರಿದಂತೆ ಪ್ರಮುಖ ನಾಯಕರು ಭಾಗಿಯಾಗುವ ನಿರೀಕ್ಷೆ ಇದೆ.

ತಮ್ಮನ್ನು ಮೊಬೈಲ್ ಮೂಲಕ ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ನಾನು ಪಕ್ಷ ಸಂಘಟನೆಯನ್ನು ಬಸವನ ಬಾಗೇವಾಡಿಯಿಂದ ಆರಂಭಿಸಲಿದ್ದೇನೆ. ಅದರಲ್ಲೂ ಹಳೇ ಮೈಸೂರು ಪ್ರಮುಖ ಗುರಿಯಾಗಿದೆ. ಈಗಾಗಲೇ ನರಸಿಂಹರಾಜ ಕ್ಷೇತ್ರದ ಅನೇಕರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದು, ತನ್ವೀರ್ ಸೇಠ್ ಅವರು ಸೇರ್ಪಡೆಯಾಗುವುದು ಅವರ ವಿವೇಚನೆಗೆ ಬಿಟ್ಟಿದ್ದು ಎಂದರು. ನರಸಿಂಹರಾಜ ಕ್ಷೇತ್ರದಲ್ಲಿ ಇಫ್ತಾರ್ ಕೂಟ ಆಯೋಜಿಸಲಾಗುತ್ತಿದೆ ಎಂದರು.

ಮೈಸೂರು ಮಿತ್ರ ಶನಿವಾರ 23 ಏಪ್ರಿಲ್ 2022

ಯಾವುದೇ ಕಾಯಿಲೆಗೂ ಆತಂಕ ಪಡುವ ಅಗತ್ಯವಿಲ್ಲ

ಎಲ್ಲಾ ಕಾಯಿಲೆಗೂ ಚಿಕಿತ್ಸೆ ಲಭ್ಯವಿದೆ: ಆರೋಗ್ಯ ಮೇಳದಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್

ತಿ.ನರಸೀಪುರ, ಏ.22 (ಎಸ್‌ಕೆ)– ಯಾವುದೇ ಕಾಯಿಲೆ ಬಂದರೂ ಆತಂಕ ಪಡುವ ಅಗತ್ಯವಿಲ್ಲ. ಎಲ್ಲಾ ಕಾಯಿಲೆಗೂ ಚಿಕಿತ್ಸೆ ಲಭ್ಯವಿದೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಎದುರು ಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಆರೋಗ್ಯ ಅಭಿಯಾನದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಆರೋಗ್ಯ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಬದಲಾದ ಆಹಾರ ಪದ್ಧತಿಯಿಂದ ಕಾಯಿಲೆಗಳು ಸಣ್ಣ ವಯಸ್ಸಿಗೆ ಬಾಧಿಸುತ್ತವೆ. ರೋಗ ಲಕ್ಷಣ ಕಾಣಿಸಿಕೊಂಡ ತಕ್ಷಣ ಸೂಕ್ತ ತಪಾಸಣೆಗೊಳಗಾಗದೇ ನಿರಾಸಕ್ತಿ ತೋರುವುದರಿಂದಲೇ ರೋಗ ಉಲ್ಬಣವಾಗಲು ಕಾರಣ. ಆದರೆ ಇಂದಿನ ಆಧುನಿಕ ಚಿಕಿತ್ಸಾ ಪದ್ಧತಿಯಲ್ಲಿ ಎಲ್ಲಾ ಕಾಯಿಲೆಗೂ ಚಿಕಿತ್ಸೆ ನೀಡಲಾಗುತ್ತಿದ್ದು, ಯಾರೂ ಆತಂಕಕ್ಕೊಳಗಾಗುವ ಅಗತ್ಯವಿಲ್ಲ ಎಂದರು.

75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ದೇಶದೆಲ್ಲೆಡೆ ಆರೋಗ್ಯ ಮೇಳ ನಡೆಯುತ್ತಿದ್ದು, ಬಡ, ಮಧ್ಯಮ ವರ್ಗದವರಿಗೆ ಮೇಳದಿಂದ ಅನುಕೂಲವಾಗಲಿದೆ. ಆರೋಗ್ಯ ಮತ್ತು ಶಿಕ್ಷಣ ಎಲ್ಲರಿಗೂ ದೊರಕಬೇಕೆಂಬುದು ಸರ್ಕಾರದ ಉದ್ದೇಶವಾಗಿದ್ದು, ರೈಟ್ ಟು ಎಜುಕೇಷನ್ ಕಾಯ್ದೆಯಡಿ ಕುಟುಂಬದಲ್ಲಿ 5 ವರ್ಷ ತುಂಬಿದ ಮಗುವಿಗೆ ಶಿಕ್ಷಣ ಕೊಡಿಸುವುದು ನಿಯಮವಾಗಿದ್ದು, ಶಾಲೆಗೆ ಕಳುಹಿಸದಿದ್ದಲ್ಲಿ ಅದು ಅಪರಾಧವಾಗಲಿದೆ. ಅಂತೆಯೇ ಆರೋಗ್ಯ ಸಹ ಅಷ್ಟೇ ಮುಖ್ಯವಾಗಿದ್ದು, ಪ್ರತಿಯೊಬ್ಬರು ಅಗತ್ಯವಾಗಿ ಆರೋಗ್ಯ ತಪಾಸಣೆಗೊಳಗಾಗಬೇಕಿದೆ ಎಂದರು.

ಈಗಿನ ಆಹಾರ ಪದ್ಧತಿಯಿಂದ ನಾಗರಿಕರಲ್ಲಿ ಸಕ್ಕರೆ ಕಾಯಿಲೆ, ರಕ್ತದೊತ್ತಡ ಹೆಚ್ಚಾಗುತ್ತಿದ್ದು, ಆರಂಭದಲ್ಲಿಯೇ ಚಿಕಿತ್ಸೆ ಪಡೆಯಬೇಕು. ಇಲ್ಲದಿದ್ದಲ್ಲಿ ನಾವೇ ಅಪಾಯಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಮೊದಲೆಲ್ಲಾ ಕಾಯಿಲೆಗಳು ಬಂದಾಗ ತಪಾಸಣೆಗೊಳಗಾಗಬೇಕೆನ್ನುವ ತಿಳುವಳಿಕೆ ಇರಲಿಲ್ಲ ಆದರೀಗ ಎಲ್ಲಾ ರೀತಿಯ ತಿಳುವಳಿಕೆ ಇದೆ ಎಲ್ಲಾ ರೀತಿಯ ಚಿಕಿತ್ಸೆ ಸಹ ಇದೆ. ಆದರೆ ತಪಾಸಣೆಗೊಳಗಾಗುವ ಮನಸ್ಸಿರಬೇಕು ಅಷ್ಟೇ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್ ಮಾತನಾಡಿ, ಕಾಯಿಲೆ ಬಂದ ನಂತರ ವೈದ್ಯರನ್ನು ಭೇಟಿಯಾಗುವ ಬದಲು ರೋಗ ಬರುವ ಮುನ್ನವೇ ಅದನ್ನು ತಡೆಗಟ್ಟಲು ಅನುಸರಿಸಬೇಕಾದ ಮಾರ್ಗಸೂಚಿ ಕಡೆಗೆ ಗಮನ ಹರಿಸಬೇಕು. ನಿಯಮಿತವಾಗಿ ಆರೋಗ್ಯ ತಪಾಸಣೆಗೊಳಗಾಗಿ ಆಯುಸ್ಸು ವೃದ್ಧಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಗಮನಹರಿಸಬೇಕು. ಭಾರತ ದೇಶದ ಪ್ರಜೆಯ ಆಯುಸ್ಸು 60 ವರ್ಷಗಳು ಎಂದು ಅಂದಾಜಿಸಲಾಗಿದೆ. ಆಹಾರ ಪದ್ಧತಿಯ ಬದಲಾವಣೆ, ನಡಿಗೆ, ವ್ಯಾಯಾಮ ಹಾಗೂ ಯೋಗಾಸನ ಮಾಡುವ ಮೂಲಕ ಆಯುಸ್ಸನ್ನು ವೃದ್ಧಿಸಿಕೊಳ್ಳುವ ಅಗತ್ಯವಿದೆ ಎಂದರು.

ಮಾಜಿ ಶಾಸಕ ಡಾ.ಭಾರತೀಶಂಕರ್, ಕ್ಷೇತ್ರದ ಬಿಜೆಪಿ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಪುರಸಭಾ ಸದಸ್ಯರಾದ ಎಸ್.ಕೆ.ಕಿರಣ್, ಎನ್.ಲೋಕೇಶ್, ಎಪಿಎಂಸಿ ನಿರ್ದೇಶಕ ಸೋಮಣ್ಣ ನಾಯಕ, ಸುರೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಆಡಳಿತಾಧಿಕಾರಿ ಡಾ.ಜಗನ್ನಾಥ್, ಸಿಡಿಪಿಓ ಬಸವರಾಜು, ತಹಶೀಲ್ದಾರ್ ಗಿರಿಜಾ, ತಾ.ಪಂ.ಇಓ ಕೃಷ್ಣ, ಡಾ.ಜಯಂತ್, ಡಾ.ಶಿವಪ್ರಸಾದ್, ಡಾ.ಮಂಜುನಾಥ ಪ್ರಸಾದ್, ಆರೋಗ್ಯ ರಕ್ಷಾ ಸಮಿತಿ ಸದಸ್ಯ ನಂಜುಂಡಸ್ವಾಮಿ, ಕುರುಬೂರು ಮಂಜುನಾಥ್, ಹೆಗ್ಗೂರು ರಂಗಸ್ವಾಮಿ, ಬೈರಾಪುರ ಬಾಲರಾಜು, ಮಾದೇಗೌಡನ ಹುಂಡಿ ಸ್ವಾಮಿ, ಕರೋಹಟ್ಟಿ ಮಹದೇವಯ್ಯ, ಬಸವರಾಜು, ಮತ್ತಿತರರಿದ್ದರು.



ತಿ.ನರಸೀಪುರದ ಸಾರ್ವಜನಿಕ ಆಸ್ಪತ್ರೆ ಎದುರು ಏರ್ಪಡಿಸಲಾಗಿದ್ದ ತಾಲೂಕು ಮಟ್ಟದ ಆರೋಗ್ಯ ಮೇಳವನ್ನು ಸಂಸದ ವಿ.ಶ್ರೀನಿವಾಸ ಪ್ರಸಾದ್ ಉದ್ಘಾಟಿಸಿದರು.

ಮೇಳದಲ್ಲಿ 2986 ಮಂದಿಗೆ ಚಿಕಿತ್ಸೆ

ಆರೋಗ್ಯ ಶಿಬಿರದಲ್ಲಿ ಹೊರ ರೋಗಿಗಳಾಗಿ 3102 ಮಂದಿ ಹೆಸರು ನೋಂದಾಯಿಸಿಕೊಂಡಿದ್ದರು. ಈ ಪೈಕಿ 2986 ಮಂದಿ ವಿವಿಧ ಕಾಯಿಲೆಗೆ ಚಿಕಿತ್ಸೆ ಪಡೆದರು. 482 ಮಂದಿ ರೋಗಿಗಳು ಎಬಿಎಆರ್‌ಕೆ ಕಾರ್ಡ್ ಪಡೆದರೆ, 822 ಮಂದಿ ರೋಗಿಗಳು ಮಧುಮೇಹ ಹಾಗೂ ರಕ್ತದೊತ್ತಡ ತಪಾಸಣೆಗೊಳಗಾದರು. 412 ಮಂದಿ ಆಯುಷ್ ಚಿಕಿತ್ಸೆ ಪಡೆದುಕೊಂಡರು. ಶಿಬಿರದಲ್ಲಿ 12 ಮಂದಿ ರಕ್ತದಾನ ಮಾಡಿದರು.

6 ದೊಡ್ಡ ಕಾಯಿಲೆಗೂ ಸರ್ಕಾರದಿಂದ ಹಣ

ಕಿಡ್ನಿ ಸಮಸ್ಯೆ, ರಕ್ತದೊತ್ತಡ, ಹೃದಯಾಘಾತ, ಹೃದಯ ಸಂಬಂಧಿ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಬಡವರು ಧೃತಿಗೆಡುವ ಅಗತ್ಯವಿಲ್ಲ. ಆಯುಷ್ಮಾನ್ ಕಾರ್ಡ್ ಮೂಲಕ ಬಡತನ ರೇಖೆಗಿಂತ ಕೆಳಗಿರುವವರಿಗೆ 5 ಲಕ್ಷ ರೂ. ಹಾಗೂ ಎಪಿಎಲ್ ಕಾರ್ಡ್ ಹೊಂದಿರುವವರಿಗೆ ಶೇ.30 ರಷ್ಟು ಹಣವನ್ನು ಚಿಕಿತ್ಸಾ ವೆಚ್ಚಕ್ಕಾಗಿ ಸರ್ಕಾರ ನೀಡುತ್ತಿದ್ದು, ಆಯುಷ್ಮಾನ್ ಕಾರ್ಡ್ ಬಗ್ಗೆ ಇಡೀ ದೇಶಾದ್ಯಂತ ಅಭಿಯಾನ ಆಗಬೇಕಿದೆ.

– ವಿ.ಶ್ರೀನಿವಾಸಪ್ರಸಾದ್, ಸಂಸದ



ಮೈಸೂರು ತಾಲೂಕು ಭೂ ನ್ಯಾಯ ಮಂಡಳಿ ನಾಮ ನಿರ್ದೇಶಿತ ಸದಸ್ಯರಾಗಿ ನೇಮಕಗೊಂಡಿರುವ ಭದ್ರೇಗೌಡನ ಕೊಪ್ಪಲು ಗೋಪಾಲ್‌ಗೌಡ, ರಮಾಬಾಯಿ ನಗರದ ಶ್ರೀಕಂಠಸ್ವಾಮಿ, ಕೊಂಗರ ನಂಜಯ್ಯನ ಹುಂಡಿ ಈರಪ್ಪ ಅವರನ್ನು ಜಯಪುರ ಹೋಬಳಿ ವಿಕಾಸ ವೇದಿಕೆಯಿಂದ ಸನ್ಮಾನಿಸಲಾಯಿತು. ಈ ವೇಳೆ ವಿಕಾಸ ವೇದಿಕೆ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್, ಕಾನೂನು ಸಲಹೆಗಾರರಾದ ವಕೀಲ ಡಾ.ಎಂ.ಎಂ.ಮಹದೇವಪ್ಪ ವೃಷಭೇಂದ್ರ ಗಣೇಶ್, ಬಿ.ರಾಜೇಶ್, ರವಿ, ಚುದ್ರು ಕೃಷ್ಣ (ಕಿಟ್ಟಿ) ಹಾಜರಿದ್ದರು.

ಪದವೀಧರರ ಚುನಾವಣೆಯಲ್ಲಿ ನನ್ನ ಗೆಲುವು ನಿಶ್ಚಿತ

ಪಕ್ಷೇತರ ಅಭ್ಯರ್ಥಿ ಎನ್.ಎಸ್.ವಿನಯ್ ವಿಶ್ವಾಸ



ನಂಜನಗೂಡು, ಏ.22(ಸುದರ್ಶನ್)– ಕಳೆದ ಒಂದೂವರೆ ವರ್ಷದಿಂದ ಪದವೀಧರ ಮತದಾರರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಸಾಮಾಜಿಕ ಸೇವೆಯಲ್ಲಿ ತೊಡಗುವ ಮೂಲಕ ಅವರ ಸಂಪರ್ಕದಲ್ಲಿದ್ದೇನೆ. ಆದ್ದರಿಂದ ಈ ಬಾರಿ ಪದವೀಧರ ಮತದಾರರು ನನ್ನ ಕೈ ಹಿಡಿಯುವ ವಿಶ್ವಾಸವಿದ್ದು, ನನ್ನ ಗೆಲುವು ನಿಶ್ಚಿತ ಎಂದು ಪದವೀಧರರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಎನ್.ಎಸ್.ವಿನಯ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಪದವೀಧರರಿಗೆ ಅಪಘಾತ ವಿಮೆ ಬಾಂಡ್ ವಿತರಿಸಿ, ನಂತರ ಮತದಾರರನ್ನು ಭೇಟಿ ಮಾಡಿ ಮತಯಾಚಿಸಿ ಅವರು ಮಾತನಾಡಿದರು. ದಕ್ಷಿಣ ಪದವೀಧರರ ವೇದಿಕೆ ಸ್ಥಾಪಿಸಿ ಪದವೀಧರರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿದ್ದೇನೆ. ಅಲ್ಲದೇ 4 ಜಿಲ್ಲೆಗಳಲ್ಲಿ ಸಂಚಾರ ವೇದಿಕೆ ಮೂಲಕ ಹೊಸದಾಗಿ 48,780 ಮತದಾರರನ್ನು ನೋಂದಣಿ ಮಾಡಿಸಿ, 39 ಸಾವಿರ ಮಂದಿಗೆ ಅಪಘಾತ ವಿಮೆ ಬಾಂಡ್ ವಿತರಿಸಿದ್ದೇನೆ. ಮತದಾನ ವೇಳೆಗೆ ಸುಮಾರು 50 ಸಾವಿರ ಬಾಂಡ್ ವಿತರಿಸುವ ಗುರಿ ಹೊಂದಲಾಗಿದೆ. ನಂಜನಗೂಡಿನಲ್ಲಿ 2,264 ಬಾಂಡ್ ವಿತರಿಸಲಾಗಿದೆ. ಬಾಂಡ್ ತಲುಪದವರು ವೆಬ್‌ಸೈಟ್ ಮೂಲಕ ಬಾಂಡ್ ಡೌನ್‌ಲೋಡ್ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ ಎಂದರು.

ಇದೇ ವೇಳೆ ಮುಖಂಡರಾದ ಸೋಮಶೇಖರ್, ಜಯರಾಮು, ಬಸವ ರಾಜು, ಸಂತೋಷ್, ಮಹದೇವಸ್ವಾಮಿ, ಮಧು, ಶಿವು, ಪದವೀಧರ ಮತದಾರರು ಇದ್ದರು.

ಪಿಡಿಓಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

ಹುಣಸೂರು, ಏ.22(ಕೆಕೆ)– ದಲಿತ ವಿರೋಧಿ ನೀತಿ ಅನುಸರಿಸುತ್ತಿರುವ ತಾಲೂಕಿನ ಪಿಡಿಓಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ದಸಂಸ (ಡಿ.ಜಿ.ಸಾಗರ್ ಬಣ) ಕಾರ್ಯಕರ್ತರು ನಗರದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಜಿಲ್ಲಾ ಸಂಘಟನಾ ಸಂಚಾಲಕ ಕೃಷ್ಣ ಮಾತನಾಡಿ, ತಾಲೂಕಿನ ದಲಿತ ಹೆಣ್ಣು ಮಕ್ಕಳು ಹೊಲಿಗೆ ಸೇರಿದಂತೆ ವಿವಿಧ ತರಬೇತಿ ಪಡೆದು ಸ್ವ–ಉದ್ಯೋಗಕ್ಕಾಗಿ ಸರ್ಕಾರದ ಧನ ಸಹಾಯಕ್ಕಾಗಿ ಅರ್ಜಿ ಸಲ್ಲಿಸಿ 3 ವರ್ಷ ಕಳೆದರೂ, ಪಿಡಿಓಗಳು ಸರ್ಕಾರದ ಸವಲತ್ತು ನೀಡಲು ಮೀನಾಮೇಷ ಎಣಿಸುತ್ತಿದ್ದಾರೆ. ಇಂತಹ ದಲಿತ ವಿರೋಧಿ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕಿದೆ. ಇಲ್ಲದಿದ್ದರೇ ದಲಿತ ನಿರುದ್ಯೋಗಿ ಯುವಜನರೊಂದಿಗೆ ಬೀದಿಗಿಳಿದು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದರು.

ತಾಲೂಕಿನ ತಟ್ಟೆಕೆರೆ, ಕರ್ಣಕುಪ್ಪೆ, ಕಿರಂಗೂರು, ದೊಡ್ಡಹೆಜ್ಜೂರು, ಹನಗೋಡು, ಉಮ್ಮತ್ತೂರು, ಬನ್ನಿಕುಪ್ಪೆ, ಬಿಳಿಕೆರೆ, ಕಡೆಮನುಗನಹಳ್ಳಿ, ಬಿಳಿಗೆರೆ, ಮನುಗನಹಳ್ಳಿ, ಉಮ್ಮತ್ತೂರು, ಹೆಗ್ಗಂದೂರು ಸೇರಿದಂತೆ ವಿವಿಧ ಗ್ರಾಪಂಗಳ ಪಿಡಿಓಗಳು ಕೇವಲ ಕಮೀಷನ್ ಕಾಮಗಾರಿಗಳಿಗೆ ಮಾತ್ರ ಆದ್ಯತೆ ನೀಡುತ್ತಿದ್ದು, ಸಾಮಾನ್ಯ ಜನರ ಕೆಲಸಗಳನ್ನು ಕಡೆಗಣಿಸಿದ್ದಾರೆ. ಅಲ್ಲದೇ ನರೇಗಾ ಕೆಲಸಗಳನ್ನು ಗ್ರಾಮೀಣ ಜನರಿಗೆ ಮಾನವ ದಿನಗಳ ಕೂಲಿ ನೀಡುವ ಬದಲು ಟ್ರ್ಯಾಕ್ಟರ್ ಮತ್ತು ಜೆಸಿಬಿಯಿಂದ ಕೆಲಸ ಮಾಡಿಸಿ ಹಣ ಮಾಡುವ ದಂಧೆಗೆ ಇಳಿದಿದ್ದಾರೆ. ಇದು ಸರ್ಕಾರದ ಉಪಯುಕ್ತ ಯೋಜನೆಗೆ ಮಾರಕವಾಗಿದೆ ಎಂದರು. ಪ್ರತಿಭಟನೆಯಲ್ಲಿ ಮಹಿಳಾ ಸಂಚಾಲಕಿ ಶಿವಕುಮಾರಿ, ಹರಿವೇಣಿ, ವಿನಯ್, ಕುಮಾರಿ, ಲಕ್ಷ್ಮಿ, ಭಾಗ್ಯ, ಕೆ.ಚಂದ್ರಶೇಖರ್, ವೆಂಕಟೇಶ್, ಕಿರಣ್, ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ನಾಳೆ ಉಚಿತ ಹೃದ್ರೋಗ ತಪಾಸಣಾ ಶಿಬಿರ

ಗಾವಡಗೆರೆ, ಏ.22 (ಜಿವಿಎಸ್)– ಹುಣಸೂರು ತಾಲೂಕಿನ ಶ್ರೀಶಿವ ಛತ್ರಪತಿ ಮರಾಠ ಭವನದಲ್ಲಿ ಏ.24 ರಂದು ಬೆಳಗ್ಗೆ 8 ರಿಂದ ಮಧ್ಯಾಹ್ನ 2 ರವರೆಗೆ ಉಚಿತ ಹೃದಯ ರೋಗ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಸಂಚಾಲಕ ಜಿ.ವಿ.ಶ್ರೀನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ– 9611068227, 7899126590, 9113052731 ಸಂಪರ್ಕಿಸಿ.

ಹೆಚ್.ಡಿ.ಕೋಟೆಯಲ್ಲಿ ರಕ್ತದಾನ ಶಿಬಿರ



ಹೆಚ್.ಡಿ.ಕೋಟೆ, ಏ.22(ಮಂಜು)– ರಕ್ತದಾನ ಮಾಡಲು ಯುವಕರು ಮುಂದಾಗಬೇಕು ಎಂದು ರೋಟರಿ ಕ್ಲಬ್ ಅಧ್ಯಕ್ಷ ಮಹೇಶ್ ತಿಳಿಸಿದರು. ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಮೈಸೂರಿನ ಕೆ.ಆರ್.ಆಸ್ಪತ್ರೆ ರಕ್ತನಿಧಿ ಕೇಂದ್ರ ಮತ್ತು ತಾಲೂಕಿನ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ರಕ್ತದಾನ ಶಿಬಿರದಿಂದ ರಕ್ತದ ಅವಶ್ಯಕತೆ ಇರುವವರಿಗೆ ಅನುಕೂಲವಾಗಲಿದ್ದು, ರಕ್ತದಾನದಿಂದ ಇಬ್ಬರ ಜೀವ ಉಳಿಸಲು ಸಾಧ್ಯವಾಗಲಿದೆ ಎಂದರು. ಇದೇ ವೇಳೆ 18 ಬಾರಿ ರಕ್ತದಾನ ಮಾಡಿದ ಶಿವು ಮತ್ತು 8 ಬಾರಿ ರಕ್ತದಾನ ಮಾಡಿದ್ದ ರೋಷನ್ ಅವರನ್ನು ಸನ್ಮಾನಿಸಲಾಯಿತು. ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ತಾಲೂಕು ಆರೋಗ್ಯ ಅಧಿಕಾರಿ ರವಿಕುಮಾರ್, ರಕ್ತನಿಧಿ ಕೇಂದ್ರದ ಸುಜೀತ್, ಪರಶಿವಮೂರ್ತಿ, ಮುದ್ದು ಮಲ್ಲಯ್ಯ, ರೋಟರಿ ಕ್ಲಬ್ ಅಧ್ಯಕ್ಷ ಮಹೇಶ್, ಗಣೇಶ್ ಲಾಡ್, ನಾರಾಯಣ್ ಲಾಲ್, ಬಿಜೆಪಿ ಎಸ್‌ಸಿ ಘಟಕ ಅಧ್ಯಕ್ಷ ರಾಜು, ಸ್ವಾಮಿ, ಚಿನ್ನಮಾದು, ನಿರಂಜನ್ ಇದ್ದರು.

ಏ.30ಕ್ಕೆ ಡಾ.ಬಾಬೂಜಿ ಪ್ರತಿಮೆ ಅನಾವರಣ

ಕಾರ್ಯಕ್ರಮದಲ್ಲಿ ಬಾಬೂಜಿ ಪುತ್ರಿ, ಮಾಜಿ ಕೇಂದ್ರ ಸಚಿವೆ ಮೀರಾ ಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಭಾಗಿ



ತಿ.ನರಸೀಪುರ, ಏ.22(ಎಸ್‌ಕೆ)– ಪಟ್ಟಣದ ಪುರಸಭಾ ವ್ಯಾಪ್ತಿಯ ಭೈರಾಪುರ ಗ್ರಾಮದ ಪ್ರವೇಶ ದ್ವಾರದಲ್ಲಿ ನಿರ್ಮಿಸಿರುವ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಪ್ರತಿಮೆ ಅನಾವರಣ ಕಾರ್ಯಕ್ರಮ ಏ.30 ರಂದು ಮಧ್ಯಾಹ್ನ 12.30ಕ್ಕೆ ನಡೆಯಲಿದೆ ಎಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಾಬು ಜಗಜೀವನರಾಂ ಯುವಕರ ಸಂಘದ ಆಶ್ರಯದಲ್ಲಿ ಗ್ರಾಮದ ಪ್ರವೇಶ ದ್ವಾರದಲ್ಲಿ 12 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ 7 ಅಡಿ ಎತ್ತರದ ಬಾಬೂಜಿಯವರ ಪ್ರತಿಮೆಯನ್ನು ಡಾ.ಬಾಬು ಜಗಜೀವನರಾಂ ಪುತ್ರಿ, ಮಾಜಿ ಕೇಂದ್ರ ಸಚಿವೆ ಮೀರಾ ಕುಮಾರ್ ಅನಾವರಣಗೊಳಿಸಲಿದ್ದು, ಎಲ್ಲಾ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಿಪಕ್ಷ ನಾಯಕರೂ ಆದ ಮಾಜಿ ಸಿಎಂ ಸಿದ್ದರಾಮಯ್ಯ, ಎಐಸಿಸಿ ವಕ್ತಾರ ಡಾ.ಬಾಬುಜಗಜೀವನರಾಂ ಅವರ ಮೊಮ್ಮಗ ಅನ್ಸುಲ್ ಕುಮಾರ್ ಅವಿಜಿತ್ ಭಾಗವಹಿಸಲಿದ್ದು, ಅಧ್ಯಕ್ಷತೆಯನ್ನು ಶಾಸಕ ಯತೀಂದ್ರ ವಹಿಸಲಿದ್ದಾರೆ. ಅಲ್ಲದೇ ಸಮಾರಂಭದಲ್ಲಿ ಇತ್ತೀಚೆಗೆ ನಿಧನರಾದ ಡಾ.ಪುನೀತ್ ರಾಜ್‌ಕುಮಾರ್ ಅವರನ್ನು ಸ್ಮರಿಸಿ ಗೌರವ ಸಮರ್ಪಿಸಲಾಗುತ್ತದೆ ಎಂದರು.

ಸಮಾರಂಭಕ್ಕೆ ಜನರನ್ನು ಕರೆತರಲು ವ್ಯವಸ್ಥೆ ಮಾಡ ಲಾಗಿದೆ ಅಲ್ಲದೇ 5 ಸಾವಿರ ಮಂದಿಗೆ ಉಪಹಾರದ ವ್ಯವಸ್ಥೆ ಮಾಡಲಾಗಿದೆ ಎಂದರು. ಗ್ರಾಪಂ ಸದಸ್ಯ ಎಸ್.ಸಿದ್ದಪ್ಪ ಮಾತನಾಡಿ, ಸರ್ಕಾರ ಮಾಡಬೇಕಾದ ಕೆಲಸವನ್ನು ಮಾದಿಗ ಜನಾಂಗದ ಮುಖಂಡರೂ ಆದ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾಡಿದ್ದಾರೆ. ತಮ್ಮದೇ ಸ್ವಂತ ಖರ್ಚಿನಲ್ಲಿ ಪ್ರತಿಮೆ ಮಾಡಿಸಿ ಅನಾವರಣ ಮಾಡಿಸುವುದು ಸುಲಭದ ಕೆಲಸವಲ್ಲ. ಶಾಸಕರು, ವಿಧಾನಪರಿಷತ್ ಸದಸ್ಯರು ಹಾಗೂ ಜನಾಂಗದ ಘಟಾನುಘಟಿ ನಾಯಕರಿಂದ ಸಾಧ್ಯವಾಗದ ಕೆಲಸವನ್ನು ಮರಯ್ಯನವರು ಮಾಡುತ್ತಿದ್ದು, ಜನಾಂಗದ ಎಲ್ಲರೂ ಅವರ ಬೆಂಬಲಕ್ಕೆ ನಿಲ್ಲಬೇಕಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮಹದೇವು, ದೊಳ್ಳಯ್ಯ, ಗ್ರಾಪಂ ಸದಸ್ಯ ಮಹೇಶ್, ಚಿನ್ನಸ್ವಾಮಿ, ಮಾಜಿ ಸದಸ್ಯರಾದ ನಟರಾಜು, ಸೋಮಣ್ಣ ಬಾಲು, ಎಂ.ಸುರೇಶ್, ಮಲಿಯೂರು ಗ್ರಾಪಂ ಅಧ್ಯಕ್ಷ ಸಿದ್ದಯ್ಯ, ಭಾಸ್ಕರ್, ಸ್ವಾಮಿ ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು ಹಾಜರಿದ್ದರು.

ಕಂಪಲಾಪುರದಲ್ಲಿ ಓಕಳಿ, ಬೆಳ್ಳಿ ಬಸವನ ಅದ್ಧೂರಿ ಮೆರವಣಿಗೆ

ಕಂಪಲಾಪುರ, ಏ.22(ಸದಾ)– ಗ್ರಾಮದ ಶ್ರೀಕರಕಂಠೇಶ್ವರ ದೇವಸ್ಥಾನದಲ್ಲಿ ಓಕಳಿ ಹಬ್ಬದ ಪ್ರಯುಕ್ತ ವಿಶೇಷ ಪೂಜೆ, ಅನ್ನದಾನ ನಡೆಯಿತು.

ಗ್ರಾಪಂ ಅಧ್ಯಕ್ಷೆ ಮಮತಾ, ಉಪಾಧ್ಯಕ್ಷ ರಾಮಲಿಂಗಂ ಸೇರಿದಂತೆ ಗ್ರಾಪಂ ಸದಸ್ಯರು ಗೋವಿಗೆ ಪೂಜೆ ಸಲ್ಲಿಸುವ ಮೂಲಕ ಅನ್ನ ದಾನಕ್ಕೆ ಚಾಲನೆ ನೀಡಿದರು. ವಿದ್ಯುತ್ ದೀಪಾಲಂಕಾರದ ಭವ್ಯ ಮಂಟಪದಲ್ಲಿ ಬೆಳ್ಳಿ ಬಸವನ ಉತ್ಸವ ಕೇರಳದ ಚಂಡೆ, ಬ್ಯಾಂಡ್ ಸೆಟ್, ಮಂಗಳವಾದ್ಯದೊಂದಿಗೆ ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ರಾತ್ರಿ ಯಿಡೀ ಮೆರವಣಿಗೆ ಮಾಡಲಾಯಿತು. ಭಕ್ತರು ದೇವರಿಗೆ ಪೂಜೆ ಸಲ್ಲಿಸಿ ಪುನೀತರಾದರು.



ವ್ಯಾಪಾರಸ್ಥರಿಗೆ ಸ್ಥಳ ನಿಗದಿಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿ

ಅಧಿಕಾರಿಗಳೊಂದಿಗೆ ಪುರಸಭಾ ಅಧ್ಯಕ್ಷರಿಂದ ಪಾದಯಾತ್ರೆ



ಕೆ.ಆರ್.ನಗರ, ಏ.22(ಕೆಟಿಆರ್)– ತರಕಾರಿ ಮಾರುಕಟ್ಟೆಗೆ ನಿಗದಿತ ಸ್ಥಳವಿಲ್ಲದೇ ಬಜಾರ್ ರಸ್ತೆ, ಪ್ರವಾಸಿ ಮಂದಿರ, ಭಾರತಿ ವಿದ್ಯಾಮಂದಿರ ರಸ್ತೆ, ಕೃಷಿ ಇಲಾಖೆ ಮುಂಭಾಗ ಸೇರಿದಂತೆ ಎಲ್ಲೆಂದರಲ್ಲಿ ತರಕಾರಿ ವ್ಯಾಪಾರ ಮಾಡುತ್ತಿರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುವುದನ್ನು ಮನಗಂಡ ಪುರಸಭೆ ಅಧ್ಯಕ್ಷ ಪ್ರಕಾಶ್ ಅಧಿಕಾರಿಗಳೊಂದಿಗೆ ಪಟ್ಟಣದಲ್ಲಿ ಸಂಚರಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ವ್ಯಾಪಾರ ಮಾಡಬೇಕು ಎಂದು ಸೂಚಿಸಿದರು.

ಪುರಸಭೆ ಅಧಿಕಾರಿಗಳು ವ್ಯಾಪಾರಸ್ಥರಿಗೆ ಸ್ಥಳ ನಿಗದಿ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಬೇಕು. ಜೊತೆಗೆ ತಳ್ಳುವ ಗಾಡಿಯಲ್ಲಿ ವ್ಯಾಪಾರ ಮಾಡುವವರು ಸಂಜೆ ತಮ್ಮ ಗಾಡಿಗಳನ್ನು ಮನೆಗೆ ಕೊಂಡೊಯ್ಯಬೇಕು. ವ್ಯಾಪಾರ ಮಾಡುವ ಸ್ಥಳದಲ್ಲೇ ಬಿಟ್ಟು ಹೋದರೆ ಮಾಲು ಸಮೇತ ಗಾಡಿಯನ್ನು ಪುರಸಭೆ ವಶಕ್ಕೆ ಪಡೆಯಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅಧ್ಯಕ್ಷ ಪ್ರಕಾಶ್, ಬೀದಿ ಬದಿ ವ್ಯಾಪಾರಿಗಳು ಸೇರಿದಂತೆ ವರ್ತಕರು ತಮ್ಮ ಅಂಗಡಿಗಳ ವ್ಯಾಪ್ತಿಯನ್ನು ಬಿಟ್ಟು ಸಾರ್ವಜನಿಕ ರಸ್ತೆಯವರೆಗೆ ಸಾಮಗ್ರಿಗಳನ್ನು ಇಡಬಾರದು ಎಂದು ಮನವಿ ಮಾಡಿದರಲ್ಲದೆ, ಪುರಸಭೆ ಕಸ ಸಂಗ್ರಹಣೆ ವಾಹನ ಬಂದಾಗ ತ್ಯಾಜ್ಯ ಹಾಕುವ ಮೂಲಕ ಸ್ವಚ್ಛತೆ ಕಾಪಾಡಲು ಆದ್ಯತೆ ನೀಡಬೇಕು ಎಂದರು. ಪಟ್ಟಣದ 23 ವಾರ್ಡ್‌ಗಳಿಗೂ ಒಂದೊಂದು ದಿನ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸುವ ಜತೆಗೆ ಬೀದಿದೀಪ, ಕುಡಿಯುವ ನೀರು ಸರಬರಾಜು ಸೇರಿದಂತೆ ಸ್ವಚ್ಛತೆ ಮತ್ತು ನೈರ್ಮಲ್ಯ ಪರಿಶೀಲಿಸಿ ಅಗತ್ಯ ಕ್ರಮ ವಹಿಸ ಲಾಗುವುದು. ಇದಕ್ಕೆ ಪಟ್ಟಣದ ಜನತೆ ಸಹಕಾರ ನೀಡಬೇಕು ಎಂದರು. ಪುರಸಭೆ ಸದಸ್ಯ ಬಿ.ಎಸ್.ತೋಂಟದಾರ್ಯ, ಮುಖ್ಯಾಧಿಕಾರಿ ಡಿ.ಪುಟ್ಟರಾಜು, ಆರೋಗ್ಯ ನಿರೀಕ್ಷಕ ಲೋಕೇಶ್, ಲೀಲಾ, ಪರಿಸರ ಅಭಿಯಂತರ ರೀಟಾಸಿಂಗ್, ಯೋಗೇಶ್‌ಕುಮಾರ್, ಕೃಷ್ಣಮೂರ್ತಿ ಇದ್ದರು.

ಬಟ್ಲರ್ ಶತಕ: ಆರ್‌ಆರ್‌ಗೆ ರೋಚಕ ಗೆಲುವು


ಮುಂಬೈ, ಏ.22– ಜೋಸ್ ಬಟ್ಲರ್ ಭರ್ಜರಿ ಶತಕದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 15 ರನ್‌ಗಳ ರೋಚಕ ಗೆಲುವು ಸಾಧಿಸಿದೆ. ಈ ಗೆಲುವಿನೊಂದಿಗೆ ಆಡಿರುವ 7 ಪಂದ್ಯಗಳಲ್ಲಿ 5ನೇ ಗೆಲುವು ದಾಖಲಿಸಿರುವ ಸಂಜು ಸ್ಯಾಮ್ಸನ್ ಪಡೆ ಒಟ್ಟು 10 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಅತ್ತ ಡೆಲ್ಲಿ ಅಷ್ಟೇ ಪಂದ್ಯಗಳಲ್ಲಿ 4ನೇ ಸೋಲಿಗೆ ಒಳಗಾಗಿದೆ.



ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್‌ಗೆ ಆರಂಭಿಕರಾದ ಕನ್ನಡಿಗ ದೇವದತ್ ಪಡಿಕ್ಕಲ್ ಹಾಗೂ ಜೋಸ್ ಬಟ್ಲರ್ ಮೊದಲ ವಿಕೆಟ್‌ಗೆ 155 ರನ್‌ಗಳ ಭರ್ಜರಿ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಪಂದ್ಯದ ಆರಂಭದಿಂದಲೂ ಬಿರುಸಿನ ಬ್ಯಾಟಿಂಗ್ ಮಾಡಿದ ಬಟ್ಲರ್ 36 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದರು. ಬಟ್ಲರ್‌ಗೆ ಉತ್ತಮ ಸಾಥ್ ನೀಡಿದ ಪಡಿಕ್ಕಲ್ 31 ಎಸೆತಗಳಲ್ಲಿ ಫಿಫ್ಟಿ ಬಾರಿಸಿದರು. ಇದರ ಹಿಂದೆಯೇ 35 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಒಳಗೊಂಡ 54 ರನ್ ಗಳಿಸಿದ್ದ ದೇವದತ್ ಪಡಿಕ್ಕಲ್ ವಿಕೆಟ್ ಒಪ್ಪಿಸಿದರು. ಅತ್ತ ಆಕ್ರಮಣಕಾರಿ ಆಟವಾಡಿದ ಬಟ್ಲರ್ 57 ಎಸೆತಗಳಲ್ಲಿ ಶತಕ ಸಾಧನೆ ಮಾಡಿದರು. ಈ ಮೂಲಕ ಪ್ರಸಕ್ತ ಸಾಲಿನಲ್ಲಿ 3ನೇ ಹಾಗೂ ಒಟ್ಟಾರೆ ಐಪಿಎಲ್‌ನಲ್ಲಿ 4ನೇ ಶತಕ ಗಳಿಸಿದರು. ಬಟ್ಲರ್ ಜೊತೆಗೂಡಿದ ನಾಯಕ ಸಂಜು ಸ್ಯಾಮ್ಸನ್ ಬಿರುಸಿನ ಆಟವಾಡುವ ಮೂಲಕ 46 ರನ್‌ಗಳ ಉಪಯುಕ್ತ ಇನ್ನಿಂಗ್ಸ್ ಕಟ್ಟಿದರು. 65 ಎಸೆತಗಳಲ್ಲಿ ತಲಾ 9 ಬೌಂಡರಿ, ಸಿಕ್ಸರ್ ಒಳಗೊಂಡ 116 ರನ್ ಸಿಡಿಸಿದ್ದ ಬಟ್ಲರ್ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ಅಂತಿಮವಾಗಿ ರಾಜಸ್ಥಾನ್ ನಿಗದಿತ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 222 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಡೆಲ್ಲಿ ಪರ ಖಲೀಲ್ ಅಹಮ್ಮದ್, ಮುಸ್ತಾಫಿಜರ್ ರೆಹಮಾನ್ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.

223 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಡೆಲ್ಲಿಗೆ ಪೃಥ್ವಿ ಶಾ ಹಾಗೂ ಡೇವಿಡ್ ವಾರ್ನರ್ ಬಿರುಸಿನ ಆರಂಭವೊದಗಿಸಿದರು. ಆದರೆ 28ರನ್ ಗಳಿಸಿದ್ದ ವಾರ್ನರ್ ನಿರ್ಗಮಿಸಿದರು. ನಂತರ ಬಂದ ಸರ್ಫರಾಜ್ ಖಾನ್ 1 ರನ್ ಗಳಿಸಿ ಔಟಾಗುವ ಮೂಲಕ ನಿರಾಸೆ ಮೂಡಿಸಿದರು. ಮತ್ತೊಂದೆಡೆ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಪೃಥ್ವಿ ಶಾ 37 ಗಳಿಸಿ ಪೆವಿಲಿಯನ್ ಸೇರಿಕೊಂಡರು. ಬಳಿಕ ಬಂದ ರಿಷಬ್ ಪಂತ್ ದಿಟ್ಟ ಹೋರಾಟ ನಡೆಸಿದರಾದರೂ 44 ರನ್ ಪೇರಿಸಿ ಹೊರ ನಡೆದರು. ಕೊನೆ ಹಂತದಲ್ಲಿ ಲಲಿತ್ ಯಾದವ್ 37, ಶಾರ್ದೂಲ್ ಠಾಕೂರ್ 10 ರನ್ ಗಳಿಸಿದರು. ಇನ್ನಿಂಗ್ಸ್‌ನ ಅಂತಿಮ ಓವರ್‌ನಲ್ಲಿ ನಡೆದ ನಾಟಕೀಯ ಬೆಳವಣಿಗೆ ಮತ್ತಷ್ಟು ರೋಚಕತೆಗೆ ಸಾಕ್ಷಿಯಾಗಿತ್ತು. ಅಂಪೈರ್ ನೋ ಬಾಲ್ ತೀರ್ಪು ನೀಡದಿರುವುದು ಡೆಲ್ಲಿ ತಂಡದ ಆಕ್ರೋಶಕ್ಕೆ ಕಾರಣವಾಗಿತ್ತು. ಆದರೂ ಕೊನೆಯ ಓವರ್‌ನಲ್ಲಿ ರೋವ್ಮನ್ ಪೋವೆಲ್ ಸತತ 3 ಸಿಕ್ಸರ್ ಬಾರಿಸಿದರೂ ಗೆಲುವು ದಾಖಲಿಸಲು ಸಾಧ್ಯವಾಗಲಿಲ್ಲ. ಪೊವೆಲ್ 36 ರನ್ ಗಳಿಸಿದರು. ಅಂತಿಮವಾಗಿ ಡೆಲ್ಲಿ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 207 ರನ್ ಗಳಿಸಲಷ್ಟೇ ಶಕ್ತವಾಯಿತು. ರಾಜಸ್ಥಾನ್ ಪರ ಪ್ರಸಿದ್ಧ ಕೃಷ್ಣ 3, ಅಶ್ವಿನ್ 2, ಚಹಲ್ ಹಾಗೂ ಮೆಕಾಯ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಜೋಸ್ ಬಟ್ಲರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಶಿವಾರ್ಚಕ ಸುಬ್ಬಣ್ಣ ನಿಧನ



ನಂಜನಗೂಡು, ಏ.22– ನಂಜನಗೂಡು ತಾಲೂಕು ಅಂಬಳೆ ಗ್ರಾಮದ ನಿವಾಸಿ ಶಿವಾರ್ಚಕ ಸುಬ್ಬಣ್ಣ(86) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದು, ಅಂತ್ಯಕ್ರಿಯೆ ಏ.23ರಂದು ಬೆಳಗ್ಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಚಿತ ಬೇಸಿಗೆ ಶಿಬಿರ

ಮೈಸೂರು, ಏ.22– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ತಿ.ನರಸೀಪುರ ತಾಲೂಕಿನಲ್ಲಿ 5 ರಿಂದ 16 ವರ್ಷದ ಮಕ್ಕಳಿಗೆ ಏ.28 ರಿಂದ ಮೇ 7 ರವರೆಗೆ ಬೇಸಿಗೆ ಶಿಬಿರವನ್ನು ಸ್ತ್ರೀಶಕ್ತಿ ಭವನದಲ್ಲಿ ಏರ್ಪಡಿಸಲಾಗಿದೆ.

ಸಮೂಹ ನೃತ್ಯ, ಚಿತ್ರಕಲೆ, ಸಮೂಹ ಗೀತೆ, ಯೋಗ, ಕರ ಕುಶಲ ಕಲೆ ಚಟುವಟಿಕೆ ಗಳೊಂದಿಗೆ ಶಿಬಿರವನ್ನು ಏರ್ಪಡಿಸಲಾಗಿದ್ದು, ಆಸಕ್ತಿ ಇರುವ ಮಕ್ಕಳ ಪೋಷಕರು ಕಚೇರಿಯ ವೇಳೆಯಲ್ಲಿ ಬಂದು ಹೆಸರನ್ನು ನೋಂದಾಯಿಸಿ ಕೊಳ್ಳಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂಖ್ಯೆ: 08227–261267, 7892138051 ಅನ್ನು ಸಂಪರ್ಕಿಸುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.